ಸೋಮವಾರ, ಮಾರ್ಚ್ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 76 | ಪುಟ 12

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂಗಳೂರು ಸಿಸಿಬಿ ಪೊಲೀಸರ ಕಾರ್ಯಾಚರಣೆ; ಇಬ್ಬರು ವಿದೇಶಿ ಮಹಿಳೆಯರ ಬಂಧನ

₹75 ಕೋಟಿ ಮೌಲ್ಯದ ಡ್ರಗ್ಸ್ ವಶ

ಪ್ರಜಾವಾಣಿ ವಾರ್ತೆ

ಮಂಗಳೂರು: ನಿಷೇಧಿತ ಮಾದಕ ಪದಾರ್ಥ ಎಂಡಿಎಂಎ ಮಾರಾಟ ಜಾಲವನ್ನು ಭೇದಿಸಿದ ನಗರ ಸಿಸಿಬಿ ಪೊಲೀಸರು, ದಕ್ಷಿಣ ಆಫ್ರಿಕಾದ ಇಬ್ಬರು ಮಹಿಳಾ ಪ್ರಜೆಗಳನ್ನು ಬಂಧಿಸಿ ಅವರಿಂದ 37.87 ಕೆ.ಜಿ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ. ಅದರ ಮೌಲ್ಯ ₹75 ಕೋಟಿ ಎಂದು ಅಂದಾಜಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಈ ಮಾಹಿತಿ ನೀಡಿದ ನಗರ ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್, ‘ರಾಜ್ಯದಲ್ಲಿ ಪೊಲೀಸರು ಇಷ್ಟೊಂದು ಪ್ರಮಾಣದಲ್ಲಿ ಎಂಡಿಎಂಎ ವಶಪಡಿಸಿಕೊಂಡಿದ್ದು ಇದೇ ಮೊದಲು’ ಎಂದರು.

‘ದಕ್ಷಿಣ ಆಫ್ರಿಕಾದ ಬಾಂಬಾ ಫಾಂಟಾ ಅಲಿಯಾಸ್ ಅಡ್ನೋಯಿಸ್ ಜಾಬುಲಿಲೆ (31) ಹಾಗೂ ಅಬಿಗೇಲ್ ಅಡ್ನೋಯಿಸ್ ಅಲಿಯಾಸ್ ಒಲಿಜೊ ಇಯಾನ್ಸ್ (30) ಬಂಧಿತರು. ದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಪ್ರಯಾಣಿಸಿದ್ದ ಅವರನ್ನು ಮಾ.14ರಂದು ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ನಗರದಲ್ಲಿ ವಶಕ್ಕೆ ಪಡೆದಿದ್ದೇವೆ’ ಎಂದು ಮಾಹಿತಿ ನೀಡಿದರು.

‘ನಗರದ ಪೂರ್ವ ಠಾಣೆಯ ವ್ಯಾಪ್ತಿಯ ಪಂಪ್‌ವೆಲ್ ಬಳಿ ವಸತಿಗೃಹವೊಂದರಲ್ಲಿ ಮಾದಕ ವಸ್ತು ಮಾರಾಟ ದಂಧೆಯಲ್ಲಿ ತೊಡಗಿದ್ದ ಆರೋಪಿ ಹೈದರ್ ಆಲಿಯನ್ನು ಕೆಲ ದಿನಗಳ ಹಿಂದೆ ಸಿಸಿಬಿ ಪೊಲೀಸರು ಬಂಧಿಸಿ, ಆತನಿಂದ 15 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದರು. ಆತ ನೀಡಿದ ಮಾಹಿತಿ ಆಧಾರದಲ್ಲಿ ನೈಜೀರಿಯಾ ಪ್ರಜೆ ಪೀಟರ್ ಐಕೆಡಿ ಬೆಲೊನೊವು ಎಂಬಾತನನ್ನು ಬೆಂಗಳೂರಿನಲ್ಲಿ ಬಂಧಿಸಿ ಆತನಿಂದ 6.248 ಕೆ.ಜಿ ಎಂಡಿಎಂಎ ವಶಪಡಿಸಿಕೊಂಡಿದ್ದೆವು. ಆತನ ವಿಚಾರಣೆ ನಡೆಸಿದಾಗ ಬೆಂಗಳೂರು ನಗರಕ್ಕೆ ದೆಹಲಿಯಿಂದ ಹಾಗೂ ವಿದೇಶಿ ಮೂಲಗಳಿಂದ ಭಾರಿ ಪ್ರಮಾಣದಲ್ಲಿ ಮಾದಕ ಪದಾರ್ಥ ಪೂರೈಕೆಯಾಗುತ್ತಿರುವುದು ಗೊತ್ತಾಗಿತ್ತು’ ಎಂದರು.

‘ಪೀಟರ್ ಐಕೆಡಿ ಬೆಲೊನೊವುಗೆ ಬಾಂಬಾ ಫಾಂಟಾ ಹಾಗೂ ಒಲಿಜೊ ಇಯಾನ್ಸ್ ಇವರು ಮಾದಕ ಪದಾರ್ಥ ಪೂರೈಸುತ್ತಿದ್ದುದು ಗೊತ್ತಾಯಿತು. ಈ ಮಹಿಳೆಯರು ಆರು ತಿಂಗಳಲ್ಲಿ 59 ಸಲ ದೆಹಲಿ ಹಾಗೂ ಬೆಂಗಳೂರು ನಡುವೆ ವಿಮಾನದಲ್ಲಿ ಪ್ರಯಾಣಿಸಿದ್ದರು’ ಎಂದರು.

9ನೇ ಪುಟ ನೋಡಿ



ಅಬಿಗೇಲ್



ಬಾಂಬಾ

> **ಮಂಗಳೂರು ನಗರ ಪೊಲೀಸರ ಕಾರ್ಯಾಚರಣೆ ಶ್ಲಾಘನೀಯ. ಡ್ರಗ್ಸ್ ಜಾಲವನ್ನು ಬೇರುಸಹಿತ ಕಿತ್ತೊಗೆಯುವುದು ಸರ್ಕಾರದ ಗುರಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ



ಏನೇನು ವಶ?

- ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಬಳಿ ನೀಲಾದ್ರಿ ನಗರದಲ್ಲಿ ವಶಕ್ಕೆ
- 4 ಮೊಬೈಲ್, 2 ಪಾಸ್‌ಪೋರ್ಟ್, ₹18,460 ನಗದು ವಶ
- ನವದೆಹಲಿ- ಬೆಂಗಳೂರು ನಡುವೆ 6 ತಿಂಗಳಲ್ಲಿ 59 ಸಲ ಪ್ರಯಾಣ

ಪಾಸ್‌ಪೋರ್ಟ್ ನಕಲಿ



‘ಬಾಂಬಾ ಫಾಂಟಾ ಎಂಬಾಕೆ ಅಡ್ನೊಯಿಸ್ ಜಾಬುಲಿಲೆ ಎಂಬ ನಕಲಿ ಹೆಸರಿನಲ್ಲಿ ಪಾಸ್‌ಪೋರ್ಟ್ ಪಡೆದು, ಬಿಜಿನೆಸ್ ವೀಸಾದಲ್ಲಿ 2020ರಲ್ಲಿ ಭಾರತಕ್ಕೆ ಬಂದಿದ್ದಳು. ಇಲ್ಲಿ ಫುಡ್ ಕಾರ್ಟ್ ವ್ಯವಹಾರ ನಡೆಸುತ್ತಿದ್ದಳು. ನವದೆಹಲಿಯ ನಾವ್ದಾದ ಲಕ್ಷ್ಮೀವಿಹಾರ್‌ನಲ್ಲಿ ವಾಸವಿದ್ದಳು. ಒಲಿಜೊ ಇಯಾನ್ಸ್ ನವದೆಹಲಿಯ ಮಾಳವೀಯ ನಗರದಲ್ಲಿ ವಾಸವಿದ್ದಳು. ಈಕೆ ಮೆಡಿಕಲ್ ವೀಸಾದಲ್ಲಿ ಭಾರತಕ್ಕೆ 2016ರಲ್ಲಿ ಬಂದಿದ್ದು, ಬಳಿಕ ಬಟ್ಟೆ ವ್ಯಾಪಾರ ಮಾಡಿಕೊಂಡಿದ್ದಳು. ಇವರಿಬ್ಬರೂ ಮಾದಕ ವಸ್ತು ದಂಧೆಯ ಹಣದಿಂದ ಐಷಾರಾಮಿ ಜೀವನ ಸಾಗಿಸುತ್ತಿದ್ದರು’ ಎಂದು ಕಮಿಷನರ್ ತಿಳಿಸಿದರು.

₹88 ಕೋಟಿ ಮೌಲ್ಯದ ಮಾದಕವಸ್ತು ವಶ

ನವದೆಹಲಿ: ಈಶಾನ್ಯ ರಾಜ್ಯದಲ್ಲಿ ಎರಡು ಪ್ರತ್ಯೇಕ ಕಾರ್ಯಾಚರಣೆ ನಡೆಸಿದ ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸುಮಾರು ₹88 ಕೋಟಿ ಮೌಲ್ಯದ 110 ಕೆ.ಜಿ ನಿಷೇಧಿತ ಮೆಥಾಂಫೆಟಮೈನ್ ಮಾತ್ರೆಗಳನ್ನು ವಶಪಡಿಸಿಕೊಂಡಿದ್ದಾರೆ.

ಮಣಿಪುರದ ಲಿಲಾಂಗ್ ಹಾಗೂ ಅಸ್ಸಾಂ- ಮಿಜೋರಾಂ ಗಡಿಯ ಸಿಲ್ಚರ್‌ನಲ್ಲಿ ನಡೆಸಿದ ಕಾರ್ಯಾಚರಣೆಗಳಲ್ಲಿ ಮಾತ್ರೆಗಳನ್ನು ವಶಪಡಿಸಿಕೊಳ್ಳುವುದರ ಜತೆ ನಾಲ್ವರು ಮಾದಕವಸ್ತು ಕಳ್ಳಸಾಗಣೆದಾರರನ್ನು ಬಂಧಿಸಲಾಗಿದೆ ಎಂದು ಎನ್‌ಸಿಬಿ ಪ್ರಕಟಣೆ ತಿಳಿಸಿದೆ.

ಖಚಿತ ಮಾಹಿತಿ ಮೇರೆಗೆ ಇಂಫಾಲ್ ವಲಯದ ಅಧಿಕಾರಿಗಳು ಮಾರ್ಚ್ 13ರಂದು ಮೊದಲ ಕಾರ್ಯಾಚರಣೆ ನಡೆಸಿದ್ದಾರೆ. ಲಿಲಾಂಗ್ ಬಳಿ ಟ್ರಕ್‌ವೊಂದನ್ನು ತಡೆದು ಶೋಧ ನಡೆಸಿದಾಗ 102.39 ಕೆ.ಜಿ ಮೆಥಾಂಫೆಟಮೈನ್ ಮಾತ್ರೆಗಳು ಪತ್ತೆಯಾಗಿವೆ. ಮಾತ್ರೆಗಳನ್ನು ಟ್ರಕ್‌ನ ಟೂಲ್‌ಬಾಕ್ಸ್‌ನಲ್ಲಿ ಇಡಲಾಗಿತ್ತು. ಎನ್‌ಸಿಬಿ ಗುವಾಹಟಿ ವಲಯದ ಅಧಿಕಾರಿಗಳು ಅದೇ ದಿನ ಸಿಲ್ಚರ್‌ನಲ್ಲಿ ಎಸ್‌ಯುವಿಯೊಂದರಲ್ಲಿ ಸಾಗಿಸುತ್ತಿದ್ದ 7.48 ಕೆ.ಜಿ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

> **ಡ್ರಗ್ಸ್ ಮಾಫಿಯಾ ಬಗ್ಗೆ ಕನಿಕರದ ಪ್ರಶ್ನೆಯೇ ಇಲ್ಲ. ಮಾದಕ ವಸ್ತು ಮುಕ್ತ ಭಾರತ ನಿರ್ಮಾಣದ ಸಂಕಲ್ಪವನ್ನು ಮೋದಿ ನೇತೃತ್ವದ ಸರ್ಕಾರ ಹೊಂದಿದೆ**
> **ಅಮಿತ್ ಶಾ,** ಗೃಹ ಸಚಿವ



ಗಾಡಿ ಓಟ... ಚಿಕ್ಕಮಗಳೂರು ಬಳಿಯ ನರಗನಹಳ್ಳಿಯಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಸ್ಪರ್ಧಿಯೊಬ್ಬರು ವೇಗವಾಗಿ ಗಾಡಿ ಓಡಿಸಿ ನೋಡುಗರಲ್ಲಿ ರೋಮಾಂಚನ ಮೂಡಿಸಿದರು – ಪಿಟಿಐ ಚಿತ್ರ

‘ಪೋಷಕರ ಆರೈಕೆ ಮಾಡದಿದ್ದರೆ ಆಸ್ತಿ ದಕ್ಕದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮ್ಮ ಹೆಸರಿಗೆ ಆಸ್ತಿ ಬರೆಯಿಸಿಕೊಂಡು ಚಿಕಿತ್ಸೆ ನೆಪದಲ್ಲಿ ವೃದ್ಧ ಪೋಷಕರನ್ನು ಆಸ್ಪತ್ರೆಯಲ್ಲಿ ಬಿಟ್ಟು ಮಕ್ಕಳು ನಾಪತ್ತೆಯಾಗುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಿವೆ. ಅಂತಹ ಪೋಷಕರು ತಮ್ಮ ಮಕ್ಕಳ ಪರವಾಗಿ ಮಾಡಿರುವ ವಿಲ್ ಅಥವಾ ಆಸ್ತಿ ವರ್ಗಾವಣೆಗಳನ್ನು ರದ್ದುಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು’ ಎಂದು ಉನ್ನತ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ ವಿವಿಧ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ಸೂಚನೆ ನೀಡಿದ್ದಾರೆ.



ಶರಣಪ್ರಕಾಶ್ ಪಾಟೀಲ

‘ಇಂತಹ ಪ್ರಕರಣಗಳು ಕಂಡುಬಂದ ತಕ್ಷಣವೇ ಸಂಬಂಧಪಟ್ಟ ಕಂದಾಯ ಉಪ ವಿಭಾಗಾಧಿಕಾರಿಗಳಿಗೆ ವೈದ್ಯಕೀಯ ಶಿಕ್ಷಣ ನಿರ್ದೇಶಕರು ದೂರು ನೀಡಬೇಕು. ಪೋಷಕರು ಕೂಡ ತಮ್ಮ ಮಕ್ಕಳ ಪರವಾಗಿ ಮಾಡಿದ ವಿಲ್ ಅಥವಾ ಆಸ್ತಿ ವರ್ಗಾವಣೆಯನ್ನು ರದ್ದುಗೊಳಿಸಬೇಕು’ ಎಂದು ಸಚಿವ ನಿರ್ದೇಶನ ನೀಡಿದ್ದಾರೆ.

9ನೇ ಪುಟ ನೋಡಿ

ಅತ್ತೆ, ಮಾವನ ಮೇಲೆ ಹಲ್ಲೆ: ವೈದ್ಯೆಗೆ ನೋಟಿಸ್

ಅತ್ತೆ ಹಾಗೂ ಮಾವನ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ತುರ್ತು ಚಿಕಿತ್ಸಾ ವೈದ್ಯಾಧಿಕಾರಿ ಡಾ. ಪ್ರಿಯದರ್ಶಿನಿ ಎನ್. ಅವರಿಗೆ ಬಿಎಂಸಿಆರ್‌ಐ ಡೀನ್ ಡಾ. ರಮೇಶ್ ಕೃಷ್ಣ ಶೋಕಾಸ್ ನೋಟಿಸ್ ನೀಡಿದ್ದಾರೆ.

ಡಾ. ಪ್ರಿಯದರ್ಶಿನಿ ಅವರು ಅತ್ತೆ ಹಾಗೂ ಮಾವನ ಮೇಲೆ ಹಲ್ಲೆ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಇದೇ 10ರಂದು ಹಲ್ಲೆ ನಡೆಸಿರುವ ಬಗ್ಗೆ ವೈದ್ಯೆ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

‘ಸಂಬಂಧಿಕರೊಂದಿಗೆ ಗಲಾಟೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ನಿಮ್ಮ ವಿರುದ್ಧ ದೂರು ದಾಖಲಾಗಿದೆ. ನಿಮ್ಮ ವರ್ತನೆಯು ಸರ್ಕಾರಿ ವೈದ್ಯಾಧಿಕಾರಿಗೆ ತಕ್ಕುದಲ್ಲ. ಆದ್ದರಿಂದ ಪ್ರಕರಣದ ಕುರಿತು ಲಿಖಿತ ಸಮಜಾಯಿಷಿ ನೀಡಲು ನೋಟಿಸ್ ನೀಡಲಾಗಿದೆ. ತಪ್ಪಿದ್ದಲ್ಲಿ ಮುಂದಿನ ಶಿಸ್ತು ಕ್ರಮ ಜರುಗಿಸಲಾಗುವುದು’ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ನಾಳೆಯಿಂದ 3 ದಿನ ಬಿಸಿ ಗಾಳಿ ಸಾಧ್ಯತೆ

ಬೆಂಗಳೂರು: ರಾಜ್ಯದ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಇದೇ 18ರಿಂದ 20ರವರೆಗೆ ಬಿಸಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

5

ಬ್ಯಾಂಕ್ ಖಾತೆಯಲ್ಲಿ ಕೋಟ್ಯಂತರ ರೂಪಾಯಿ ವಹಿವಾಟು ಪತ್ತೆ

ಚಿನ್ನ ಮಾರಾಟಕ್ಕೆ ರನ್ಯಾ ಕಂಪನಿ

• ಕೆ.ಎಸ್.ಸುನಿಲ್

ಬೆಂಗಳೂರು: ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟಿ ಹರ್ಷವರ್ಧಿನಿ ರನ್ಯಾ ಮತ್ತು ಸ್ನೇಹಿತ ತರುಣ್ ರಾಜು ಚಿನ್ನ ಆಮದು ಮತ್ತು ಮಾರಾಟಕ್ಕೆ ದುಬೈನಲ್ಲಿ ಕಂಪನಿ ತೆರೆದಿದ್ದಾರೆ. ಅವರಿಗೆ ಚಿನ್ನ ಪೂರೈಕೆದಾರರು ಕೋಟ್ಯಂತರ ರೂಪಾಯಿ ವಂಚಿಸಿದ್ದಾರೆ ಎಂಬುದು ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ತನಿಖೆ ವೇಳೆ ಗೊತ್ತಾಗಿದೆ.

‘ಕಾಲೇಜು ದಿನಗಳಿಂದ ಸ್ನೇಹಿತರಾದ ಇಬ್ಬರೂ ದುಬೈನಲ್ಲಿ ಚಿನ್ನ ಆಮದು ಮತ್ತು ಮಾರಾಟ ವ್ಯವಹಾರದ ಕಂಪನಿ ಆರಂಭಿಸಿದ್ದರು. ಇದಕ್ಕೆ ರನ್ಯಾ ಅವರೇ ಹೆಚ್ಚು ಹೂಡಿಕೆ ಮಾಡಿದ್ದರು. ಚಿನ್ನ ಪೂರೈಕೆದಾರರಿಗೆ ವಿದೇಶಿ ಕರೆನ್ಸಿಯಲ್ಲಿ ಪಾವತಿಸಲಾಗುತ್ತಿತ್ತು. ಒಮ್ಮೆ ಚಿನ್ನ ಪೂರೈಸದೆ ₹1.70 ಕೋಟಿ ಮೋಸ ಮಾಡಲಾಗಿತ್ತು. ಈ ಮೊತ್ತವನ್ನು ರನ್ಯಾ ಅವರು ಹವಾಲಾ ಮೂಲಕ ಭಾರತದಿಂದ ದುಬೈಗೆ ತಲುಪಿಸುವ ವ್ಯವಸ್ಥೆ ಮಾಡಿದ್ದರು ಎಂಬ ವಿಷಯವನ್ನು ವಿಚಾರಣೆ ವೇಳೆ ಅಧಿಕಾರಿಗಳಿಗೆ ತರುಣ್ ತಿಳಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

5ನೇ ಪುಟ ನೋಡಿ



ಎರಡೇ ತಿಂಗಳಲ್ಲಿ 27 ಬಾರಿ ದುಬೈಗೆ

ರನ್ಯಾ ಅವರು ಎರಡೇ ತಿಂಗಳಲ್ಲಿ (2025ರ ಜನವರಿಯಿಂದ ಮಾರ್ಚ್ 3 ರವರೆಗೆ) 27 ಬಾರಿ ದುಬೈಗೆ ಹೋಗಿ ಬಂದಿರುವುದು ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ತನಿಖೆ ವೇಳೆ ಪತ್ತೆಯಾಗಿದೆ.

ನಟಿಯ ದುಬೈ ಪ್ರಯಾಣಕ್ಕೆ ವಿಮಾನದ ಟಿಕೆಟ್ ಕಾಯ್ದಿರಿಸುತ್ತಿದ್ದವರು ಯಾರು? ಖಾತೆಗೆ ಹಣ ವರ್ಗಾವಣೆ ಮಾಡಿರುವುದು ಯಾರು ಎಂಬುದರ ಬಗ್ಗೆ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ. 2023ರಿಂದ ಈವರೆಗೆ ಒಟ್ಟು 52 ಬಾರಿ ರನ್ಯಾ ಅವರು ಬೆಂಗಳೂರು, ಗೋವಾ, ಮುಂಬೈ ಮೂಲಕ ದುಬೈಗೆ ಪ್ರಯಾಣ ಮಾಡಿದ್ದರು. ಈ ಪೈಕಿ 45 ಬಾರಿ ಆ ದಿನವೇ ದುಬೈಗೆ ತೆರಳಿ ವಾಪಸ್ ಭಾರತಕ್ಕೆ ಬಂದಿದ್ದಾರೆ. ದುಬೈ ಪ್ರಯಾಣದ ಜಾಡು ಹಿಡಿದು ಸಾಗಿರುವ ಅಧಿಕಾರಿಗಳು, ಚಿನ್ನ ಕಳ್ಳಸಾಗಣೆಯಲ್ಲಿ ನಟಿ ದೀರ್ಘಕಾಲದ ನಂಟು ಹೊಂದಿರುವುದನ್ನು ಪತ್ತೆ ಮಾಡಿದ್ದಾರೆ.

ನಟಿಯ ಎರಡು ವರ್ಷಗಳ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗಿದ್ದು, ಕೋಟ್ಯಂತರ ರೂಪಾಯಿ ವಹಿವಾಟು ನಡೆದಿದೆ ಹಾಗೂ ಅವರ ಖಾತೆಗೆ ಸಂದಾಯವಾದ ಹಣ ಬೇರೆ ಖಾತೆಗಳಿಗೆ ವರ್ಗಾವಣೆ ಆಗಿರುವುದನ್ನು ತನಿಖಾ ತಂಡ ಪತ್ತೆ ಮಾಡಿದೆ. ಚಿನ್ನ ಕಳ್ಳಸಾಗಣೆ ಹಿಂದೆ ದೊಡ್ಡ ‘ಸಿಂಡಿಕೇಟ್’ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದ್ದು, ಆರೋಪಿಗೆ ಅಂತರರಾಷ್ಟ್ರೀಯ ಕಳ್ಳಸಾಗಣೆ ದಂಧೆ ಸಂಪರ್ಕದ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಭಾರಿ ಪ್ರಮಾಣದ ಚಿನ್ನ ಕಳ್ಳಸಾಗಣೆ ನಡೆದಿರುವ ಈ ಪ್ರಕರಣದಲ್ಲಿ ಹವಾಲಾ ದಂಧೆ ನಡೆದಿದೆ ಎಂದು ಮೂಲಗಳು ಹೇಳಿವೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಿದ್ಯಾರ್ಥಿ ಸಾವು, 29 ಮಕ್ಕಳು ಅಸ್ವಸ್ಥ

ಪ್ರಜಾವಾಣಿ ವಾರ್ತೆ

> **ಉದ್ಯಮಿ ನೀಡಿದ್ದ ಊಟ ಸೇವಿಸಿದ್ದ ಮಕ್ಕಳು**

ಮಳವಳ್ಳಿ (ಮಂಡ್ಯ ಜಿಲ್ಲೆ): ಇಲ್ಲಿನ ಉದ್ಯಮಿ ಪುಷ್ಪೇಂದ್ರಕುಮಾರ್ ಕಳುಹಿಸಿದ್ದ ಊಟ ಸೇವಿಸಿ ಅಸ್ವಸ್ಥಗೊಂಡಿರುವ ತಾಲ್ಲೂಕಿನ ಟಿ.ಕಾಗೇಪುರದ ಗೋಕುಲ ವಿದ್ಯಾಸಂಸ್ಥೆಯ 30 ಮಕ್ಕಳ ಪೈಕಿ 6ನೇ ತರಗತಿ ವಿದ್ಯಾರ್ಥಿ, ಮೇಘಾಲಯದ ಕಿರ್ಶನ್ ಲ್ಯಾಂಗ್ (13) ಭಾನುವಾರ ಮೃತಪಟ್ಟು, ಮತ್ತೊಬ್ಬ ವಿದ್ಯಾರ್ಥಿಯ ಸ್ಥಿತಿ ಗಂಭೀರವಾಗಿದೆ.

ಉದ್ಯಮಿಯು ಶುಕ್ರವಾರ ಬೆಳಿಗ್ಗೆ ಹೋಳಿ ಹಬ್ಬ ಆಚರಿಸಿ, ಊಟದ ವ್ಯವಸ್ಥೆ ಮಾಡಿದ್ದರು. ಉಳಿದ ಊಟವನ್ನು ಸಂಜೆ ಗೋಕುಲ ವಿದ್ಯಾಸಂಸ್ಥೆಯಲ್ಲಿದ್ದ ಮಕ್ಕಳಿಗೆ ಕಳುಹಿಸಿದ್ದರು. ವಸತಿ ಶಿಕ್ಷಣ ಸಂಸ್ಥೆಯಾದ ಅಲ್ಲಿ ಮೇಘಾಲಯ ಹಾಗೂ ನೇಪಾಳ ಮೂಲದ 24 ಮತ್ತು 6 ಸ್ಥಳೀಯ ಮಕ್ಕಳು ಕಲಿಯುತ್ತಿದ್ದಾರೆ. ಊಟ ಸೇವಿಸಿದ್ದ ಮಕ್ಕಳು ಶನಿವಾರ ಬೆಳಿಗ್ಗೆ ಅಸ್ವಸ್ಥಗೊಂಡಿದ್ದರು. ಅವರಿಗೆ ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು.

ಭಾನುವಾರ ಬೆಳಿಗ್ಗೆ ಮಕ್ಕಳಲ್ಲಿ ತೀವ್ರ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದ್ದರಿಂದಾಗಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಬಳಿಕ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಾಸಕ ಪಿ.ಎಂ. ನರೇಂದ್ರಸ್ವಾಮಿ, ಜಿಲ್ಲಾಧಿಕಾರಿ ಕುಮಾರ, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿಎಚ್‌ಒ ಡಾ.ಮೋಹನ್, ಮಾಜಿ ಶಾಸಕ ಕೆ.ಅನ್ನದಾನಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ವಿಚಾರಿಸಿದರು.

9ನೇ ಪುಟ ನೋಡಿ

ತರಬೇತಿ ನೀಡುವ ಬದಲು ಅನುಭವಿಗಳು ಬೇಕು ಎಂದ ಬಿಎಂಆರ್‌ಸಿಎಲ್

ಮೆಟ್ರೊ: ಕನ್ನಡಿಗರಿಗೆ ಇಲ್ಲವೇ ನೌಕರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ರೈಲು ಚಾಲಕರ (ಲೋಕೊ ಪೈಲಟ್) ಹುದ್ದೆಗೆ ಬಿಎಂಆರ್‌ಸಿಎಲ್ ನೇಮಕ ಮಾಡಿಕೊಳ್ಳಲು ಮುಂದಾಗಿದೆ. ಆದರೆ, ಬಿಎಂಆರ್‌ಸಿಎಲ್ ವಿಧಿಸಿರುವ ಷರತ್ತು ಕನ್ನಡಿಗರನ್ನು ಹೊರಗಿಡಲಿದೆ.

ಹಿಂದೆ ನೇಮಕಾತಿ ಮಾಡಿಕೊಂಡು ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಅವರು ಆನಂತರ ನುರಿತ ಚಾಲಕರಾಗುತ್ತಿದ್ದರು. ಈ ಬಾರಿ ಆ ಪದ್ಧತಿಯನ್ನು ಬಿಎಂಆರ್‌ಸಿಎಲ್ ಕೈಬಿಟ್ಟಿದೆ. ಎಂಜಿನಿಯರಿಂಗ್ ಟ್ರೇಡ್‌ನಲ್ಲಿ ಡಿಪ್ಲೊಮಾ ಪದವಿ ಪಡೆದಿದ್ದು, ಯಾವುದೇ ಮೆಟ್ರೊದಲ್ಲಿ ಚಾಲಕರಾಗಿ ಮೂರು ವರ್ಷ ಅನುಭವ ಇರುವವರು ಅರ್ಜಿ ಸಲ್ಲಿಸಲು ಅರ್ಹರು ಎಂದು ತಿಳಿಸಿದೆ. ವಿದ್ಯಾರ್ಹತೆಯ ಷರತ್ತು ಸರಿ ಇದೆ. ಆದರೆ, ಅನುಭವ ಬೇಕು ಎಂಬುದೇ ಕನ್ನಡಿಗರು ಅರ್ಜಿ ಹಾಕಲು ತೊಡಕು ಉಂಟು ಮಾಡಿದೆ.



‘50 ಚಾಲಕ ಹುದ್ದೆಗಳ ಭರ್ತಿಗೆ ಬಿಎಂಆರ್‌ಸಿಎಲ್ ಅರ್ಜಿ ಆಹ್ವಾನ ಮಾಡಿದೆ. ಗುತ್ತಿಗೆ ಆಧಾರದಲ್ಲಿ 5 ವರ್ಷಕ್ಕೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಕೆಲಸದ ಬದ್ಧತೆಯ ಮೇರೆಗೆ ಮುಂದುವರಿಸುವ ಅವಕಾಶ ಇದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಮೂರು ವರ್ಷ ಅನುಭವ ಇರಬೇಕು ಎಂದರೆ ಅವರು ಚೆನ್ನೈ, ದೆಹಲಿ, ಮುಂಬೈ, ಹೈದರಾಬಾದ್ ಸಹಿತ ಬೇರೆ ರಾಜ್ಯಗಳಲ್ಲಿ ಮೆಟ್ರೊ ಚಲಾಯಿಸಿದವರಾಗಿರುತ್ತಾರೆ. ಏಕೆಂದರೆ ರಾಜ್ಯದಲ್ಲಿ ಬೆಂಗಳೂರು ಬಿಟ್ಟರೆ ಬೇರೆ ಕಡೆ ಮೆಟ್ರೊ ವ್ಯವಸ್ಥೆ ಇಲ್ಲ’ ಎನ್ನುತ್ತಾರೆ ಬಿಎಂಆರ್‌ಸಿಎಲ್‌ನಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ ಉದ್ಯೋಗಿಗಳು.

4B ಪುಟ ನೋಡಿ

ತಾತ್ಕಾಲಿಕ ವ್ಯವಸ್ಥೆ

ಇವು ಕೇವಲ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ತಾತ್ಕಾಲಿಕ ಹುದ್ದೆಗಳು. ಶಾಶ್ವತವಾಗಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವವರೆಗೆ ನಮ್ಮ ಮೆಟ್ರೊ ಚಾಲಕರ ಕೊರತೆಯನ್ನು ನೀಗಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಸ್ಪಷ್ಟನೆ ನೀಡಿದ್ದಾರೆ.

ಕಾಯಂ ಹುದ್ದೆ ತುಂಬಲು ಅಧಿಸೂಚನೆ ಹೊರಡಿಸಿ ನೇಮಕಾತಿ ಮಾಡಿಕೊಂಡು ತರಬೇತಿ ನೀಡಲು ಒಂದು ವರ್ಷಕ್ಕಿಂತ ಅಧಿಕ ಸಮಯ ಹಿಡಿಯುತ್ತದೆ. ಹಿಂದೆ ನೇಮಕಾತಿ ಮಾಡಿಕೊಂಡಿದ್ದರೂ ಅಗತ್ಯಕ್ಕೆ ಬೇಕಾದಷ್ಟು ಹುದ್ದೆ ತುಂಬಲು ಸಾಧ್ಯವಾಗಿಲ್ಲ ಎಂದು ತಿಳಿಸಿದ್ದಾರೆ.

ಕನ್ನಡಕ್ಕೆ ಬಿಎಂಆರ್‌ಸಿಎಲ್ ಆದ್ಯತೆ ನೀಡುತ್ತದೆ. ಈಗಲೂ ಬೇರೆ ಕಡೆ ಅನುಭವ ಪಡೆದಿರುವ ಕನ್ನಡಿಗರು ಬರುವ ಸಾಧ್ಯತೆಯೂ ಇದೆ. ಅಲ್ಲದೇ ನೇಮಕ ಮಾಡುವ, ಮಾಡಿಕೊಳ್ಳದಿರುವ ಹಕ್ಕನ್ನು ಬಿಎಂಆರ್‌ಸಿಎಲ್ ಕಾಯ್ದಿರಿಸಿಕೊಂಡಿದೆ ಎಂದು ಹೇಳಿದ್ದಾರೆ.



ಸೋಮವಾರದ ಉಷ್ಣಾಂಶ 35° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಶುಭ್ರ ಆಗಸ ಇರಲಿದೆ. ಬಿಸಿಲಿನ ತಾಪವು ಹೆಚ್ಚಾಗಿರಲಿದೆ.

ಮುನ್ಸೂಚನೆ: ಮಂಗಳವಾರ 35° 19° | ಬುಧವಾರ 34° 19° | ಗುರುವಾರ 34° 19°

ಸೂರ್ಯೋದಯ: 6:27 ಸೂರ್ಯಾಸ್ತ : 6:30 | ಚಂದ್ರೋದಯ: ರಾ. 8:08 ಚಂದ್ರಾಸ್ತ: ಬೆ. 7:30 | ಭಾನುವಾರದ ಹವಾಮಾನ : ಗರಿಷ್ಠ 35° ಕನಿಷ್ಠ 19°

ಪ್ರಜಾವಾಣಿ

‘ಎಲ್ಲೆಡೆ ಛಾಪು ಮೂಡಿಸಿದ್ದ ಡಿ.ವಿ.ಜಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿ.ವಿ. ಗುಂಡಪ್ಪ ಅವರು ಸಾಹಿತಿ, ವಿಮರ್ಶಕ, ಕತೆಗಾರ, ಪತ್ರಕರ್ತರಾಗಿ ಎಲ್ಲ ಕ್ಷೇತ್ರಗಳಲ್ಲೂ ಛಾಪು ಮೂಡಿಸಿದ್ದರು’ ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ಹೇಳಿದರು.

ಮೈಸೂರು ಡಿ.ವಿ.ಜಿ ಬಳಗ ಪ್ರತಿಷ್ಠಾನ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸತ್ಯೇಶ್ ಎನ್. ಬೆಳ್ಳೂರ್ ರಚಿಸಿರುವ ‘ಎಲ್ಲರೊಳಗೊಂದಾಗು’ (ಕನ್ನಡ) ಹಾಗೂ ‘ಬಿ ಒನ್ ವಿತ್ ದಿ ಯೂನಿವರ್ಸ್’ (ಇಂಗ್ಲಿಷ್) ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ,‘ಡಿ.ವಿ. ಗುಂಡಪ್ಪ ಅವರ ಸಾಹಿತ್ಯವನ್ನು ಮಕ್ಕಳಿಗೆ ತಲುಪಿಸುವ ಕೆಲಸ ಮಾಡಬೇಕು’ ಎಂದರು.

‘ಇತ್ತೀಚಿನ ದಿನಗಳಲ್ಲಿ ಕೆಲ ಯುವಕರಿಗೆ ಕನ್ನಡ ಮಾತನಾಡಲು ಮಾತ್ರ ಬರುತ್ತದೆ. ಆದರೆ ಓದುವುದಕ್ಕೆ ಬರುವುದಿಲ್ಲ. ಪೋಷಕರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಕನ್ನಡವನ್ನು ಕಲಿಸಬೇಕು’ ಎಂದು ಸಲಹೆ ನೀಡಿದರು.

ರೋಟರಿ ಡಿವಿಜಿ ಅಭಿಮಾನಿಗಳ ಬಳಗದ ನಾ. ಉದಯಶಂಕರ, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್‌ನ ಎಂ. ವಿನಯಕುಮಾರ್ ಅವರನ್ನು ಸನ್ಮಾನಿಸಲಾಯಿತು. ಸತ್ಯೇಶ್ ಎನ್. ಬೆಳ್ಳೂರ್, ಪತ್ರಕರ್ತ ಬಿ.ಎನ್.ಶಶಿಕಿರಣ್, ಚಿತ್ರ ಕಲಾವಿದ ಬಿ.ಜಿ.ಗುಜ್ಜಾರಪ್ಪ, ಡಿವಿಜಿ ಬಳಗ ಪ್ರತಿಷ್ಠಾನದ ಸಂಚಾಲಕ ಸಿ. ಕನಕರಾಜು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಉತ್ತರ ಪ್ರದೇಶ ಪುರೋಹಿತರ ಸಾರಥ್ಯ • 10 ಸಾವಿರ ಜನ ಭಾಗಿಯಾಗುವ ನಿರೀಕ್ಷೆ

ಸ್ಯಾಂಕಿ ಕೆರೆಯಲ್ಲಿ ‘ಕಾವೇರಿ ಆರತಿ’ 21ಕ್ಕೆ

• ನವೀನ್ ಮಿನೇಜಸ್

ಬೆಂಗಳೂರು: ಉದ್ಯಾನ ನಗರಿಯ ಮುಕ್ಕಾಲು ಪಾಲು ಜನರಿಗೆ ಜೀವ ಜಲ ಪೂರೈಸುವ ಕಾವೇರಿ ನದಿಗೆ ಗೌರವ ಸಲ್ಲಿಸುವುದಕ್ಕಾಗಿ ರಾಜ್ಯ ಸರ್ಕಾರ ಇದೇ ಮೊದಲ ಬಾರಿಗೆ ನಗರದ ಸ್ಯಾಂಕಿ ಕೆರೆಯಲ್ಲಿ ‘ಕಾವೇರಿ ಆರತಿ’ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.

ಇದೇ 21 ರಂದು ಸಂಜೆ ಸ್ಯಾಂಕಿ ಕೆರೆಯ ದಂಡೆಯ ಮೇಲೆ 'ಕಾವೇರಿ ಆರತಿ' ನಡೆಯಲಿದೆ. ಬೆಂಗಳೂರು ಜಲಮಂಡಳಿ ಕಾರ್ಯಕ್ರಮ ಆಯೋಜಿಸುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಭಾನುವಾರ ಸ್ಯಾಂಕಿ ಕೆರೆಯ ಆವರಣದಲ್ಲಿ ಪೂರ್ವ ಸಿದ್ಧತಾ ಸಭೆಯನ್ನು ನಡೆಸಿದೆ.

ಉತ್ತರ ಪ್ರದೇಶದ ವಾರಾಣಸಿಯಲ್ಲಿ ನಡೆಯಲಿರುವ 'ಗಂಗಾರತಿ' ಮಾದರಿಯಲ್ಲೇ ಈ ಕಾರ್ಯಕ್ರಮವೂ ನಡೆಯಲಿದ್ದು, ಈ ಧಾರ್ಮಿಕ ಕಾರ್ಯಕ್ರಮಕ್ಕಾಗಿ ಉತ್ತರ ಪ್ರದೇಶದಿಂದ ಪುರೋಹಿತರನ್ನು ಕರೆಸಲು ತೀರ್ಮಾನಿಸಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನೌಕರರ ಕುಟುಂಬಗಳು ಹಾಗೂ ಸಾರ್ವಜನಿಕರು ಸೇರಿ 10 ಸಾವಿರಕ್ಕೂ ಅಧಿಕ ಜನರು ಕಾವೇರಿ ಆರತಿಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.



‘ಕಾವೇರಿ ಆರತಿ’ ಕಾರ್ಯಕ್ರಮಕ್ಕಾಗಿ ಸ್ಯಾಂಕಿ ಕೆರೆಯಲ್ಲಿ ಸಿದ್ಧತೆ ನಡೆಸುತ್ತಿರುವುದು ಚಿತ್ರ: ಪುಷ್ಕರ್ ಕೆ.ವಿ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಹಲವು ಸಚಿವರು ಭಾಗವಹಿಸುವ ಸಾಧ್ಯತೆ ಇದೆ.

ಕಾರ್ಯಕ್ರಮದ ಅಂಗವಾಗಿ ಮೆರವಣಿಗೆ ಮತ್ತು ವಿಶೇಷ ಪೂಜೆ ನಡೆಯಲಿದೆ. ನಂತರ ಭಾಗಮಂಡಲದಲ್ಲಿರುವ ಕಾವೇರಿ, ಕನ್ನಿಕಾ ಮತ್ತು ಸುಜ್ಯೋತಿ ನದಿಗಳ ಸಂಗಮ ತಾಣದಿಂದ ಸಂಗ್ರಹಿಸಿ ತರುವ ಪವಿತ್ರ ಜಲವನ್ನು ‘ತೀರ್ಥ’ವಾಗಿ ವಿತರಿಸಲಾಗುತ್ತದೆ.

ಕಾರ್ಯಕ್ರಮದಲ್ಲಿ ಲೇಸರ್ ಪ್ರದರ್ಶನ ಮತ್ತು ಲೈವ್ ಆರ್ಕೆಸ್ಟ್ರಾ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳಿರುತ್ತವೆ.

ಇದು ಒಂದು ಐತಿಹಾಸಿಕ ಕಾರ್ಯಕ್ರಮ’ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಕಾವೇರಿ ನದಿಯ ಉಪನದಿಯಾಗಿರುವ ವೃಷಭಾವತಿಯ ಉಗಮ ಸ್ಥಾನ ಸ್ಯಾಂಕಿ ಕೆರೆಯಾಗಿರುವ ಕಾರಣದಿಂದಲೂ ಕಾವೇರಿ ಆರತಿಗೆ ಈ ಕೆರೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು. 'ಈ ಕೆರೆ ಸಮೀಪದಲ್ಲಿ ಶ್ರೀಜಲ ಗಂಗಮ್ಮ ತಾಯಿ ದೇವಾಲಯವಿದೆ. ಇದು ವೃಷಭಾವತಿಯ ಉಗಮ ಸ್ಥಾನವೆಂದು ಗುರುತಿಸಲು ನಮ್ಮ ಪೂರ್ವಜರು ದೇವಾಲಯವನ್ನು ಇಲ್ಲಿ ಸ್ಥಾಪಿಸಿದ್ದಾರೆ. ಪ್ರತಿ ವರ್ಷ ಕಾವೇರಿ ಆರತಿಯನ್ನು ಇಲ್ಲಿ ನಡೆಸಲಾಗುತ್ತದೆ' ಎಂದು ರಾಮ್ ಪ್ರಸಾತ್ ಮನೋಹರ್ ಅವರು ತಿಳಿಸಿದರು.

ವೃಷಭಾವತಿ ಉಗಮದ ಮೂಲದ ಬಗ್ಗೆ ಕೆಲವು ವಾದಗಳಿವೆ. ಕೆಲವು ಇತಿಹಾಸಕಾರರು ಬಸವನಗುಡಿಯ ನಂದಿ ಪಾದದಲ್ಲಿ ವೃಷಭಾವತಿ ಉಗಮಿಸುತ್ತದೆ ಎನ್ನುತ್ತಾರೆ. ಕೆಲವರು ಸ್ಯಾಂಕಿ ಕೆರೆಯಲ್ಲೇ ಉಗಮವಾಗುತ್ತದೆ ಎನ್ನುತ್ತಾರೆ.

ಈ ನಡುವೆ ಜಲಮಂಡಳಿ, ಗಾಳಿ ಆಂಜನೇಯಸ್ವಾಮಿ ದೇವಾಲಯದ ಬಳಿ ಕಾವೇರಿ ಆರತಿ ಕಾರ್ಯಕ್ರಮ ನಡೆಸಲು ಯೋಜಿಸಿತ್ತು. ಆದರೆ, ಜಾಗದ ಕೊರತೆ ಹಾಗೂ ಸಮೀಪದಲ್ಲೇ ಚರಂಡಿ ನೀರು ಹರಿಯುತ್ತಿರುವ ಕಾರಣದಿಂದಾಗಿ, ಆ ಯೋಜನೆಯನ್ನು ಜಲಮಂಡಳಿಯು ಕೈಬಿಟ್ಟಿದೆ.

ಸುದ್ದಿ 2 ನಿಮಿಷ

ಶ್ರಮದ ವಿಭಜನೆ ಮನೆಯಲ್ಲೇ ಶುರುವಾಗಲಿ: ಆಶಾದೇವಿ

ಬೆಂಗಳೂರು: ಗಂಡು- ಹೆಣ್ಣಿನ ಶ್ರಮದ ವಿಭಜನೆ ಮನೆಯಲ್ಲೇ ಆರಂಭ ಆಗಬೇಕು ಎಂದು ವಿಮರ್ಶಕಿ ಎಂ.ಎಸ್.ಆಶಾದೇವಿ ಪ್ರತಿಪಾದಿಸಿದರು.

ಆರ್.ಟಿ. ನಗರದ ತರಳಬಾಳು ಕೇಂದ್ರದಲ್ಲಿ ಭಾನುವಾರ ಶಿವರಾಮ ಕಾರಂತ ವೇದಿಕೆ ಆಯೋಜಿಸಿದ್ದ ಮಹಿಳಾ ದಿನಾಚರಣೆಯಲ್ಲಿ 'ಅವಳ ಅರಿವು' ವಿಷಯದ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಹೆಣ್ಣು ಮನೆ ಕೆಲಸವನ್ನು ಅಗತ್ಯಕ್ಕಿಂತ ಜಾಸ್ತಿ ಮಾಡಬಾರದು. ಹೆಣ್ಣಿನ ಕೌಟುಂಬಿಕ ಜವಾಬ್ದಾರಿ, ಮಹತ್ವ ಅಲ್ಲಗಳೆಯುವಂತಿಲ್ಲ. ಅದು ಜತೆಯಲ್ಲಿ ಇರಲಿ. ಆದರೆ, ಅದುವೇ ಎಲ್ಲವೂ ಅಲ್ಲ ಎಂದರು.

‘ಹೆಣ್ಣನ್ನು ಬಹು ಪಾತ್ರಗಳಿಂದ ಛಿದ್ರಗೊಳಿಸಲಾಗಿದೆ. ಹೆಣ್ಣಿಗೆ ನಾನು ಎಂದರೆ ಯಾರು ಎಂಬ ಚಿತ್ರ ಮನಸ್ಸಲ್ಲಿ ಮೂಡಬೇಕು. ಅದೇ ಅರಿವಿನ ನಿಜವಾದ ಪ್ರಯಾಣ’ ಎಂದು ಹೇಳಿದರು.

‘ಗಂಡು ಮತ್ತು ಹೆಣ್ಣು ಪರಸ್ಪರ ಅಹಂಕಾರವನ್ನು ನಿಧಾನವಾಗಿ ಕಳೆದುಕೊಳ್ಳುತ್ತಾ ಅಪ್ಪಟ ಮನುಷ್ಯರಾಗಿ ಮಾನವೀಯ ಪ್ರಯಾಣ ನಡೆಸಬೇಕು’ ಎಂದರು. ಇದೇ ಸಂದರ್ಭದಲ್ಲಿ ಚೇತನಾ ಹೆಗಡೆ ಅವರ ‘ಸ್ತ್ರೀ ಅಸ್ಮಿತೆ- ವಿಭಿನ್ನ ನೆಲೆಗಳು’ ಕೃತಿಯನ್ನು ಅವರು ಬಿಡುಗಡೆ ಮಾಡಿದರು.

ಕೃತಿ ಕುರಿತು ಮಾತನಾಡಿದ ವಿಮರ್ಶಕಿ ಎಲ್.ಜಿ.ಮೀರಾ, ‘ಆಧುನಿಕ ಸಂದರ್ಭದಲ್ಲಿ ಹೆಣ್ಣಿನ ಅಸ್ಮಿತೆಯನ್ನು ಚೇತನಾ ಚೆನ್ನಾಗಿ ವಿವರಿಸಿದ್ದಾರೆ’ ಎಂದರು.

ಈ ಸಂಶೋಧನಾ ಕೃತಿಗೆ ಮಾರ್ಗದರ್ಶಕರಾಗಿದ್ದ ಲೇಖಕಿ ಗೀತಾ ವಸಂತ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯ ಅಧ್ಯಕ್ಷೆ ದೀಪಾ ಫಡ್ಕೆ ಉಪಸ್ಥಿತರಿದ್ದರು.

‘ಕಾಲುವೆ ಒತ್ತುವರಿ ತೆರವು ಮಾಡಿ’



ಪೀಣ್ಯ ದಾಸರಹಳ್ಳಿ: ಯಾವುದೇ ಒತ್ತಡಕ್ಕೆ ಮಣಿಯದೆ ಮಳೆಗಾಲ ಆರಂಭವಾಗುವ ಮುನ್ನವೇ ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸುವಂತೆ ಶಾಸಕ ಎಸ್. ಮುನಿರಾಜು ಬೃಹತ್ ನೀರುಗಾಲುವೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಿಸರ್ಗ ಬಡಾವಣೆಯ ನಿವಾಸಿಗಳ ಕೋರಿಕೆ ಮೇರೆಗೆ ತಗ್ಗು ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಶಾಸಕರು, ನಿವಾಸಿಗಳ ಸಮಸ್ಯೆಯನ್ನು ಆಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ‘ಶಿವರಾಮಕಾರಂತ ಬಡಾವಣೆ ಕಡೆಯಿಂದ ಮಳೆಗಾಲದಲ್ಲಿ ನೀರು ನಮ್ಮ ಬಡಾವಣೆಗೆ ನುಗ್ಗುತ್ತದೆ. ಕಳೆದ ವರ್ಷ ತುಂಬಾ ಸಮಸ್ಯೆಯಾಗಿತ್ತು’ ಎಂದು ನಿವಾಸಿಗಳು ಶಾಸಕರಿಗೆ ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ‘ಸರ್ವೆ ಮಾಡಿ ರಾಜಕಾಲುವೆ ಅಗಲಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಹಾಗೇಯೇ ಬಿಡಿಎ ಲೇಔಟ್‌ನಿಂದ ಬರುವ ನೀರನ್ನು ಬಿಬಿಎಂಪಿ ವ್ಯಾಪ್ತಿಗೆ ಬರದಂತೆ ತಡೆಯಲು ಮತ್ತೊಂದು ರಾಜಕಾಲುವೆ ನಿರ್ಮಾಣಕ್ಕಾಗಿ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಒಳಮೀಸಲಾತಿ ಪಾದಯಾತ್ರೆ: ಇಬ್ಬರು ಅಸ್ವಸ್ಥ

ತುಮಕೂರು: ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ದಾವಣಗೆರೆ ಹರಿಹರದಿಂದ ಹಮ್ಮಿಕೊಂಡಿರುವ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಇಬ್ಬರು ಅಸ್ವಸ್ಥರಾಗಿದ್ದಾರೆ.

ಭಾನುವಾರ ಬಿಜಿಎಸ್ ವೃತ್ತದ ಬಳಿ ನಡೆದ ಬಹಿರಂಗ ಸಭೆ ನಂತರ ರಾಯಚೂರು ಜಿಲ್ಲೆಯ ಸುರೇಶ್ (40), ಎಲಿಯಾಸ್ (26) ಅಸ್ವಸ್ಥರಾದರು. ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು.

‘ಚಂದ್ರಯಾನ–5’ಕ್ಕೆ ಒಪ್ಪಿಗೆ

ಚೆನ್ನೈ(ಪಿಟಿಐ): ಮಹತ್ವಾಕಾಂಕ್ಷೆಯ ‘ಚಂದ್ರಯಾನ–5’ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಇತ್ತೀಚೆಗೆ ಒಪ್ಪಿಗೆ ನೀಡಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಭಾನುವಾರ ಹೇಳಿದ್ದಾರೆ.



ನಾರಾಯಣನ್

ಇಸ್ರೊ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಪ್ರಯುಕ್ತ ಇಲ್ಲಿ ತಮಗೆ ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡುವ ವೇಳೆ ಅವರು ಈ ವಿಷಯ ತಿಳಿಸಿದ್ದಾರೆ.

‘ಚಂದಿರನ ಅಂಗಳದ ಅಧ್ಯಯನಕ್ಕಾಗಿ, ಚಂದ್ರಯಾನ–3ರ ಗಗನನೌಕೆ 25 ಕೆ.ಜಿ ಭಾರದ ರೋವರ್ (ಪ್ರಗ್ಯಾನ್) ಹೊತ್ತೊಯ್ದಿತ್ತು. ಚಂದ್ರನ ಮೇಲ್ಮೈ ಅಧ್ಯಯನ ಉದ್ದೇಶದ ಚಂದ್ರಯಾನ–5ರ ಗಗನನೌಕೆ 250 ಕೆ.ಜಿ ಭಾರದ ರೋವರ್ ಒಯ್ಯಲಿದೆ’ ಎಂದು ಹೇಳಿದ್ದಾರೆ.

‘ಚಂದ್ರಯಾನ–2ರ ಗಗನನೌಕೆಯಲ್ಲಿ ಅಳವಡಿಸಿದ್ದ ಕ್ಯಾಮೆರಾಗಳು ಈಗಲೂ ಅತ್ಯುತ್ತಮ ಗುಣಮಟ್ಟದ ಚಿತ್ರಗಳನ್ನು ಕಳುಹಿಸುತ್ತಿದೆ’ ಎಂದೂ ಹೇಳಿದ್ದಾರೆ. ‘ಚಂದ್ರಯಾನ–4’ ಕಾರ್ಯಕ್ರಮದಡಿ 2027ರಲ್ಲಿ ಗಗನನೌಕೆಯನ್ನು ಕಳುಹಿಸಲಾಗುತ್ತಿದ್ದು, ಚಂದ್ರನ ಮೇಲ್ಮೈನಲ್ಲಿರುವ ಮಾದರಿಗಳನ್ನು ಸಂಗ್ರಹಿಸಿ, ಭೂಮಿಗೆ ತರುವ ಉದ್ದೇಶ ಹೊಂದಲಾಗಿದೆ.

‘ತ್ರಿಭಾಷಾ ಸೂತ್ರ: ಲಾಭ–ನಷ್ಟ ಅಧ್ಯಯನ’

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರದ ಲಾಭ-ನಷ್ಟದ ಬಗ್ಗೆ ಅಧ್ಯಯನ ನಡೆಸಬೇಕಿದೆ. ಶಿಕ್ಷಣ ತಜ್ಞರ ಸಮಿತಿ ರಚಿಸಿ, ಈ ಬಗ್ಗೆ ಅಧ್ಯಯನ ಮಾಡಲಾಗುವುದು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಭರವಸೆ ನೀಡಿದರು.

‘ನಮ್ಮ ನಾಡು ನಮ್ಮ ಆಳ್ವಿಕೆ’ ಸಂಘಟನೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಭಾಷಾ ನೀತಿಗಾಗಿ ಹೋರಾಟ, ಸಾರ್ವಜನಿಕ ಹಕ್ಕೊತ್ತಾಯ’ ಸಭೆಯಲ್ಲಿ ಅವರು ಮಾತನಾಡಿದರು.

‘1968ರಿಂದ ಶಿಕ್ಷಣದಲ್ಲಿ ತ್ರಿಭಾಷಾ ನೀತಿಯನ್ನು ರಾಜ್ಯ ಸರ್ಕಾರ ಅಳವಡಿಸಿಕೊಂಡಿತು. ತಮಿಳುನಾಡು ಈ ನೀತಿ ಅಳವಡಿಸಿಕೊಂಡಿಲ್ಲ. ಉತ್ತರ ಭಾರತದ ರಾಜ್ಯಗಳು ಪಾರ್ಶ್ವವಾಗಿ ಅಳವಡಿಸಿಕೊಂಡಿವೆ. ನಮ್ಮ ರಾಜ್ಯದಲ್ಲಿ ಹಿಂದಿ ಕಲಿಕೆಯಿಂದ ಎಷ್ಟು ಮಂದಿಗೆ ಉದ್ಯೋಗ ದೊರೆತಿದೆ? ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಏನು ಲಾಭವಾಗಿದೆ ಸೇರಿ ವಿವಿಧ ಅಂಶಗಳ ಆಧಾರದಲ್ಲಿ ವೈಜ್ಞಾನಿಕ ಅಧ್ಯಯನ ನಡೆಸಬೇಕಿದೆ. ಪ್ರಾಧಿಕಾರದ ವತಿಯಿಂದ 10 ಜನ ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿ ರಚಿಸಲಾಗುವುದು. ಅಗತ್ಯವಿದ್ದಲ್ಲಿ ತಂಡವಾಗಿ ಅಧ್ಯಯನಕ್ಕೆ ತಮಿಳುನಾಡಿಗೂ ಕಳಿಸಲಾಗುವುದು’ ಎಂದರು.



ಸಭೆಯಲ್ಲಿ (ಎಡದಿಂದ) ನಮ್ಮ ನಾಡು ನಮ್ಮ ಆಳ್ವಿಕೆ ಸಂಘಟನೆ ಸದಸ್ಯ ಕವಿರಾಜ್, ರಮೇಶ್ ಬೆಲ್ಲಂಕೊಂಡ, ಪುರುಷೋತ್ತಮ ಬಿಳಿಮಲೆ, ಆನಂದ್ ಜಿ., ಶ್ಯಾಮ್ ಪ್ರಸಾದ್ ಎಸ್.ಅವರ ಜತೆಗೆ ಕನ್ನಡ ಪರ ಕಾರ್ಯಕರ್ತರು ದ್ವಿಭಾಷಾ ಸೂತ್ರಕ್ಕೆ ಆಗ್ರಹಿಸಿದರು ಪ್ರಜಾವಾಣಿ ಚಿತ್ರ

‘ವೈಜ್ಞಾನಿಕ ಅಧ್ಯಯನ ಪೂರ್ಣಗೊಂಡ ಬಳಿಕ, ನಿಗದಿತ ಅಂಕಿಅಂಶ ಸಹಿತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಬಳಿಕ ಈ ವರದಿ ಆಧಾರದಲ್ಲಿ ದ್ವಿಭಾಷಾ ನೀತಿ ಜಾರಿಗೆ ಸಂಬಂಧಿಸಿದಂತೆ ಸರ್ಕಾರ ಮುಂದಿನ ಕ್ರಮ ಕೈಗೊಳ್ಳಲಿದೆ. ನಮಗೆ ಯಾವುದೇ ಭಾಷೆಯ ಬಗ್ಗೆ ದ್ವೇಷವಿಲ್ಲ. ಆದರೆ, ಭಾಷೆಯನ್ನು ಹೇರಿಕೆ ಮಾಡಬಾರದು. ಹಿಂದಿಗೆ ಪ್ರಾಬಲ್ಯ ಇರುವಲ್ಲೇ ಆ ಭಾಷೆ ಉಪಯೋಗಕ್ಕೆ ಬರುತ್ತಿಲ್ಲ’ ಎಂದರು.

ಬನವಾಸಿ ಬಳಗದ ಸಂಸ್ಥಾಪಕ ಆನಂದ್ ಜಿ., ‘ರಾಜ್ಯದಲ್ಲಿ ಹಿಂದಿ ಹೇರಿಕೆ ಎಲ್ಲೆಡೆ ನಡೆಯುತ್ತಿದೆ. ಒಂದು ದೇಶ ಒಂದು ಭಾಷೆ ಎಂಬ ಪರಿಸ್ಥಿತಿ ನಿರ್ಮಾಣ ಮಾಡುವ ಹುನ್ನಾರದ ಭಾಗವಾಗಿದೆ’ ಎಂದರು.

ಕನ್ನಡ ಪರ ಚಿಂತಕ ರಮೇಶ್ ಬೆಲ್ಲಂಕೊಂಡ, ‘ಸ್ಪರ್ಧಾತ್ಮಕ ಪರೀಕ್ಷೆಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ನಡೆಯುತ್ತಿವೆ. ಇದರಿಂದ ಉನ್ನತ ಹುದ್ದೆ ಪಡೆಯಲು ಹಿಂದಿ ಭಾಷಿಕರು ಯಶಸ್ವಿಯಾಗುತ್ತಿದ್ದಾರೆ. ಹಿಂದಿ ಭಾಷೆಗೆ ನೀಡುತ್ತಿರುವ ಸೌಲಭ್ಯಗಳನ್ನು ಪ್ರಾದೇಶಿಕ ಭಾಷೆಗಳಿಗೆ ಒದಗಿಸಬೇಕು’ ಎಂದು ಆಗ್ರಹಿಸಿದರು.

90 ಸಾವಿರ ಮಕ್ಕಳು ಅನುತ್ತೀರ್ಣ

‘ತ್ರಿಭಾಷಾ ಸೂತ್ರದಡಿ ಕರ್ನಾಟಕದ ಮಕ್ಕಳ ಮೇಲೆ ಮಾತ್ರ ಹಿಂದಿ ಹೇರಿಕೆ ಯಾಗುತ್ತಿದೆ. 2023–24ನೇ ಶೈಕ್ಷಣಿಕ ಸಾಲಿನಲ್ಲಿ 90,510 ಮಕ್ಕಳು ಎಸ್ಸೆಸ್ಸೆಲ್ಸಿಯ ಹಿಂದಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾರೆ. ತೇರ್ಗಡೆಯಾದ ಮಕ್ಕಳಿಗೂ ಕಡಿಮೆ ಅಂಕ ಬಂದಿದೆ. ಇದು ಮಕ್ಕಳ ಭವಿಷ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ನಮ್ಮ ಪರಿಸರದಲ್ಲಿ ದೈನಂದಿನ ಚಟುವಟಿಕೆಗೆ ಕನ್ನಡ ಹಾಗೂ ಹೊರಗಿನ ಜನರೊಂದಿಗೆ ವ್ಯವಹರಿಸಲು ಇಂಗ್ಲಿಷ್ ಸಾಕು’ ಎಂದು ನಮ್ಮ ನಾಡು ನಮ್ಮ ಆಳ್ವಿಕೆ ಸಂಘಟನೆಯ ಪ್ರತಿನಿಧಿಗಳು ಪ್ರತಿಪಾದಿಸಿದರು.

ನಗರದಲ್ಲಿ ಇಂದು

ಉಚಿತ ಆರೋಗ್ಯ ತಪಾಸಣೆ ಶಿಬಿರ: ಉದ್ಘಾಟನೆ: ಲಿಂಗರಾಜ ಗಾಂಧಿ, ಅಧ್ಯಕ್ಷತೆ: ಜವರೇಗೌಡ ಟಿ., ಅತಿಥಿಗಳು: ಬಿ. ರಮೇಶ್, ವಿಜಯಲಕ್ಷ್ಮಿ ಎಂ.ವಿ., ಆಯೋಜನೆ: ರಾಷ್ಟ್ರೀಯ ಸೇವಾ ಯೋಜನೆ, ಆರೋಗ್ಯ ಕೇಂದ್ರ ಮತ್ತು ಯುವ ರೆಡ್ ಕ್ರಾಸ್, ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಸೆಂಟೆನಿಯಲ್ ಸ್ಪಂದನೆ, ಸ್ಥಳ: ಹಳೆ ಸಮಾಜಕಾರ್ಯ ವಿಭಾಗ, ಆಡಳಿತ ಕಟ್ಟಡದ ಹಿಂಭಾಗ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10

ಶ್ರೀಮದ್ವಾದಿರಾಜ ನೈಜ ಆರಾಧನಾ ಮಹೋತ್ಸವ: ‘ವಾದಿರಾಜ ಪ್ರಶಸ್ತಿ-2025’, ‘ಹರಿದಾಸ ಸೇವಾ ಕುಶಲ’ ಪ್ರದಾನ: ಎಂ.ಆರ್. ಕೃಷ್ಣ, ಆಯೋಜನೆ: ಶ್ರೀಮದ್ವಾದಿರಾಜ ಆರಾಧನಾ ಟ್ರಸ್ಟ್, ಸ್ಥಳ: ಶ್ರೀವಾದಿರಾಜ ಧ್ಯಾನ ಮಂದಿರ, ವಾದಿರಾಜ ಕಲಾಭವನ, ಅಕ್ಷಯನಗರ, ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

‘ವೈಜ್ಞಾನಿಕ ಮನೋಭಾವ ಮತ್ತು ಪ್ರಾತ್ಯಕ್ಷಿಕೆ’ ಕಾರ್ಯಾಗಾರ: ಅತಿಥಿ: ಎಚ್.ಆರ್. ಸ್ವಾಮಿ, ಅಧ್ಯಕ್ಷತೆ: ರಾಗಿಣಿ ಎನ್., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎಚ್‌ಎಸ್‌ಆರ್ ಬಡಾವಣೆ, ಬೆಳಿಗ್ಗೆ 11.30

ಚತುರ್ಥ ಚರಣ್ ಕಬ್ಸ್, ಹೀರಕ್ ಪಂಖ್ ಬುಲ್‌ಬುಲ್ಸ್, ರಾಜ್ಯ ಪುರಸ್ಕಾರ ಸ್ಕೌಟ್ಸ್, ಗೈಡ್ಸ್ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಶಸ್ತಿ ಪತ್ರ ಪ್ರದಾನ: ಥಾವರಚಂದ್ ಗೆಹಲೋತ್, ಅತಿಥಿಗಳು: ಯು.ಟಿ. ಖಾದರ್, ಡಾ.ಎಂ.ಸಿ. ಸುಧಾಕರ್, ಮಧು ಬಂಗಾರಪ್ಪ, ಪಿ.ಜಿ.ಆರ್. ಸಿಂಧ್ಯ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಗಾಜಿನ ಮನೆ, ರಾಜಭವನ, ಸಂಜೆ 4

‘ನ್ಯಾಯಾಂಗದಲ್ಲಿ ಕನ್ನಡ ಅನುಷ್ಠಾನ’: ಉದ್ಘಾಟನೆ: ಕೃಷ್ಣ ಎಸ್. ದೀಕ್ಷಿತ್, ಅತಿಥಿಗಳು: ಆರ್. ದೇವದಾಸ್, ಅತುಲ್ ಕೊಠಾರಿ, ವಿನೋದ್ ಎ., ಎ.ಎಸ್. ಪೊನ್ನಣ್ಣ, ಕೇಶವಪ್ರಸಾದ್, ಸಿ.ಆರ್. ಗೋಪಾಲಸ್ವಾಮಿ, ಎಸ್. ಸುಶೀಲಾ, ಎಸ್. ಎಸ್. ಮಿಟ್ಟಲ್‌ಕೋಡ, ವಿವೇಕ್ ಸುಬ್ಬಾರೆಡ್ಡಿ, ಮಂಜುನಾಥ ಬಿ. ಗೌಡ, ಎಲ್. ಜಗದೀಶ್, ಆಯೋಜನೆ: ಭಾರತಿ ಭಾಷಾ ಅಭಿಯಾನ, ಸ್ಥಳ: ಎನ್.ಜಿ.ಒ ಭವನ, ಕಬ್ಬನ್ ಉದ್ಯಾನ, ಸಂಜೆ 5.10



ಕೃಷ್ಣ ಎಸ್. ದೀಕ್ಷಿತ್

ಪು.ತಿ.ನ ಜನ್ಮದಿನೋತ್ಸವ: ಅಧ್ಯಕ್ಷತೆ: ಎಂ. ಕೃಷ್ಣೇಗೌಡ, ಅತಿಥಿಗಳು: ಎನ್.ಎಸ್. ಶ್ರೀಧರಮೂರ್ತಿ, ವೈ.ಕೆ. ಮುದ್ದುಕೃಷ್ಣ, ಮಂಡ್ಯ ರಮೇಶ್, ಬಿ.ಎನ್. ಸುರೇಶ್, ಪು.ತಿ.ನ ಅವರ ಗೀತನಾಟಕ ‘ಹರಿಣಾಭಿಸರಣ’ ಯಕ್ಷಗಾನ ಪ್ರಯೋಗ: ಭಾಗವತರು: ಚಿತ್ಕಲಾ ತುಂಗ, ಮದ್ದಳೆ: ಸಂಪತ್ ಆಚಾರ್ಯ, ಚಂಡೆ: ಮನೋಜ್ ಆಚಾರ್ಯ, ನಿರ್ದೇಶನ: ಕೃಷ್ಣಮೂರ್ತಿ ತುಂಗ, ಆಯೋಜನೆ: ಡಾ. ಪುತಿನ ಟ್ರಸ್ಟ್, ಸ್ಥಳ: ಸೇವಾ ಸದನ, 14ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5ರಿಂದ

ಎರಡು ದಿನಗಳ ನಾಟಕೋತ್ಸವ, ಸಾಧಕರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ: ‘ಶ್ರೀಮನ್ಮೂಕವಾಗಿತ್ತು’ ನಾಟಕ ಪ್ರದರ್ಶನ: ನಿರ್ದೇಶನ: ಗಣಪತಿ ಗೌಡ, ‘ಕರಾಳ ರಾತ್ರಿ’ ನಾಟಕ ಪ್ರದರ್ಶನ: ರಚನೆ: ಮೋಹನ ಹಬ್ಬು, ನಿರ್ದೇಶನ: ಗೋವಿಂದೇಗೌಡ ಯು., ಆಯೋಜನೆ: ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6ರಿಂದ

ಮಂಕುತಿಮ್ಮನ ಕಗ್ಗ ಡಿ.ವಿ.ಜಿ. ಸಂಸ್ಮರಣೆ: ಜಿ. ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿಗಳು: ಪ್ರಕಾಶಮೂರ್ತಿ, ಕಗ್ಗ ಕುರಿತು: ಹನುಮಂತ ಶೆಟ್ಟಿ, ಅಧ್ಯಕ್ಷತೆ: ಎಚ್. ಎಸ್. ಸುಧೀಂದ್ರಕುಮಾರ್, ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಗುರುರಾಜ ಸಭಾ ಭವನ, ರಾಘವೇಂದ್ರ ಸ್ವಾಮಿ ಮಠದ ಪಕ್ಕ, ಕೆಂಗೇರಿ ಉಪನಗರ, ಸಂಜೆ 6



ಡಿ.ವಿ.ಗುಂಡಪ್ಪ

ಮಣಿ ಷಡಕ್ಷರಿ ಸ್ಮರಣಾರ್ಥ ದತ್ತಿ ಕಾರ್ಯಕ್ರಮ: ‘ರಂಗಭೂಮಿ ಬೆಳವಣಿಗೆಯಲ್ಲಿ ವೀರಶೈವರ ಪಾತ್ರ’ ಉಪನ್ಯಾಸ: ಕೆ.ವಿ. ನಾಗರಾಜಮೂರ್ತಿ, ಮಿಶ್ರ ಮಾಧುರ್ಯ ಗಾಯನ: ನಾಗಚಂದ್ರಿಕಾ ಭಟ್, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಸದಾಶಿವನಗರ ವೀರಶೈವ ಸಮಾಜ, ಸ್ಥಳ: ಬೃಂದಾವನ್ ಹಾಲ್, 14ನೇ ಮುಖ್ಯರಸ್ತೆ, ಸದಾಶಿವನಗರ, ಸಂಜೆ 6.30

ಸಂತ ತುಕಾರಾಮ ಮಹಾರಾಜರ ಸಪ್ತಾಹ ದಿಂಡಿ ಉತ್ಸವ: ಗುರುಪೂಜೆ, ಭಜನೆ, ಕೀರ್ತನೆಯೊಂದಿಗೆ ಸಪ್ತಾಹದ ಮಂಗಳ, ಆಯೋಜನೆ ಮತ್ತು ಸ್ಥಳ: ನಂಜುಂಡೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ರಂಗಸ್ವಾಮಿ ಗುಡಿಬೀದಿ, ಗುಡುಮ್ಮೈಯ್ಯನಪೇಟೆ, ಆರ್.ಟಿ. ಸ್ಟ್ರೀಟ್, ಸಂಜೆ 7ರಿಂದ

ದಾಖಲೆ ಪರಿಶೀಲಿಸದೆಯೇ ಖರೀದಿ: 41 ಮಂದಿಗೆ ₹3.17 ಕೋಟಿ ವಂಚನೆ

ನಿವೇಶನ: ತಲೆಯೆತ್ತಿದ ವಂಚನೆ ಜಾಲ

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ವಂಚನೆಯಿಂದ ಹಣ ಕಳೆದುಕೊಳ್ಳುವ ಭಯದಲ್ಲಿ ನಿವೇಶನಗಳ ಮೇಲೆ ಹೂಡಿಕೆ ಮಾಡಲು ಹೋಗಿ ಅಲ್ಲಿಯೂ ಹಣ ಕಳೆದುಕೊಳ್ಳುತ್ತಿರುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗಿವೆ.

ನಿವೇಶನಗಳ ಮೇಲೆ ಹೂಡಿಕೆ ಮಾಡಿದರೆ ಹಣ ಸುರಕ್ಷಿತವೆಂದು ನಂಬಿ, ಹಲವರು ಹಣ ಕಳೆದುಕೊಂಡಿದ್ದಾರೆ. ಅವರೀಗ ಪೊಲೀಸ್ ಠಾಣೆಯ ಮೆಟ್ಟಿಲೇರುತ್ತಿದ್ದಾರೆ. ನಿವೇಶನ ಮಾರಾಟದ ಹೆಸರಿನಲ್ಲಿ ವಂಚನೆ ಜಾಲ ರಾಜ್ಯದ ಹಲವು ನಗರಗಳಲ್ಲಿ ಮತ್ತೆ ಸಕ್ರಿಯವಾಗಿದೆ.

ಸಕಲ ಸೌಲಭ್ಯ ಹೊಂದಿರುವ ಲೇಔಟ್‌ನಲ್ಲಿ ನಿವೇಶನ ಮಾರಾಟ ಮಾಡುವುದಾಗಿ ನಂಬಿಸಿ, ವಿವಿಧ ಜಿಲ್ಲೆಯ 41 ಮಂದಿಗೆ ಕರೆ ಮಾಡಿ ₹3.17 ಕೋಟಿ ವಂಚನೆ ನಡೆಸಲಾಗಿದ್ದು, ಈ ಸಂಬಂಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಪ್ರಕರಣದ ತನಿಖೆ ಆರಂಭಿಸಿದ್ದಾರೆ.

‘ಬ್ಯಾಂಕ್ ಖಾತೆಯಲ್ಲಿ ಹಣವಿಟ್ಟರೆ ಸೈಬರ್ ವಂಚನೆಗೆ ಒಳಗಾಗುವ ಭಯವಿತ್ತು. ನಿವೇಶನ ಖರೀದಿಸಿದರೆ ಹಣ ದುಪ್ಪಟ್ಟಾಗಲಿದೆ ಎನ್ನುವ ಕಾರಣಕ್ಕೂ ಸೂಕ್ತ ಬಡಾವಣೆಯಲ್ಲಿ ನಿವೇಶನಕ್ಕಾಗಿ ಸಾಮಾಜಿಕ ಜಾಲತಾಣದಲ್ಲಿ ಹುಡುಕಾಟ ನಡೆಸಿದ್ದೆ. ವಂಚಕರು ಸಂಪರ್ಕಿಸಿ ಮೋಸ ಮಾಡಿದ್ದಾರೆ’ ಎಂದು ಹಣ ಕಳೆದುಕೊಂಡವರು ಹೇಳಿದರು.

‘ಅಶೋಕನಗರದ ನಿವಾಸಿ ರವೀಂದ್ರ ಸುವರ್ಣ ಅವರಿಗೆ ಅಪರಿಚಿತ ಸಂಖ್ಯೆಯಿಂದ ತೇಜಸ್ವಿನಿ ಎಂಬುವವರು ಕರೆ ಮಾಡಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಅಗರ ಗ್ರಾಮದ ಸರ್ವೆ ನಂ. 115ರಲ್ಲಿ ಖಾಲಿ ನಿವೇಶನಗಳು ಮಾರಾಟಕ್ಕೆ ಸಿದ್ಧವಾಗಿವೆ. ಆಸಕ್ತಿಯಿದ್ದರೆ ಭೇಟಿ ನೀಡಬಹುದು ಎಂಬುದಾಗಿ ನಂಬಿಸಿದ್ದರು. ಅವರ ಮಾತು ನಂಬಿ ರವೀಂದ್ರ ಸುವರ್ಣ–ಚಂದ್ರಾವತಿ ದಂಪತಿ ಲೇಔಟ್‌ಗೆ ಭೇಟಿ ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಲೇಔಟ್‌ಗೆ ದಂಪತಿ ಭೇಟಿ ನೀಡಿದ್ದಾಗ ಮನು ಎಂಬ ವ್ಯಕ್ತಿ ಬಂದಿದ್ದರು. ಎಲ್ಲ ನಿವೇಶನಗಳು ಸಾಲಿಸಿಟರ್ ಗ್ರೂಪ್‌ಗೆ ಸೇರಿದ್ದು ಅದರ ಮಾಲೀಕರು ಮಹೇಶ್‌ಕುಮಾರ್ ಹಾಗೂ ಆರ್.ಚೈತ್ರಾ. ಅವರ ಕಚೇರಿ ಆರ್.ಟಿ. ನಗರದಲ್ಲಿದೆ ಎಂಬುದಾಗಿ ನಂಬಿಸಿದ್ದರು. ಅದಾದ ಮೇಲೆ ದಂಪತಿ ಮುಂಗಡವಾಗಿ ₹99 ಸಾವಿರ ಪಾವತಿಸಿದ್ದರು. ಕಂಪನಿಯ ನಿರ್ದೇಶಕರು ಎಂದು ಹೇಳಿಕೊಂಡಿದ್ದ ಇಬ್ಬರನ್ನು ಭೇಟಿ ಮಾಡಿದ್ದ ದಂಪತಿ ₹15 ಲಕ್ಷ ಮೊತ್ತದ ಮೂರು ಚೆಕ್ ಅನ್ನು ನೀಡಿದ್ದರು. ಬಾಕಿ ಹಣ ಪಾವತಿಸಿದ ಮೇಲೆ ಕ್ರಯಪತ್ರ ನೀಡುವುದಾಗಿ ಕಂಪನಿ ನಿರ್ದೇಶಕರು ನಂಬಿಸಿದ್ದರು. 90 ದಿನಗಳು ಕಳೆದರೂ ಕ್ರಯಪತ್ರ ನೀಡದ ಕಾರಣ ಸಂಶಯಗೊಂಡ ದಂಪತಿ, ಹಣ ವಾಪಸ್ ನೀಡುವಂತೆ ಕೇಳಿದ್ದರು. ಆಗ ನಕಲಿ ಪತ್ರವೊಂದನ್ನು ನೀಡಿದ್ದ ಮಹೇಶ್ ಕುಮಾರ್ ಬಳಿಕ ತಲೆಮರೆಸಿಕೊಂಡಿದ್ದಾರೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ನಿವೇಶನ ಮಾರಾಟ ಮಾಡುವುದಾಗಿ ನಂಬಿಸಿ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಯ ಖರೀದಿದಾರರಿಗೆ ವಂಚನೆ ನಡೆಸಿರುವುದು ತನಿಖೆಯ ವೇಳೆ ಪತ್ತೆಯಾಗಿದೆ. ಈ ಪ್ರಕರಣದ ಸಂಬಂಧ ಕೆ.ಸತೀಶ್ ಅವರಿಂದ ಮಾಹಿತಿ ಪಡೆಯಲಾಗಿದ್ದು 41 ಮಂದಿಗೆ ವಂಚನೆ ನಡೆಸಿರುವುದು ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಒಂದೇ ನಿವೇಶನ ಇಬ್ಬರಿಗೆ ಮಾರಾಟ: ‘ಹಲವು ಜಿಲ್ಲೆಗಳಲ್ಲಿ ಯಾರದ್ದೋ ಲೇಔಟ್ ತೋರಿಸಿ ಹಣ ಪಡೆದು ವಂಚನೆ ನಡೆಸುತ್ತಿರುವ ಜಾಲ ಸಕ್ರಿಯವಾಗಿದೆ. ಅಲ್ಲದೇ ಒಂದೇ ನಿವೇಶನವನ್ನು ಇಬ್ಬರಿಗೆ ಮಾರಾಟ ಮಾಡಿರುವುದು ಹಾಗೂ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿರುವ ನಿವೇಶನ ತೋರಿಸಿ ಮಾರಾಟ ಮಾಡುತ್ತಿರುವ ಪ್ರಕರಣಗಳೂ ಹೆಚ್ಚಿವೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಆಕರ್ಷಕ ಜಾಹೀರಾತು

ಸಕಲ ಸೌಲಭ್ಯಗಳಿರುವ ಲೇಔಟ್‌ನಲ್ಲಿ ಕಡಿಮೆ ಬೆಲೆಗೆ ನಿವೇಶನ ನೀಡಲಾಗುವುದು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಆಕರ್ಷಕ ಜಾಹೀರಾತು ನೀಡಲಾಗುತ್ತದೆ. ಲೇಔಟ್ ಪಕ್ಕದಲ್ಲೇ ಆಸ್ಪತ್ರೆ, ಹೆದ್ದಾರಿ, ಶಾಲೆಗಳು ಇವೆ. ಕುಡಿಯುವ ನೀರು ಹಾಗೂ ಯುಜಿಡಿ ಸಂಪರ್ಕವಿದೆ ಎಂದು ಆಮಿಷವೊಡ್ಡಲಾಗುತ್ತದೆ. ಇದನ್ನೇ ನಂಬಿ ಹಲವರು ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ನಿವೇಶನ ಖರೀದಿಗೆ ಮುಂದಾಗಿ ಮೋಸ ಹೋಗುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

ಇಬ್ಬರ ವಿರುದ್ಧ ಎಫ್‌ಐಆರ್

ವಂಚನೆ ಪ್ರಕರಣದ ಸಂಬಂಧ ಅಶೋಕನಗರದ ಭೋವಿ ಲೇನ್‌ನ ಚಂದ್ರಾವತಿ ಅವರು ನೀಡಿದ ದೂರು ಆಧರಿಸಿ ಸಾಲಿಸಿಟರ್ ಗ್ರೂಪ್‌ನ ಮಾಲೀಕರು ಎಂದು ಹೇಳಿಕೊಂಡಿರುವ ಆರ್.ಮಹೇಶ್‌ಕುಮಾರ್ ಹಾಗೂ ಚೈತ್ರಾ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.



ಖರೀದಿಗೂ ಮುನ್ನ ದಾಖಲೆಗಳನ್ನು ಪರಿಶೀಲಿಸಬೇಕು. ಲೇಔಟ್‌ನ ನಿಜವಾದ ಮಾಲೀಕರು ಯಾರು ಎಂಬುದನ್ನು ತಿಳಿದುಕೊಂಡ ನಂತರ ನಿವೇಶನ ಖರೀದಿಸಬೇಕು

ಬಿ.ದಯಾನಂದ, ನಗರ ಪೊಲೀಸ್ ಕಮಿಷನರ್

ಅನಧಿಕೃತ ಫ್ಲೆಕ್ಸ್: ಕ್ರಮಕ್ಕೆ ಸೂಚನೆ

ಅನಧಿಕೃತ ಫ್ಲೆಕ್ಸ್: ಕ್ರಮಕ್ಕೆ ಸೂಚನೆ

ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರದೇಶ ಯುವ ಕಾಂಗ್ರೆಸ್ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಹಿನ್ನೆಲೆಯಲ್ಲಿ ಅರಮನೆ ಮೈದಾನ ಸುತ್ತಮುತ್ತ ಸೇರಿದಂತೆ ನಗರದಲ್ಲಿ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಹಾಕಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಿದ್ದಾರೆ.

ಮಾರ್ಚ್ 17ರಂದು ಅರಮನೆ ಮೈದಾನದಲ್ಲಿ ಯುವ ಕಾಂಗ್ರೆಸ್ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ. ಹೀಗಾಗಿ, ನಗರದಲ್ಲಿ ಹಾಕಿರುವ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಕೂಡಲೇ ತೆರವುಗೊಳಿಸಬೇಕು ಎಂದು ಇದನ್ನು ಹಾಕಿರುವವರಿಗೂ ಉಪ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಒಂದೊಮ್ಮೆ ತೆರವು ಮಾಡದಿದ್ದರೆ ಸಂಬಂಧ ಪಟ್ಟವರ ವಿರುದ್ಧ ದಂಡ ಸೇರಿದಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಆದೇಶಿಸಿದ್ದಾರೆ.

‘ಬೆಂಗಳೂರು ನಗರದ ಸೌಂದರ್ಯವನ್ನು ಹಾಳು ಮಾಡಬಾರದು ಎಂದು ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ನಿಷೇಧಿಸಲಾಗಿದೆ. ಸರ್ಕಾರದ ಈ ಆದೇಶವನ್ನು ಪದೇ ಪದೇ ನಿರ್ಲಕ್ಷ ಮಾಡಲಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಈ ಆದೇಶ ಉಲ್ಲಂಘಿಸಿರುವವರು ನಮ್ಮ ಪಕ್ಷದವರಾದರೂ ಸರಿ, ಬೇರೆ ಪಕ್ಷದವರಾದರೂ ಸರಿ, ಅಂತಹವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿಯವರ ಸೂಚನೆಯಂತೆ, ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಅಳವಡಿಸಿರುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಜೊತೆಗೆ ಫ್ಲೆಕ್ಸ್ ಅಳವಡಿಸಿರುವವರ ಮೇಲೆ ₹5 ಲಕ್ಷ ದಂಡ ವಿಧಿಸುವ ಜೊತೆಗೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅರಮನೆ ಮೈದಾನ ಹಾಗೂ ನಗರದ ವಿವಿಧೆಡೆ ನಡೆಯಲಿರುವ ಯುವ ಸಂಕಲ್ಪ ಪದಗ್ರಹಣ ಸಮಾರಂಭಕ್ಕಾಗಿ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಅಳವಡಿಸಲಾಗಿದೆ. ಬಳ್ಳಾರಿ ರಸ್ತೆಯಲ್ಲಿ ಬೃಹತ್ ಗಾತ್ರದ 40 ಫ್ಲೆಕ್ಸ್ ಹಾಗೂ ಸಣ್ಣ ಗಾತ್ರದ 130ಕ್ಕೂ ಹೆಚ್ಚು ಫ್ಲೆಕ್ಸ್‌ಗಳನ್ನು ತೆರವುಗೊಳಿಸಲಾಗಿದೆ. ಫ್ಲೆಕ್ಸ್ ತೆರವುಗೊಳಿಸಲು ಖರ್ಚಾಗುವ ಹಣ ಕೂಡಾ ವಸೂಲಿ ಮಾಡಲಾಗುವುದು. ಅಧಿಕಾರಿಗಳು ಖುದ್ದು ಸ್ಥಳದಲ್ಲಿದ್ದು, ಅನಧಿಕೃತ ಫ್ಲೆಕ್ಸ್‌ಗಳ ತೆರವು ಕಾರ್ಯಾಚರಣೆಯನ್ನು ಕೈಗೊಂಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.



ನಗರದಲ್ಲಿ ಹಾಕಲಾಗಿದ್ದ ಅನಧಿಕೃತ ಫ್ಲೆಕ್ಸ್, ಬ್ಯಾನರ್

ನೇಪಾಳದ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಲಾಲ್‌ಬಾಗ್‌ನಲ್ಲಿ ಹೋಳಿ ಆಚರಣೆ ವೇಳೆ ಸ್ಥಳೀಯ ವ್ಯಾಪಾರಿ ಮೇಲೆ ಹಲ್ಲೆ ನಡೆಸಿ, ಗಲಾಟೆ ಮಾಡಿದ ಮೂವರು ಆರೋಪಿಗಳನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನೇಪಾಳ ಮೂಲದ ರಮೇಶ್, ಉಮೇಶ್ ಮತ್ತು ರಾಜೇಶ್ ಎಂಬುವವರನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ. ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿದ್ದು, ಅವರ ಪತ್ತೆಗೆ ಹುಡುಕಾಟ ನಡೆಸಲಾಗುತ್ತಿದೆ ಎಂದು ಹೇಳಿದರು.

ಲಾಲ್‌ಬಾಗ್ ಆವರಣದ ಬಂಡೆ ಬಳಿ ಶುಕ್ರವಾರ ಸಂಜೆ ಹೋಳಿ ಆಚರಣೆ ವೇಳೆ ನೇಪಾಳಿ ಕುಟುಂಬಗಳ ಮಧ್ಯೆ ಗಲಾಟೆ ನಡೆದಿದೆ. ಪರಸ್ಪರ ಕೈ ಕೈ ಮಿಲಾಯಿಸಿದ್ದಾರೆ. ಗಲಾಟೆ ವೇಳೆ ಸೋಡಾ ಬಾಟಲಿಗಳನ್ನು ಒಡೆದು ಹಾಕಿದ್ದಾರೆ. ಇದನ್ನು ಪ್ರಶ್ನಿಸಿದ ಸೋಡಾ ವ್ಯಾಪಾರಿ ಅಮರ್ ಮೇಲೆ ನೀರಿನ ಪೈಪ್‌ನಿಂದ ಹಲ್ಲೆ ನಡೆಸಲಾಗಿದೆ. ಬಿಟ್ಟುಬಿಡುವಂತೆ ಮನವಿ ಮಾಡಿದರೂ ಕೇಳಲಿಲ್ಲ. ತಲೆ, ಮುಖ, ಕೈ ಹಾಗೂ ಕಾಲಿಗೆ ತೀವ್ರ ಪೆಟ್ಟು ಬಿದ್ದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೋಳಿ ಆಚರಣೆ ಹಾಗೂ ಗಲಾಟೆಯ ವಿಡಿಯೊವನ್ನು ನೇಪಾಳಿಗರು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಈ ವಿಡಿಯೊ ಹರಿದಾಡಿತ್ತು. ಅಮರ್ ಮೇಲೆ ಹಲ್ಲೆ ನಡೆಸಿದ ಆರೋಪಿಗಳನ್ನು ಬಂಧಿಸಿ, ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯರು ಠಾಣೆ ಬಳಿ ಜಮಾಯಿಸಿದ್ದರು.

ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸಿದ್ದಾರೆ.

ಏಳು ದ್ವಿಚಕ್ರ ವಾಹನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಯಲಹಂಕ ಉಪ ನಗರ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ ₹3.5 ಲಕ್ಷ ಮೌಲ್ಯದ ಏಳು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಎಂ.ಎಸ್.ಪಾಳ್ಯದ ನಿವಾಸಿ ನಾಸೀರ್ ಬಂಧಿತ ಆರೋಪಿಯಾಗಿದ್ದು, ವೃತ್ತಿಯಲ್ಲಿ ಆಟೊ ಚಾಲಕ ಹಾಗೂ ಗ್ಯಾರೇಜ್‌ನಲ್ಲಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಠಾಣಾ ವ್ಯಾಪ್ತಿಯ ಕೋಗಿಲು ಕ್ರಾಸ್ ನಿವಾಸಿಯೊಬ್ಬರು ಪುಟ್ಟೇನಹಳ್ಳಿಯ ವೆಂಕಟೇಶ್ವರ ಗಾರ್ಮೆಂಟ್ಸ್ ರಸ್ತೆಯಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿ, ಬಿಬಿಎಂಪಿ ಆಟೊದಲ್ಲಿ ಕಸ ಸಾಗಿಸಲು ಹೋಗಿದ್ದರು. ವಾಪಸ್ ಬಂದು ನೋಡಿದಾಗ ವಾಹನ ಕಳ್ಳತನವಾಗಿತ್ತು.

ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡ ಪೊಲೀಸರು, ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದರು.

‘ವಿಚಾರಣೆ ವೇಳೆ ನಗರದ ವಿವಿಧೆಡೆ ದ್ವಿಚಕ್ರ ವಾಹನ ಕಳವು ಮಾಡಿದ್ದು, ಅವುಗಳನ್ನು ದೊಡ್ಡಬಳ್ಳಾಪುರದ ಮುಖ್ಯ ರಸ್ತೆಯ ಖಾಲಿ ಜಾಗದಲ್ಲಿ ನಿಲ್ಲಿಸಿರುವುದಾಗಿ ಮಾಹಿತಿ ನೀಡಿದ’ ಎಂದು ಪೊಲೀಸರು ಹೇಳಿದರು.

ಕಳವು ಮಾಡಲಾಗಿದ್ದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿ ಬಂಧನದಿಂದ ಯಲಹಂಕ ಠಾಣೆಯ ಮೂರು, ಚಿಕ್ಕಜಾಲ ಠಾಣೆಯ ಎರಡು ಪ್ರಕರಣಗಳು ಬಯಲಾಗಿವೆ. ಉಳಿದ ಎರಡು ದ್ವಿಚಕ್ರ ವಾಹನಗಳ ಮಾಲೀಕರ ಪತ್ತೆ ಕಾರ್ಯ ಮುಂದುವರಿದಿದೆ ಎಂದು ತಿಳಿಸಿದರು.

ದ್ವಿಚಕ್ರ ವಾಹನ ಕದ್ದು ವ್ಹೀಲಿ ಮಾಡುವುದು ಆರೋಪಿಯ ಚಾಳಿ ಆಗಿತ್ತು. ಆತ, ವ್ಹೀಲಿ ಮಾಡುವಾಗ ಪೊಲೀಸರು ನೋಡಿದರೆ, ವಾಹನವನ್ನು ಅಲ್ಲಿಯೇ ಬಿಟ್ಟು ಪರಾರಿಯಾಗುತ್ತಿದ್ದ ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ನೆರವು ನೀಡುವ ನೆಪದಲ್ಲಿ ವೃದ್ಧೆಗೆ ₹50 ಲಕ್ಷ ವಂಚಿಸಿದ ಆರೋಪ

ಉಪ ವ್ಯವಸ್ಥಾಪಕಿ ಸೇರಿ ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರೊಬ್ಬರಿಗೆ ₹50 ಲಕ್ಷ ವಂಚಿಸಿದ ಆರೋಪದ ಮೇರೆಗೆ ಖಾಸಗಿ ಬ್ಯಾಂಕ್‌ನ ಉಪ ವ್ಯವಸ್ಥಾಪಕಿ ಸೇರಿ ನಾಲ್ವರು ಆರೋಪಿಗಳನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಮೇಘನಾ

ಇಂಡಸ್ ಇಂಡ್ ಬ್ಯಾಂಕ್ ಗಿರಿನಗರ ಶಾಖೆಯ ಉಪ ವ್ಯವಸ್ಥಾಪಕಿ ಮೇಘನಾ, ಸ್ನೇಹಿತರಾದ ಶಿವಪ್ರಸಾದ್, ವರದರಾಜು ಮತ್ತು ಅನ್ವರ್ ಗೌಸ್ ಅವರನ್ನು ಬಂಧಿಸಿ, ಹಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಗಿರಿನಗರದಲ್ಲಿರುವ ಬ್ಯಾಂಕ್ ಶಾಖೆಯಲ್ಲಿ ಸಾವಿತ್ರಮ್ಮ ಮತ್ತು ಬಸವರಾಜಯ್ಯ ದಂಪತಿ ಜಂಟಿ ಖಾತೆ ತೆರೆದಿದ್ದರು. ಅದೇ ಬ್ಯಾಂಕ್ ನಲ್ಲಿ ನಿಶ್ಚಿತ ಠೇವಣಿ ಖಾತೆ ಸಹ ಹೊಂದಿದ್ದರು. ಬ್ಯಾಂಕ್ ವ್ಯವಹಾರದಲ್ಲಿ ಸಹಾಯ ಮಾಡುತ್ತಿದ್ದ ಮೇಘನಾ ಜೊತೆ ಕುಟುಂಬದ ಕಷ್ಟ ಸುಖಗಳನ್ನು 75 ವರ್ಷದ ಸಾವಿತ್ರಮ್ಮ ಹಂಚಿಕೊಳ್ಳುತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಚಾಮರಾಜಪೇಟೆಯಲ್ಲಿದ್ದ ಮನೆ ಮಾರಾಟದಿಂದ ವೃದ್ಧ ದಂಪತಿಯ ಬ್ಯಾಂಕ್ ಖಾತೆಗೆ ₹1 ಕೋಟಿ ಜಮೆಯಾಗಿತ್ತು. ಆ ಹಣದ ಮೇಲೆ ಕಣ್ಣಿಟ್ಟಿದ್ದ ಮೇಘನಾ, ವೃದ್ಧೆ ಬ್ಯಾಂಕ್‌ಗೆ ಹೋದಾಗ ‘ಎರಡು ಬಾಂಡ್ ಅವಧಿ ಮುಗಿದಿದೆ. ಹೊಸ ಬಾಂಡ್ ಖರೀದಿಗೆ ದಾಖಲಾತಿ ಮತ್ತು ಚೆಕ್ ಅವಶ್ಯಕತೆ ಇದೆ’ ಎಂದು ಹೇಳಿದ್ದಾರೆ. ಬಳಿಕ ಅವರ ಮನೆಗೆ ತೆರಳಿ ಎರಡು ಖಾಲಿ ಚೆಕ್ ಮೇಲೆ ಸಹಿ ಮಾಡಿಸಿಕೊಂಡಿದ್ದರು. ಜೊತೆಗೆ, ಒಂದಿಷ್ಟು ಕಾಗದ ಪತ್ರಗಳಿಗೂ ಸಹಿ ಪಡೆದಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

‘ಅದೇ ಸಂದರ್ಭದಲ್ಲಿ ಆರ್‌ಟಿಜಿಎಸ್ ಪತ್ರಕ್ಕೂ ಸಹಿ ಪಡೆದಿದ್ದ ಉಪ ವ್ಯವಸ್ಥಾಪಕಿ , ₹50 ಲಕ್ಷವನ್ನು ತನ್ನ ಖಾತೆಗೆ ವರ್ಗಾಯಿಸಿಕೊಂಡಿದ್ದರು. ಸಾವಿತ್ರಮ್ಮ ಅವರ ಮಗ ಬ್ಯಾಂಕ್‌ನಿಂದ ಮೊಬೈಲ್‌ಗೆ ಬಂದಿದ್ದ ಸಂದೇಶವನ್ನು ಗಮನಿಸಿದಾಗ, ಖಾತೆಯಲ್ಲಿ ಹಣ ಕಡಿಮೆ ಇರುವುದು ಪತ್ತೆಯಾಗಿದೆ. ಫೆಬ್ರುವರಿ 13ರಂದು ಬೇರೆ ಖಾತೆಗೆ ಹಣ ವರ್ಗಾವಣೆ ಆಗಿರುವುದು ಗೊತ್ತಾಗಿದೆ. ನಂತರ ಬ್ಯಾಂಕ್‌ಗೆ ತೆರಳಿ ಅಧಿಕಾರಿಯನ್ನು ಪ್ರಶ್ನಿಸಿದಾಗ, ‘ನೀವು ಹೇಳಿದ ಖಾತೆಗೆ ಆರ್‌ಟಿಜಿಎಸ್ ಮಾಡಲಾಗಿದೆ’ ಎಂದಷ್ಟೇ ಪ್ರತಿಕ್ರಿಯಿಸಿದರು. ಸರಿಯಾದ ಉತ್ತರ ನೀಡಲಿಲ್ಲ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳು ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾರೆ.

‘ಮೇಘನಾ ಅವರು ವೃದ್ಧೆಯ ಖಾತೆಯಲ್ಲಿದ್ದ ಹಣವನ್ನು ಗೆಳೆಯ ವರದರಾಜು ಮತ್ತು ಅನ್ವರ್ ಅವರ ಖಾತೆಗೆ ವರ್ಗಾವಣೆ ಮಾಡಿದ್ದರು. ಆರೋಪಿಗಳಿಂದ ಹಣ ವಶಪಡಿಸಿಕೊಳ್ಳಲಾಗಿದೆ. ವೃದ್ಧೆಗೆ ಮೋಸ ಮಾಡುವ ಉದ್ದೇಶ ಇರಲಿಲ್ಲ. ಹಣದ ಅವಶ್ಯಕತೆ ಇದ್ದ ಕಾರಣ, ಅದನ್ನು ಬಳಸಿಕೊಂಡು, ಲಾಭ ಗಳಿಸಿ ಮತ್ತೆ ಅವರಿಗೆ ವಾಪಸ್ ಕೊಡುವ ಯೋಜನೆ ಇತ್ತು ಎಂದು ವಿಚಾರಣೆ ವೇಳೆ ತಿಳಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಇನ್‌ಸ್ಪೆಕ್ಟರ್‌ಗೆ ನಿಂದನೆ: ಇಬ್ಬರ ಬಂಧನ

ಬೆಂಗಳೂರು: ಮದ್ಯದ ಅಮಲಿನಲ್ಲಿ ಸಂಚಾರ ವಿಭಾಗದ ಇನ್‌ಸ್ಪೆಕ್ಟರ್ ಅನಿತಾ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಯತ್ನಿಸಿದ ಆರೋಪದ ಮೇರೆಗೆ ಬ್ಯಾಂಕ್ ಉದ್ಯೋಗಿ ಮತ್ತು ಅವರ ಸ್ನೇಹಿತೆಯನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಕೇಶ್ ಕುಮಾರ್ ಮತ್ತು ಬೈಸಕಿ ಅವರನ್ನು ಬಂಧಿಸಲಾಗಿದೆ. ಠಾಣಾ ವ್ಯಾಪ್ತಿಯ ಸಿಂಗೇನಹಳ್ಳಿ ಪಾಳ್ಯ ಬಳಿ ಮದ್ಯ ಸೇವಿಸಿ ವಾಹನ ಚಲಾಯಿಸುತ್ತಿದ್ದ ವಾಹನಗಳ ಚಾಲಕರು ಹಾಗೂ ಸವಾರರ ತಪಾಸಣೆ ನಡೆಯುತ್ತಿತ್ತು. ಬೈಕ್‌ನಲ್ಲಿ ರಾಮಮೂರ್ತಿ ನಗರದಿಂದ ಸೀಂಗೇನಪಾಳ್ಯಕ್ಕೆ ತೆರಳುತ್ತಿದ್ದ ರಾಕೇಶ್ ಅವರು ತಪಾಸಣೆಗೆ ಸಹಕರಿಸದೇ ಗಲಾಟೆ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ತಪಾಸಣೆ ವೇಳೆ ಮದ್ಯ ಸೇವಿಸಿರುವುದು ದೃಢಪಟ್ಟಿದ್ದರಿಂದ ಅವರಿಗೆ ದಂಡ ವಿಧಿಸಿ, ಬೆಳಿಗ್ಗೆ ವಾಹನ ತೆಗೆದುಕೊಂಡು ಹೋಗುವಂತೆ ಸೂಚಿಸಲಾಯಿತು. ಆದರೆ, ರಾಕೇಶ್ ಮತ್ತು ಸ್ನೇಹಿತೆ, ಅಧಿಕಾರಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಐಐ ಜೊತೆ ಶೈಕ್ಷಣಿಕ ಒಡಂಬಡಿಕೆ

ಬೆಂಗಳೂರು ವಿ.ವಿ.ಯಲ್ಲಿ ಉದ್ಯಮ ಆಧಾರಿತ ಸರ್ಟಿಫಿಕೇಟ್ ಕೋರ್ಸ್ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉದ್ಯಮ ವಲಯ ಮತ್ತು ಶಿಕ್ಷಣ ಕ್ಷೇತ್ರದ ನಡುವಿನ ಅಂತರ ಕಡಿಮೆ ಮಾಡಲು ಬೆಂಗಳೂರು ವಿಶ್ವವಿದ್ಯಾಲಯವು ಭಾರತೀಯ ಕೈಗಾರಿಕಾ ಮಹಾ ಒಕ್ಕೂಟದ (ಸಿಐಐ) ಜೊತೆಗೆ ಒಡಂಬಡಿಕೆಯೊಂದಕ್ಕೆ ಸಹಿ ಹಾಕಿದೆ.

ಈ ಒಡಂಬಡಿಕೆಯ ಭಾಗವಾಗಿ ವಿಶ್ವವಿದ್ಯಾಲಯವು ಪ್ರಸ್ತುತ ಉದ್ಯೋಗ ಮಾರುಕಟ್ಟೆಯ ಅಗತ್ಯಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ‘ಉದ್ಯಮ ಆಧಾರಿತ ಸರ್ಟಿಫಿಕೇಟ್ ಕೋರ್ಸ್’ಗಳನ್ನು ಆರಂಭಿಸುತ್ತಿದೆ.

ಈ ಕೋರ್ಸ್‌ಗಳು ಹಣಕಾಸು, ಅಕೌಂಟ್ಸ್, ಕಾರ್ಪೊರೇಟ್ ಆಡಳಿತ, ಮಾನವ ಸಂಪನ್ಮೂಲ ಸೇರಿದಂತೆ ಉದ್ಯಮ ಕ್ಷೇತ್ರದ ಹಲವು ಪ್ರಮುಖ ವಿಷಯಗಳ ಮೇಲೆ ಕೇಂದ್ರಿಕೃತವಾಗಿರುತ್ತವೆ. ಈ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನ ಮತ್ತು ಉದ್ಯೋಗಮುಖಿ ಕೌಶಲ್ಯಗಳ ಕುರಿತು ತರಬೇತಿ ನೀಡಲಾಗುತ್ತದೆ ಎಂದು ವಿಶ್ವ ವಿದ್ಯಾಲಯ ತಿಳಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುಲಪತಿ ಜಯಕರ ಎಸ್.ಎಂ, ಕುಲಸಚಿವ ಶೇಕ್ ಲತೀಫ್ ಮತ್ತು ಸಿಐಐ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸೌಗತ ರಾಯ್ ಚೌಧರಿ ಅವರು ಒಡಂಬಡಿಕೆಗೆ ಸಹಿ ಹಾಕಿದರು.

ನಂತರ ಮಾತನಾಡಿದ ಕುಲಪತಿ ಜಯಕರ್, ‘ಉದ್ಯಮ ವಲಯ, ಕೈಗಾರಿಕೆಗಳ ಅಗತ್ಯಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ರೂಪಿಸುವ ದೃಷ್ಟಿಯಲ್ಲಿ, ಈ ಒಪ್ಪಂದ ಪ್ರಮುಖ ಹೆಜ್ಜೆಯಾಗಿದೆ. ಶಿಕ್ಷಣ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಇದು ಹಲವು ಬದಲಾವಣೆಗಳಿಗೆ ಕಾರಣವಾಗಲಿದೆ’ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕುಲಸಚಿವ (ಮೌಲ್ಯಮಾಪನ) ಶ್ರೀನಿವಾಸ್ ಸಿ. ಕಾನೂನು ನಿಕಾಯದ ಡೀನ್ ಪ್ರೊ. ಸುದೇಶ್ ವಿ. ಸೇರಿದಂತೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಉಪಸ್ಥಿತರಿದ್ದರು.



ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಸಿಐಐ ಸಂಸ್ಥೆಯ ನಡುವೆ ಶೈಕ್ಷಣಿಕ ಒಡಂಬಡಿಕೆಗೆ ಸಹಿ ಹಾಕಿದ ಪತ್ರವನ್ನು ಜಯಕರ್ ಎಂ.ಎಸ್ ಮತ್ತು ಸೌಗತ ರಾಯ್ ಚೌಧರಿ ಪ್ರದರ್ಶಿಸಿದರು



ನಗರದಲ್ಲಿ ಭಾನುವಾರ ಪಿಇಎಸ್ ವಿಶ್ವವಿದ್ಯಾಲಯ ಆಯೋಜಿಸಿದ್ದ ಎಂ.ಆರ್. ದೊರೆಸ್ವಾಮಿ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ (ಎಡದಿಂದ) ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ರಾಧಾಕೃಷ್ಣ ರಾಜು, ಪ್ರೊ. ಜವಾಹರ್ ದೊರೆಸ್ವಾಮಿ ಮತ್ತು ಶಾಸಕ ಅಶ್ವತ್ಥನಾರಾಯಣ ಅವರು ಎಂ.ಆರ್. ದೊರೆಸ್ವಾಮಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಹುಟ್ಟೂರ ಶಾಲೆಗೆ ವೈದ್ಯ ದಂಪತಿ ನೆರವು

ಪ್ರಜಾವಾಣಿ ವಾರ್ತೆ

ಅರಕಲಗೂಡು (ಹಾಸನ ಜಿಲ್ಲೆ): ಬೆಂಗಳೂರಿನಲ್ಲಿ ನೆಲಸಿರುವ ಡಾ.ಜಗದೀಶ್ ಹಾಗೂ ಡಾ.ಸುಧಾ ದಂಪತಿ, ಹುಟ್ಟೂರಾದ ತಾಲ್ಲೂಕಿನ ಅಜ್ಜೂರು ಗ್ರಾಮದ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಗುಣಮಟ್ಟದ ಶಿಕ್ಷಣ ದೊರಕಿಸಬೇಕು ಎಂಬ ಉದ್ದೇಶದಿಂದ ₹22 ಲಕ್ಷ ವೆಚ್ಚದಲ್ಲಿ ಹೊಸದಾಗಿ ಕೊಠಡಿ ನಿರ್ಮಿಸಿಕೊಟ್ಟಿದ್ದಾರೆ.

ದಂತ ವೈದ್ಯರಾದ ದಂಪತಿ, ಶಾಲೆಯಲ್ಲಿ ಡೆಂಟಲ್ ಕೇರ್ ಯಂತ್ರ ಅಳವಡಿಸಿದ್ದು, ಶಾಲೆ ಹಾಗೂ ಗ್ರಾಮದ 13 ವರ್ಷ ವಯೋಮಿತಿಯ ಮಕ್ಕಳ ದಂತ ಆರೋಗ್ಯದ ಕುರಿತು ಕಾಳಜಿ ವಹಿಸಿದ್ದಾರೆ.

ತಾಲ್ಲೂಕಿನ ದೊಡ್ಡಮಗ್ಗೆ ಹೋಬಳಿ ಅಜ್ಜೂರು ಗ್ರಾಮದ ಸರ್ಕಾರಿ ಶಾಲೆಗೆ ಈ ದಂಪತಿ ನಿರ್ಮಿಸಿಕೊಟ್ಟಿರುವ ಕೊಠಡಿಯನ್ನು ಶಾಸಕ ಎ.ಮಂಜು ಭಾನುವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘ಸರ್ಕಾರಿ ಶಾಲೆಗಳಲ್ಲಿ ಕಲಿತು ಉನ್ನತ ಸ್ಥಾನಕ್ಕೆ ಏರಿರುವವರು ಓದಿದ ಶಾಲೆಯ ಅಭಿವೃದ್ಧಿಗೆ ಕೈಜೋಡಿಸಿದಾಗ ಸರ್ಕಾರಿ ಶಾಲೆಗಳ ಸುಧಾರಣೆ ಸಾಧ್ಯವಾಗಲಿದೆ’ ಎಂದರು.

ಡಾ.ಜಗದೀಶ್ ಮಾತನಾಡಿ, ‘ಆಧುನಿಕ ಜಗತ್ತಿನಲ್ಲಿ ಕಂಪ್ಯೂಟರ್ ಮತ್ತು ಇಂಗ್ಲಿಷ್ ಜ್ಞಾನ ಇಲ್ಲದಿದ್ದರೆ ಬದುಕು ಕಟ್ಟಿಕೊಳ್ಳಲು ದುಸ್ತರವಾಗುತ್ತದೆ. ನಗರ ಪ್ರದೇಶದಲ್ಲಿ ಕಲಿಕೆಗೆ ಸಾಕಷ್ಟು ಅವಕಾಶ ಲಭ್ಯವಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೂ ಈ ಅವಕಾಶ ದೊರಕುವಂತಾಗಬೇಕು ಎಂಬ ಉದ್ದೇಶದಿಂದ ಅಗತ್ಯ ಸೌಲಭ್ಯ ಕಲ್ಪಿಸಿಕೊಡಲು ಪ್ರಯತ್ನ ನಡೆಸಿದ್ದೇನೆ’ ಎಂದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

‘ಅಗೆದ ರಸ್ತೆ ದುರಸ್ತಿಗೊಳಿಸಿ’

ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 122ರ ಕೆಂಪಾಪುರ ಅಗ್ರಹಾರದಲ್ಲಿರುವ ಶೇಷಾದ್ರಿಪುರಂ ಕಾಲೇಜಿನ ಪಕ್ಕದ ರಸ್ತೆಯನ್ನು ಪೈಪ್‌ಗಳನ್ನು ಅಳವಡಿಸುವುದಕ್ಕಾಗಿ ಬೆಂಗಳೂರು ಜಲಮಂಡಳಿಯ ಸಿಬ್ಬಂದಿ ಅಗೆದಿದ್ದರು. ಇದರಿಂದ ಈ ರಸ್ತೆಯಲ್ಲಿ ವಾಹನ ಸಂಚಾರವೇ ದುಸ್ತರವಾಗಿತ್ತು. ಪೈಪ್‌ಗಳನ್ನು ಅಳವಡಿಸುವ ಕಾಮಗಾರಿ ಮುಗಿದು ಬಹಳ ದಿನಗಳಾಗಿವೆ. ಆದರೆ, ಇದುವರೆಗೂ ಈ ರಸ್ತೆಗೆ ಡಾಂಬರೀಕರಣ ಮಾಡಿಲ್ಲ. ಸ್ಥಳೀಯ ನಿವಾಸಿಗಳಿಗೆ ನಿತ್ಯ ದೂಳಿನ ಮಜ್ಜನವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಎಂ. ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರ



ಶೇಷಾದ್ರಿಪುರಂ ಕಾಲೇಜಿನ ಮುಂಭಾಗದ ರಸ್ತೆಯನ್ನು ಅಗೆದಿರುವುದು

‘ವಿಲೇವಾರಿ ಆಗದ ಘನತ್ಯಾಜ್ಯ’



ರಾಜರಾಜೇಶ್ವರಿನಗರದ ಕೃಷ್ಣ ರೆಸಿಡೆನ್ಸಿ ಬಡಾವಣೆ ಮುಂಭಾಗದಲ್ಲಿ ಹಾಕಿರುವ ಕಸ

ಕೆಂಗೇರಿ ಉತ್ತರಹಳ್ಳಿ ಮುಖ್ಯರಸ್ತೆ ರಾಜರಾಜೇಶ್ವರಿನಗರದ ವಾರ್ಡ್ ಸಂಖ್ಯೆ-160ರ ವ್ಯಾಪ್ತಿಯ ಕೃಷ್ಣ ರೆಸಿಡೆನ್ಸಿ, ಬ್ಲಾಕ್-1ರ ಬಡಾವಣೆಯ ಮುಂಭಾಗದಲ್ಲಿ ಕಸ ಎಸೆಯಲಾಗಿದ್ದು, ಹಲವು ದಿನಗಳಿಂದ ಈ ತ್ಯಾಜ್ಯವನ್ನು ವಿಲೇವಾರಿ ಮಾಡಿಲ್ಲ. ಇದರಿಂದ ಇಡೀ ಬಡಾವಣೆಯೇ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ರಸ್ತೆಯ ಬದಿಯಲ್ಲಿ ಹಾಕಿರುವ ಕಸವನ್ನು ಬೀಡಾಡಿ ದನಗಳು ಹಾಗೂ ನಾಯಿಗಳು ರಸ್ತೆಗೆ ಎಳೆದು ತರುತ್ತಿವೆ. ಇಲ್ಲಿನ ಕಸ ವಿಲೇವಾರಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ, ಸ್ಪಂದಿಸುತ್ತಿಲ್ಲ.

ಬಸವರಾಜು ಎಂ.ಎಸ್., ರಾಜರಾಜೇಶ್ವರಿನಗರ

‘ರಸ್ತೆ ಗುಂಡಿ ಮುಚ್ಚಲು ಆಗ್ರಹ’



ಕಬ್ಬನ್‌ಪೇಟೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ಕಬ್ಬನ್‌ಪೇಟೆಗೆ ಸಂಪರ್ಕ ಕಲ್ಪಿಸುವ ಮೈಸೂರು ಬ್ಯಾಂಕ್ ವೃತ್ತದ-ವರೆಗಿನ ರಸ್ತೆಯನ್ನು ಇತ್ತೀಚೆಗೆ ಡಾಂಬರೀಕರಣ ಮಾಡಲಾಗಿದೆ. ಮಳೆ ನೀರು ಹರಿದು ಹೋಗುವ ಕಿಂಡಿಯ ಮುಚ್ಚಳ ರಸ್ತೆಯಲ್ಲಿ ಹೂತು ಹೋಗಿದ್ದು, ಗುಂಡಿಯಾಗಿ ಮಾರ್ಪಟ್ಟಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿ ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಉಂಟಾಗುತ್ತದೆ. ಅದರಲ್ಲೂ ದ್ವಿಚಕ್ರ ವಾಹನ ಚಾಲಕರು ಗುಂಡಿಯೊಳಗೆ ಸಿಲುಕಿ, ಬಿದ್ದು ಕೈ ಕಾಲು ಮುರಿದುಕೊಂಡಿದ್ದಾರೆ. ಬಿಬಿಎಂಪಿ ಕೂಡಲೇ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಶಿವಪ್ರಸಾದ್, ಕಬ್ಬನ್‌ಪೇಟೆ

‘ತ್ರಿಪುರ: ಅಂದು–ಇಂದು’ ಸಂವಾದದಲ್ಲಿ ಜಿತೇಂದ್ರ ಚೌಧರಿ

‘ಪ್ರತ್ಯೇಕತಾವಾದಿಗಳ ಜತೆ ಬಿಜೆಪಿ ಮೈತ್ರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ರಿಪುರವನ್ನು ದೇಶದಿಂದ ಪ್ರತ್ಯೇಕಗೊಳಿಸಬೇಕೆಂಬ ಬೇಡಿಕೆ ಇಟ್ಟಿದ್ದ ಉಗ್ರಗಾಮಿಗಳಲ್ಲಿ ಬಹಳಷ್ಟು ಮಂದಿ ಇಂದು ಬಿಜೆಪಿಯಲ್ಲಿದ್ದಾರೆ. ಮತ್ತೊಂದೆಡೆ ಪ್ರತ್ಯೇಕತಾವಾದಿಗಳೊಂದಿಗೆ ಬಿಜೆಪಿ ಗುಪ್ತ ಮೈತ್ರಿ ಹೊಂದಿದೆ ಎಂದು ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ ಅಧ್ಯಕ್ಷ ಜಿತೇಂದ್ರ ಚೌಧರಿ ತಿಳಿಸಿದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಭಾನುವಾರ ಹಮ್ಮಿಕೊಂಡಿದ್ದ ‘ತ್ರಿಪುರ: ಅಂದು–ಇಂದು’ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತ್ಯೇಕತಾವಾದಕ್ಕೆ ರಾಜಕೀಯ ಪರಿಹಾರವನ್ನು ಹುಡುಕುವ ಬದಲಿಗೆ ಬಿಜೆಪಿ ಸರ್ಕಾರ ಯುಎಪಿಎ ಕಾಯ್ದೆ, ದೇಶದ್ರೋಹದ ಕಾಯ್ದೆ ಹಾಗೂ ಭದ್ರತಾ ಪಡೆಗಳ ಬಂದೂಕಿನ ಬಲದಿಂದ ನಿಯಂತ್ರಿಸಲು ಹೊರಟಿದೆ. ಮತಿಯತೆ, ರಾಜಕೀಯ ಕಾರಣಗಳಿಗಾಗಿ ಆಟೊ ಚಾಲಕರು, ಅಂಗಡಿ ನಡೆಸುವವರು ಮುಂತಾದ ಜನಸಾಮಾನ್ಯರ ಮೇಲೆ ದಾಳಿ ಮಾಡಿ ಅವರ ಜೀವನಾಧಾರ ಕಸಿದುಕೊಳ್ಳುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈಗ ತ್ರಿಪುರದಲ್ಲಿ ವಿರೋಧ ಪಕ್ಷವು ಪ್ರಚಾರ ಮಾಡುವಂತಿಲ್ಲ. ಚುನಾವಣೆಗಳಲ್ಲಿ ಮತಗಟ್ಟೆಗಳಿಗೆ ಏಜೆಂಟರನ್ನು ನಿಯೋಜಿಸುವಂತಿಲ್ಲ. ಸಿಪಿಎಂನ 35 ಕಾರ್ಯಕರ್ತರ ಕೊಲೆಗಳಾಗಿವೆ. ಹಲ್ಲೆ, ಗಲಭೆ, ದಾಳಿಗಳ ಬಗೆಗೆ ದೂರು ದಾಖಲಿಸುವುದೂ ಕಷ್ಟವಾಗಿದೆ. ರಾಜ್ಯದಲ್ಲಿ ಸಿಪಿಎಂನ 400ಕ್ಕೂ ಹೆಚ್ಚು ಕಚೇರಿಗಳನ್ನು ಧ್ವಂಸ ಮಾಡಲಾಗಿದೆ. ಚುನಾವಣಾ ಆಯೋಗವೂ ಹೆಚ್ಚಿನ ದೇನೂ ಮಾಡಲಾಗಲಿಲ್ಲ. ತ್ರಿಪುರ ಹಿಂದುತ್ವದ ಪ್ರಯೋಗಶಾಲೆಯಂತೆ ಆಗಿದೆ. ಮಹಿಳೆಯರ ಮೇಲೆ ಹಲ್ಲೆ, ಗಲಭೆ, ಅಪರಾಧಗಳು ಹೆಚ್ಚಿವೆ. ಶಿಕ್ಷಣ ವ್ಯವಸ್ಥೆ ಕುಸಿದು ಬಿದ್ದಿದೆ ಎಂದು ವಿವರಿಸಿದರು.

ತ್ರಿಪುರ ಭಾರತದ ಒಕ್ಕೂಟಕ್ಕೆ 1949ರಲ್ಲಿ ಸೇರ್ಪಡೆಗೊಂಡಿತ್ತು. ಆಗ 3-4 ಲಕ್ಷ ಜನಸಂಖ್ಯೆಯಷ್ಟೇ ಇತ್ತು. ಶೇ 70ರಷ್ಟು ಬುಡಕಟ್ಟು ಸಮುದಾಯದವರಾಗಿದ್ದರು. ಭಾರತ ವಿಭಜನೆಯ ನಂತರ ಅಪಾರ ಪ್ರಮಾಣದಲ್ಲಿ ಬಂಗಾಳಿಗಳು ವಲಸೆ ಬಂದಿದ್ದರಿಂದ ಅವರೇ ಬಹುಸಂಖ್ಯಾತರಾದರು. 1980ರ ನಂತರ ಎಡಪಕ್ಷ ಆಡಳಿತಕ್ಕೆ ಬಂದ ಮೇಲೆ ಶೇ 97ರಷ್ಟು ಜನರು ಸಾಕ್ಷರರಾಗಿ ಕೇರಳವನ್ನೂ ಹಿಂದಿಕ್ಕಿತ್ತು ಎಂದು ತಿಳಿಸಿದರು.

ಆನಂತರ ಬಿಜೆಪಿ ಅಪಪ್ರಚಾರ ಆರಂಭಿಸಿತು. ‘ಮಾಣಿಕ್ ಸರ್ಕಾರ್ ಪ್ರಾಮಾಣಿಕರಾದರೂ ಹೂಡಿಕೆ, ಉದ್ಯೋಗ ಸೃಷ್ಟಿ ಅವರಿಂದ ಆಗುವುದಿಲ್ಲ, ಬಿಜೆಪಿ ಅಧಿಕಾರಕ್ಕೆ ಬಂದರೆ ರಬ್ಬರ್, ಗ್ಯಾಸ್ ಮುಂತಾದ ಉದ್ದಿಮೆಗಳನ್ನು ತರಲಾಗುವುದು, 7 ಲಕ್ಷ ಉದ್ಯೋಗ ಸೃಷ್ಟಿಸಲಾಗುವುದು, 50 ಸಾವಿರ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು, ನೌಕರರ ವೇತನ ದ್ವಿಗುಣ ಮಾಡಲಾಗುವುದು’ ಎಂದೆಲ್ಲ ಭರವಸೆ ನೀಡಿ 299 ಪುಟಗಳ ‘ಮಿಷನ್ ಡಾಕ್ಯುಮೆಂಟ್’ ಆಧಾರದಲ್ಲಿ ಮತ ಕೇಳಿ, ಕಾಂಗ್ರೆಸ್‌ನ ಎಲ್ಲ ಶಾಸಕರನ್ನು ಬಿಜೆಪಿಗೆ ಪಕ್ಷಾಂತರ ಮಾಡಿ ಅಧಿಕಾರಕ್ಕೆ ಬಂತು. ಆದರೆ, ಯಾವ ಭರವಸೆಯನ್ನೂ ಈಡೇರಿಸಿಲ್ಲ ಎಂದು ದೂರಿದರು.

ತ್ರಿಪುರ ಎಡರಂಗ ಸರ್ಕಾರದಲ್ಲಿ 21 ವರ್ಷ ಸಚಿವರಾಗಿದ್ದ, ಸದ್ಯ ವಿರೋಧ ಪಕ್ಷದ ನಾಯಕರಾಗಿರುವ ಜಿತೇಂದ್ರ ಚೌಧರಿ ಜೊತೆಗೆ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಸಂವಾದ ನಡೆಸಿಕೊಟ್ಟರು.



ಸಂವಾದದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಜಿತೇಂದ್ರ ಚೌಧರಿ ಅವರನ್ನು ರಾಜಶೇಖರಮೂರ್ತಿ, ಮಾವಳ್ಳಿ ಶಂಕರ್, ಎಸ್‌ವೈ. ಗುರುಶಾಂತ್ ಸ್ವಾಗತಿಸಿದರು ಪ್ರಜಾವಾಣಿ ಚಿತ್ರ

ಶಿಕ್ಷಣ



ಕೆಲವೊಂದು ಕಷ್ಟವಾಗುವಂಥ ಅಪರಾಧಗಳನ್ನು ಸುಲಭವಾಗಿ ಪತ್ತೆಹಚ್ಚಲು ಫೋರೆನ್ಸಿಕ್ ತಜ್ಞರು ನೆರವಾಗುತ್ತಾರೆ

ಬೇಡಿಕೆಯ ಕೋರ್ಸ್ ಫೋರೆನ್ಸಿಕ್ ಸೈನ್ಸ್



ಡಾ. ಶಶಿಕುಮಾರ್. ಎಲ್

ಫೋರೆನ್ಸಿಕ್ ಸೈನ್ಸ್ ಅಥವಾ ವಿಧಿವಿಜ್ಞಾನ ವಿಭಾಗದಲ್ಲಿ ಪರಿಣತಿ ಪಡೆದ ವೃತ್ತಿಪರರಿಗೆ ಬೇಡಿಕೆ ಹೆಚ್ಚುತ್ತಿದ್ದು, ಪ್ರಮುಖವಾಗಿ ಸೈಬರ್ ಕ್ರೈಂ, ಆನ್‌ಲೈನ್ ವಂಚನೆ ಕಂಡುಹಿಡಿಯಲು ಫೋರೆನ್ಸಿಕ್ ವಿಜ್ಞಾನ ಕ್ಷೇತ್ರದ ತಜ್ಞರ ಅಗತ್ಯವಿದೆ.

ಅಪರಾಧದ ಸ್ವರೂಪದ ತನಿಖೆಗೆ ಪೂರಕ ವೈಜ್ಞಾನಿಕ ಆಧಾರ ಒದಗಿಸುವುದು ವಿಧಿವಿಜ್ಞಾನದ ವೈಶಿಷ್ಟ್ಯ. ಕಾನೂನಿಗೆ ಸಂಬಂಧಪಟ್ಟ ಯಾವುದೇ ವಿಜ್ಞಾನವನ್ನು ಫೋರೆನ್ಸಿಕ್ ಸೈನ್ಸ್ ಎಂದು ಕರೆಯಲಾಗುತ್ತದೆ. ಇದಕ್ಕೆ ಕನ್ನಡದಲ್ಲಿ ವಿಧಿವಿಜ್ಞಾನ, ಅಪರಾಧ ಪತ್ತೆ ಶಾಸ್ತ್ರ, ಅಪರಾಧ ನ್ಯಾಯಶಾಸ್ತ್ರ ಇತ್ಯಾದಿ ಹಲವು ಅರ್ಥಗಳಿವೆ. ಫೋರೆನ್ಸಿಕ್ ವಿಜ್ಞಾನವು ಅಪರಾಧಗಳು (Crime), ಸಾಕ್ಷ್ಯಗಳು (Evidence) ಮತ್ತು ಕ್ರಿಮಿನಲ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಅಧ್ಯಯನದ ಕ್ಷೇತ್ರವಾಗಿದೆ. ಕಾನೂನು ಪ್ರಕ್ರಿಯೆಯಲ್ಲಿ ಅಪರಾಧಿಗಳನ್ನು ಪತ್ತೆಹಚ್ಚಲು ಮತ್ತು ನಿರಪರಾಧಿಗಳಿಗೆ ನ್ಯಾಯ ಒದಗಿಸಲು ವಿಧಿ ವಿಜ್ಞಾನ ಶಾಸ್ತ್ರವು ಸಾಕಷ್ಟು ನೆರವು ನೀಡುತ್ತದೆ.

ಕೆಲವೊಂದು ಕಷ್ಟವಾಗುವಂಥ ಅಪರಾಧಗಳನ್ನು ಸುಲಭವಾಗಿ ಪತ್ತೆಹಚ್ಚಲು ಫೋರೆನ್ಸಿಕ್ ತಜ್ಞರು ನೆರವಾಗುತ್ತಾರೆ. ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಸ್ವಾಭಾವಿಕವಾದ ಒಲವು ಮತ್ತು ಆಸಕ್ತಿ ಇದ್ದು ವಿವೇಚನೆ, ದತ್ತಾಂಶ ಸಂಗ್ರಹಣೆ ಮತ್ತು ನಿರ್ವಹಣೆ, ತಾರ್ಕಿಕ ಪ್ರತಿಪಾದನಾ ಕೌಶಲ, ವಿಶ್ಲೇಷಣಾ ಮತ್ತು ಸಂಶೋಧನಾ ಕೌಶಲ ಸಮಯಪಜ್ಞೆ ಇತ್ಯಾದಿ ಕೌಶಲಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಫೋರೆನ್ಸಿಕ್ ವಿಜ್ಞಾನ ಪದವಿ ಪರೀಕ್ಷೆಯಲ್ಲಿ ತೇರ್ಗಡೆಗೊಂಡು ಉತ್ತಮ ಫಲಿತಾಂಶವನ್ನು ಹೊಂದಿರಬೇಕು.

ಅರ್ಹತೆ: ಪಿಯುಸಿಯಲ್ಲಿ ವಿಜ್ಞಾನವನ್ನು ಓದಿರಬೇಕು. ಶೇ 50ರಷ್ಟು ಅಂಕಗಳನ್ನು ಗಳಿಸಿರಬೇಕು. ಆಧುನಿಕ ತಂತ್ರಜ್ಞಾನದ ಸಹಾಯದಿಂದ ವೈಜ್ಞಾನಿಕವಾಗಿ ಅಪರಾಧದ ಕುರಿತು ತನಿಖೆ ನಡೆಸುವುದನ್ನು ಈ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳಿಗೆ ಕಲಿಸಿಕೊಡಲಾಗುತ್ತದೆ.

ವಿವಿಧ ಕಾನೂನು ಮತ್ತು ಅಪರಾಧ ಸಂಬಂಧಿತ ವಿಷಯಗಳಲ್ಲಿ ವೈಜ್ಞಾನಿಕ ವಿಧಾನಗಳು ಮತ್ತು ಪ್ರಕ್ರಿಯೆಗಳನ್ನು ಒಳಗೊಂಡಿರುವುದರಿಂದ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿಯಬೇಕಾಗುತ್ತದೆ. ಗುರುತಿಸುವಿಕೆ, ಪರೀಕ್ಷೆ ಮತ್ತು ಮೌಲ್ಯಮಾಪನದ ಮೂಲಕ ಭೌತಿಕ ಪುರಾವೆಗಳನ್ನು ಬಹಿರಂಗಪಡಿಸುವುದು ಫೋರೆನ್ಸಿಕ್ ವಿಜ್ಞಾನದ ಮುಖ್ಯ ಕೆಲಸವಾಗಿದೆ. ಅಪರಾಧ ಸಂಬಂಧಿತ ದತ್ತಾಂಶವನ್ನು ವಿಶ್ಲೇಷಿಸಲು ರಸಾಯನವಿಜ್ಞಾನ, ಜೀವವಿಜ್ಞಾನ ಮತ್ತು ಭೌತವಿಜ್ಞಾನ ಸೇರಿ ವಿಜ್ಞಾನದ ವಿವಿಧ ಪ್ರಕಾರಗಳನ್ನು ವಿಧಿವಿಜ್ಞಾನವು ಅವಲಂಬಿಸಿದೆ.

ಲಭ್ಯವಿರುವ ಕಾಲೇಜುಗಳು: ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ, ಕ್ರೈಸ್ಟ್ ವಿಶ್ವವಿದ್ಯಾಲಯ, ಆರ್.ವಿ ವಿಶ್ವವಿದ್ಯಾಲಯ, ಕ್ರಿಸ್ತು ಜಯಂತಿ ಕಾಲೇಜು, ಗಾರ್ಡನ್ ಸಿಟಿ ಕಾಲೇಜು, ಸೌಂದರ್ಯ ಕಾಲೇಜು, ಹರ್ಷ ಕಾಲೇಜು ಹಾಗೂ ಕೃಪಾನಿಧಿ ಕಾಲೇಜು.

ಮೈಸೂರಿನ ಜೆಎಸ್‌ಎಸ್ ಕಾಲೇಜು, ಎಸ್.ಬಿ.ಆರ್. ಆರ್ ಮಹಾಜನ ಕಾಲೇಜು ಹಾಗೂ ಸೇಂಟ್ ಫಿಲೋಮಿನಾ ಕಾಲೇಜು ಮತ್ತು ಧಾರವಾಡದ ಕರ್ನಾಟಕ ವಿಜ್ಞಾನ ಕಾಲೇಜು ಸೇರಿದಂತೆ ರಾಜ್ಯದ ವಿವಿಧ ಕಾಲೇಜುಗಳಲ್ಲಿ ಫೋರೆನ್ಸಿಕ್ ವಿಜ್ಞಾನದ ಪದವಿ ಕೋರ್ಸ್ ನಡೆಸಲಾಗುತ್ತಿದೆ.

ಇದಲ್ಲದೆ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾದ ಗುಜರಾತಿನ ವಿಧಿವಿಜ್ಞಾನ ವಿಶ್ವವಿದ್ಯಾಲಯ ಹಾಗೂ ಹೊಸದಾಗಿ ಆರಂಭಗೊಂಡಿರುವ ಧಾರವಾಡದ ವಿಧಿವಿಜ್ಞಾನ ವಿಶ್ವವಿದ್ಯಾಲಯದಲ್ಲೂ ಫೋರೆನ್ಸಿಕ್ ವಿಜ್ಞಾನದ ಪದವಿ ಕೋರ್ಸ್‌ಗೆ ಸೇರಬಹುದು.

ಉದ್ಯೋಗವಕಾಶಗಳು: ವಿದ್ಯಾಭ್ಯಾಸದ ನಂತರ ಸರ್ಕಾರಿ ಮತ್ತು ಖಾಸಗಿ ಪತ್ತೇದಾರಿ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಪೊಲೀಸ್ ಇಲಾಖೆ, ರಾಜ್ಯ ಮತ್ತು ಕೇಂದ್ರ ವಿಧಿ ವಿಜ್ಞಾನ ಪ್ರಯೋಗಗಳು, ಸಿಐಡಿ, ಸಿಬಿಐ, ಐಬಿ, ನಾರ್ಕೋಟಿಕ್ಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಬ್ಯಾಂಕ್ ಮತ್ತು ಹಣಕಾಸಿನ ಸಂಸ್ಥೆಗಳು, ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ ಸಂಸ್ಥೆ, ಭಾರತೀಯ ರಕ್ಷಣಾ ಮತ್ತು ಅರೆಸೇನಾ ಪಡೆ ಸಂಸ್ಥೆಗಳು, ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೋ, ನ್ಯಾಯಾಂಗ ಸಂಸ್ಥೆ, ಅಬಕಾರಿ ಇಲಾಖೆ ಹಾಗೂ ಇತರೆ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಪ್ರಯತ್ನಿಸಬಹುದು. ಫೋರೆನ್ಸಿಕ್ ವಿಜ್ಞಾನದಲ್ಲಿ ಸ್ನಾತಕೋತ್ತರ ಮತ್ತು ಪಿಎಚ್.ಡಿ ಪದವಿಯನ್ನು ಪೂರ್ಣಗೊಳಿಸಿದವರು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಮತ್ತು ವೈಜ್ಞಾನಿಕ ಸಂಶೋಧಕರಾಗಿ ಕೆಲಸ ನಿರ್ವಹಿಸಲು ಅವಕಾಶವಿರುತ್ತದೆ.

ವಿದ್ಯಾರ್ಥಿ ವೇತನ ಕೈಪಿಡಿ

ಐಡಿಆರ್‌ಬಿಟಿ ಸಮ್ಮರ್ ಇಂಟರ್ನ್‌ಶಿಪ್

ಇನ್‌ಸ್ಟಿಟ್ಯೂಟ್ ಫಾರ್ ಡೆವಲಪ್ಮೆಂಟ್ ಆ್ಯಂಡ್ ರಿಸರ್ಚ್ ಇನ್ ಬ್ಯಾಂಕಿಂಗ್ ಟೆಕ್ನಾಲಜಿ (ಐಡಿಆರ್‌ಬಿಟಿ) ಈ ಇಂಟರ್ನ್‌ಶಿಪ್ ಒದಗಿಸುತ್ತದೆ. ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತಾಂತ್ರಿಕ ಕ್ಷೇತ್ರದಲ್ಲಿ ಹೊಸ ಯೋಜನೆಗಳನ್ನು ಕೈಗೊಳ್ಳಲು ಈ ಇಂಟರ್ನ್‌ಶಿಪ್ ಅವಕಾಶ ನೀಡುತ್ತದೆ.

ಅರ್ಹತೆ: ಮಾನ್ಯತೆ ಪಡೆದ ಸ್ನಾತಕೋತ್ತರ ತಾಂತ್ರಿಕ/ಆಡಳಿತ ಕೋರ್ಸ್‌ಗಳಿಗೆ ಅಥವಾ ಪ್ರತಿಷ್ಠಿತ ಭಾರತೀಯ ಸಂಸ್ಥೆಗಳಲ್ಲಿ ನಾಲ್ಕು ವರ್ಷಗಳ ಎಂಜಿನಿಯರಿಂಗ್ ಪದವಿ ಕೋರ್ಸ್‌ಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಆರ್ಥಿಕ ಸಹಾಯ: ಮಾಸಿಕ ₹12,500 ಸ್ಟೈಪೆಂಡ್

ಅರ್ಜಿ ಸಲ್ಲಿಸುವ ವಿಧಾನ: ಇ-ಮೇಲ್ ಮೂಲಕ: isip@idrbt.ac.in.

ಅರ್ಜಿ ಸಲ್ಲಿಸಲು ಕೊನೆ ದಿನ: 15-4-2025

ಮಾಹಿತಿಗೆ: Short Url: www.b4s.in/pjvi/IDSI1

ಫುಲ್‌ಬ್ರೈಟ್-ನೆಹರೂ ಮಾಸ್ಟರ್ಸ್ ಫೆಲೋಶಿಪ್ಸ್

ಪ್ರತಿಭಾವಂತ ಭಾರತೀಯ ವಿದ್ಯಾರ್ಥಿಗಳಿಗೆ ಯುನೈಟೆಡ್ ಸ್ಟೇಟ್ಸ್-ಇಂಡಿಯಾ ಎಜುಕೇಷನಲ್ ಫೌಂಡೇಷನ್ (ಯುಎಸ್‌ಐಇಎಫ್) ನೀಡುವ ಫೆಲೋಶಿಪ್ ಇದಾಗಿದೆ. ಆಯ್ಕೆಯಾದ ಅಭ್ಯರ್ಥಿಗಳು ಆಯ್ದ ಯುಎಸ್ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ನಿರ್ದಿಷ್ಟ ಅಧ್ಯಯನ ಕ್ಷೇತ್ರಗಳಲ್ಲಿ ಸ್ನಾತಕೋತ್ತರ ಪದವಿ ಮುಂದುವರಿಸಬಹುದು.

ಅರ್ಹತೆ: ಭಾರತೀಯ ವಿಶ್ವವಿದ್ಯಾಲಯದಿಂದ ಯು.ಎಸ್ ಬ್ಯಾಚುಲರ್ಸ್ ಪದವಿಗೆ ಸಮಾನವಾದ ಪದವಿಯಲ್ಲಿ ಕನಿಷ್ಠ ಶೇ 55ರಷ್ಟು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು. ಅಭ್ಯರ್ಥಿಗಳು ನಾಲ್ಕು ವರ್ಷಗಳ ಪದವಿ/ಸ್ನಾತಕೋತ್ತರ ಪದವಿಯನ್ನು ಅಥವಾ 4 ವರ್ಷಗಳಿಗಿಂತ ಕಡಿಮೆ ಅವಧಿಯದ್ದಾಗಿದ್ದರೆ ಪೂರ್ಣಾವಧಿಯ ಸ್ನಾತಕೋತ್ತರ ಡಿಪ್ಲೊಮಾವನ್ನು ಪೂರ್ಣಗೊಳಿಸಿರಬೇಕು. ಕನಿಷ್ಠ 3 ವರ್ಷಗಳ ಪೂರ್ಣಾವಧಿಯ (ವೇತನ ಸಹಿತ) ವೃತ್ತಿಪರ ಕೆಲಸದ ಅನುಭವ ಇರಬೇಕು.

ಆರ್ಥಿಕ ಸಹಾಯ: ಬೋಧನೆ ಮತ್ತು ಶುಲ್ಕಗಳಿಗೆ ಧನಸಹಾಯ ಮತ್ತು ಇತರ ಪ್ರಯೋಜನಗಳು.

ಅರ್ಜಿ ಸಲ್ಲಿಸಲು ಕೊನೆ ದಿನ: 14-05-2025

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/FNMF1



ಫ್ಲಿಪ್‌ಕಾರ್ಟ್ ಫೌಂಡೇಷನ್ ಸ್ಕಾಲರ್‌ಶಿಪ್

ಕಿರಾಣಿ ಅಂಗಡಿ ಮಾಲೀಕರ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ನಿರ್ಮಿಸಲು ಫ್ಲಿಪ್‌ಕಾರ್ಟ್ ಫೌಂಡೇಷನ್ ವಿದ್ಯಾರ್ಥಿವೇತನವನ್ನು ನೀಡುತ್ತಿದೆ. ವೃತ್ತಿಪರ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ಪದವಿ ಕೋರ್ಸ್‌ಗಳಿಗೆ ದಾಖಲಾಗಿರುವ ಕಿರಾಣಿ ಅಂಗಡಿ ಮಾಲೀಕರ ಮಕ್ಕಳ ಸಬಲೀಕರಣಕ್ಕಾಗಿ ಈ ವಿದ್ಯಾರ್ಥಿವೇತನವು ಮೀಸಲಾಗಿದೆ.

ಅರ್ಹತೆ: ಅಭ್ಯರ್ಥಿಗಳು ಪ್ರಸ್ತುತ ಭಾರತದಲ್ಲಿನ ಸರ್ಕಾರಿ ಕಾಲೇಜುಗಳಲ್ಲಿ ವೃತ್ತಿಪರ ಪದವಿ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ಕೋರ್ಸ್‌ಗಳ 1ನೇ ವರ್ಷದಲ್ಲಿ ಅಭ್ಯಾಸ ಮಾಡುತ್ತಿರಬೇಕು. ಹೆತ್ತವರಲ್ಲಿ ಒಬ್ಬರು ಕಿರಾಣಿ ಅಂಗಡಿಯ ಮಾಲೀಕರಾಗಿರಬೇಕು (ಕೆಎಸ್‌ಒ). ಅಭ್ಯರ್ಥಿಗಳು ತಮ್ಮ 12ನೇ ತರಗತಿಯ ಪರೀಕ್ಷೆಗಳಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ಸೇರಿ ₹ 5 ಲಕ್ಷವನ್ನು ಮೀರಬಾರದು.

ಆರ್ಥಿಕ ಸಹಾಯ: ₹ 50,000 ನಿಗದಿತ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆ ದಿನ: 16-04-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/FLIP1

ಪ್ರವೇಶ ಪ್ರಕ್ರಿಯೆ ಆರಂಭ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಪ್ರಸಕ್ತ 2024-25ನೇ ಶೈಕ್ಷಣಿಕ ಸಾಲಿನ ಪ್ರವೇಶ ಪ್ರಕ್ರಿಯೆ ಆರಂಭಿಸಿದೆ. ವಿವಿಧ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಎಸ್.ಡಬ್ಲ್ಯು, ಬಿ.ಬಿ.ಎ, ಬಿ.ಸಿ.ಎ, ಬಿ.ಎಲ್‌ಐ.ಎಸ್ಸಿ, ಸ್ನಾತಕೋತ್ತರ ಕೋರ್ಸುಗಳಾದ ಎಂ.ಎ, ಎಂ.ಎಸ್ಸಿ, ಎಂ.ಕಾಂ, ಎಂ.ಸಿ.ಜೆ, ಎಂ.ಎಸ್.ಡಬ್ಲ್ಯು, ಎಂ.ಎಲ್.ಐಎಸ್ಸಿ, ಎಂಸಿಎ, ಎಂಬಿಎ, ಹಾಗೂ ವಿವಿಧ ಪಿಜಿ ಸರ್ಟಿಫಿಕೇಟ್, ಡಿಪ್ಲೊಮಾ ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಹುದು. ವೆಬ್‌ಸೈಟ್ www.ksoumysuru.ac.in ನಲ್ಲಿ ಅರ್ಜಿಯನ್ನು ಸಲ್ಲಿಸಿ, ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸಬಹುದು. ಮಾಹಿತಿಗೆ ದೂ:080-23448811 ಅಥವಾ ಮೊ: 9741197921 ಸಂಪರ್ಕಿಸಬಹುದು.

ನಿರಾಶಾವಾದಿ ಮಗನನ್ನು ಮತ್ತೆ ಜೀವನ್ಮುಖಿಯಾಗಿಸುವುದು ಹೇಗೆ?

ನಮಗೆ ಇಬ್ಬರು ಮಕ್ಕಳು. ಮಗಳು ಎಂಜಿನಿಯರಿಂಗ್ ಓದುತ್ತಿದ್ದಾಳೆ. ಮಗ ದೊಡ್ಡವನು, ಎಂಜಿನಿಯರಿಂಗ್ ಮಾಡಿ, ಎರಡು ವರ್ಷಗಳಿಂದ ಉದ್ಯೋಗದಲ್ಲಿದ್ದಾನೆ. ಆರಂಭದಿಂದಲೂ ಮಗನದ್ದು ಸಂಕೋಚಪ್ರವೃತ್ತಿ, ಹಿಂಜರಿಕೆಯ ಸ್ವಭಾವ. ಆದರೆ ಓದಿನಲ್ಲಿ ಜಾಣ. ಉದ್ಯೋಗದಾತರಿಂದಲೂ ಉತ್ತಮ ಕೆಲಸಗಾರ ಅನ್ನಿಸಿಕೊಂಡಿದ್ದಾನೆ. ಆದರೆ, ಮೂರು ತಿಂಗಳಿಂದ 'ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ. ಜೀವನದಲ್ಲಿ ಆಸಕ್ತಿ ಇಲ್ಲ. ನಾನು ಸತ್ತರೆ ಎಲ್ಲ ಸಮಸ್ಯೆಗಳಿಗೆ ಪರಿಹಾರ' ಎಂದು ಮೆಸೇಜು ಹಾಕುತ್ತಾನೆ. ಅಪರಿಚಿತ ಊರಿಗೆ ಹೋಗಿ ಇಂಥ ಮೆಸೇಜು ಕಳಿಸಿ, ಫೋನ್ ಸ್ವಿಚ್ ಆಫ್ ಮಾಡಿಕೊಳ್ಳುತ್ತಾನೆ. ಇದಕ್ಕೆ ಕಾರಣವೇನು?



ಸಮಾಧಾನ

ಡಾ.ಡಿ.ಎಂ. ಹೆಗಡೆ

ಸಮಾಲೋಚಕರು

ಮಗನಿಗೆ ಬಹುಶಃ ಇಪ್ಪತ್ತೈದರಿಂದ ಇಪ್ಪತ್ತಾರು ವರ್ಷವಿರಬಹುದು. ನೀವು ಕೊಟ್ಟಿದ್ದು ಅಪೂರ್ಣ ವಿವರಗಳು ಇರಲಿ. ಮೊದಲಿಗೆ ಗಾಬರಿಯಾಗುವುದನ್ನು ಬಿಡಿ. ಹಾಗೆಂದು ಲಘುವಾಗಿ ಪರಿಗಣಿಸಬೇಡಿ. ಅವನು ತೀವ್ರ ತೊಳಲಾಟದಲ್ಲಿರುವಂತೆ ಕಾಣುತ್ತದೆ. ಅವನ ಜೀವನಾನುಭವದಲ್ಲಿ, ಅವನ ಸಮಸ್ಯೆಗೆ ಪರಿಹಾರ ಕಾಣುತ್ತಿಲ್ಲ. ಅದಕ್ಕೇ ಅವನು ಹಾಗೆ ಮೆಸೇಜು ಕಳಿಸುತ್ತಾನೆ. ನಿಮ್ಮಿಂದ ಪರಿಹಾರವನ್ನು ನಿರೀಕ್ಷಿಸುತ್ತಿದ್ದಾನೆ. ಅವನ ಮನಸ್ಸಿನೊಳಗಿನ ಆತಂಕ, ಭಯ ನಿಮ್ಮ ಗಮನಕ್ಕೆ ಬಂದಿಲ್ಲದೇ ಇರಬಹುದು.

ಮಗನಿಗೆ ಭಯವಿದೆ. ಮೊದಲಿನಿಂದಲೂ ಓದಾಳಿಯಾಗಿಯೂ, ಸಂಕೋಚದ ಸ್ವಭಾವದವನಾಗಿಯೂ, ಸಾಕಷ್ಟು ಅಂತರ್ಮುಖಿಯಾಗಿಯೂ ಇರುವ ಸಾಧ್ಯತೆ ಇದೆ. ತೀರ ಆರ್ಥಿಕವಾಗಿ ಕಷ್ಟವಿದ್ದು, ಅವಮಾನಗಳನ್ನು ನುಂಗಿಕೊಂಡು, ಬೆಳೆದಿರುವ ಹಿನ್ನೆಲೆ ಇದ್ದಾಗ, ವ್ಯಕ್ತಿತ್ವದಲ್ಲಿ 'ಸ್ಪ್ಲಿಟ್' (ಮಾನಸಿಕವಾಗಿ ಒಡಕು | ದ್ವಿತ್) ಉಂಟಾಗಿರುವ ಸಾಧ್ಯತೆ ಇರುತ್ತದೆ. ಆಘಾತದ ಪರಿಣಾಮ ಅವನ ಸುಪ್ತಮನಸ್ಸಿನಲ್ಲಿ ತೀವ್ರ ಪರಿಣಾಮವನ್ನುಂಟು ಮಾಡಿರಬಹುದು. ಅವನಿಗೆ ಆಪ್ತರಾದ ಗೆಳೆಯರು ಇರುವ ಸಾಧ್ಯತೆಯೂ ಕಡಿಮೆ. ಇದ್ದ ಗೆಳೆಯರೂ ಬೇರೆಲ್ಲೋ ಹೋಗಿರಬಹುದು. ಅಥವಾ, ಅವರು ಯಶಸ್ಸಿನ ಹಾದಿಯಲ್ಲಿ ಇವನಿಗಿಂತ ಮುಂದಿರಬಹುದು. ಇವನೊಳಗಿನ ಕೀಳರಿಮೆ ಹೆಚ್ಚಿ, ಚುಚ್ಚುತ್ತಿರಬಹುದು. ಹೀಗೆ ನೂರೆಂಟು ಕಾರಣಗಳನ್ನು ಪಟ್ಟಿ ಮಾಡಬಹುದು.

ಮಗನಿಗೆ ಯಾವುದನ್ನೋ ಕಳೆದುಕೊಂಡ ಆತಂಕವಿರಬಹುದು. ಅದನ್ನು ಹೇಗಾದರೂ ಮಾಡಿ ಪಡೆದುಕೊಳ್ಳಬಹುದಾದ ಸಣ್ಣ ಆಸೆಯೂ ಇದೆ. ಪರೋಕ್ಷವಾಗಿ, ಪಾಲಕರ ಸಹಾಯವನ್ನೂ ನಿರೀಕ್ಷಿಸುತ್ತಿರಬಹುದು. ಅವನಿಗೆ ಒಳ್ಳೆಯ ಕೆಲಸವಿದೆ. ಒಳ್ಳೆಯ ಸಂಬಳ ಇದೆ. ಆಫೀಸಿನಲ್ಲಿ ಗೌರವವಿದೆ. ಇಷ್ಟಾಗಿದ್ದಾಗ್ಯೂ ಅವನಿಗೆ ಆತ್ಮಹತ್ಯೆಯ ಆಲೋಚನೆ ಬರುತ್ತಿದೆ ಎಂದ ಮೇಲೆ, ಅವನಿಗೆ ಬಹುಶಃ ಪ್ರೀತಿಯ ವಿಷಯದಲ್ಲಿ ಏರುಪೇರಾಗಿರುವ ಸಾಧ್ಯತೆ ಹೆಚ್ಚಿದೆ. ಅವಳು ಅವನನ್ನು ತಿರಸ್ಕರಿಸಿರಬಹುದು. ಅವಳ ತಿರಸ್ಕಾರವನ್ನು ಜೀರ್ಣಿಸಿಕೊಳ್ಳಲಿಕ್ಕಾಗದೇ ಅವನು ನರಳುತ್ತಿರಬಹುದು. ಅವಳನ್ನು ಪಡೆದುಕೊಳ್ಳುವುದಕ್ಕೆ ಪಾಲಕರ ಸಹಾಯದ ನಿರೀಕ್ಷೆಯಲ್ಲಿರಬಹುದು. ಈ ದಿಸೆಯಲ್ಲಿಯೂ ನೀವು ಅವನ ಹತ್ತಿರ ಆತ್ಮೀಯವಾಗಿ ಮಾತನಾಡುವುದು ಒಳ್ಳೆಯದು.

ಇಷ್ಟಕ್ಕೂ ಅವನಲ್ಲಿ ಧನಾತ್ಮಕ ಬದಲಾವಣೆಗಳು ಕಾಣದಿದ್ದರೆ, ಸೂಕ್ತ ಮನೋವೈದ್ಯರನ್ನು ಸಂಪರ್ಕಿಸಿ. 'ತೋಳ ಬಂತು ತೋಳ' ಎನ್ನುವ ಕತೆಯ ಹಾಗೆ ಜೀವನದಲ್ಲಿ, ಆಗಬಾರದು. ಅಷ್ಟು ಎಚ್ಚರಿಕೆ ಎರಡೂ ಕಡೆಗಳಿಂದ ಇದ್ದರೆ ಒಳ್ಳೆಯದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

40) ಮಿಶ್ರ ಬೇಸಾಯ ಎಂದರೇನು?

ಉತ್ತರ: ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕೆ ಅಲ್ಲದೇ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವುದು. ಇದಕ್ಕೆ 'ಮಿಶ್ರ ಬೇಸಾಯ' ಎಂದು ಕರೆಯುವರು

41) ಭಾರತದಲ್ಲಿ ಕಾಲುವೆ ನೀರಾವರಿಯನ್ನು ವ್ಯಾಪಕವಾಗಿ ಬಳಸಿಕೊಂಡ ರಾಜ್ಯಗಳಾವುವು?

ಉತ್ತರ:– ಭಾರತದಲ್ಲಿ ಕಾಲುವೆ ನೀರಾವರಿ ವ್ಯವಸ್ಥೆಯು ವ್ಯಾಪಕವಾಗಿ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಬಿಹಾರ, ಮಧ್ಯಪ್ರದೇಶ, ರಾಜಸ್ತಾನ, ಆಂಧ್ರಪ್ರದೇಶ, ಗುಜರಾತ್, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅಭಿವೃದ್ಧಿಗೊಂಡಿದೆ.

42) ಉತ್ತರದ ಮಹಾ ಮೈದಾನ ಬಗ್ಗೆ ಬರೆಯಿರಿ.


ಉತ್ತರ : ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನವೆಂತಲೂ ಕರೆಯುವರು. ಇದು ಉತ್ತರದಲ್ಲಿ ಹಿಮಾಲಯ ಪರ್ವತಗಳು ಹಾಗೂ ದಕ್ಷಿಣದಲ್ಲಿ ಪರ್ಯಾಯ ಪ್ರಸ್ಥಭೂಮಿಯ ನಡುವೆ ಕಂಡುಬರುವುದು. ಇದು ಪಶ್ಚಿಮದಲ್ಲಿ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯವರೆಗೂ ಹಬ್ಬಿದೆ. ಇದು ಪೂರ್ವ ಮತ್ತು ಪಶ್ಚಿಮವಾಗಿ ಸುಮಾರು 2400 ಕಿ. ಮೀ ಉದ್ದವಾಗಿದೆ. ಈ ಮೈದಾನವು 70 ರಿಂದ 500 ಕಿ. ಮೀ. ಅಗಲವಾಗಿದೆ. ಈ ಮೈದಾನವು ಬಹುತೇಕವಾಗಿ ಸಮತಟ್ಟಾಗಿದೆ. ಉತ್ತರ ಭಾರತದ ಮೈದಾನವು, ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವ ಸಂಚಯನ ಮೈದಾನವಾಗಿದೆ.

43) ಭಾರತದ ನಕಾಶೆಯನ್ನು ಬಿಡಿಸಿ, ಕೆಳಗಿನವುಗಳನ್ನು ಬಿಡಿಸಿ

ಎ) 23 1/2° ಉತ್ತರ ಅಕ್ಷಾಂಶ ಬಿ) ನರ್ಮದಾ ನದಿ

ಸಿ) ದೆಹಲಿ.

ಉತ್ತರ:–



44) ಪ್ಲಾಸಿ ಕದನದ ಪರಿಣಾಮಗಳೇನು?

ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

45) ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ

ಎ) ಕೋಲ್ಕತ್ತಾ ಬಿ) ಕಾವೇರಿ ನದಿ

ಸಿ) 82 1/2° ಪೂರ್ವ ರೇಖಾಂಶ

ಉತ್ತರ:–



46) ಬ್ರಿಟಿಷ್ ಶಿಕ್ಷಣದ ಪರಿಣಾಮಗಳಾವುವು?

ಉತ್ತರ:– ಬ್ರಿಟಿಷ್ ಶಿಕ್ಷಣದ ಪರಿಣಾಮಗಳು:–

1. ಭಾರತೀಯರು ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
2. ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. ಇದರಿಂದ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆಯ ಸ್ವರೂಪವನ್ನು ಕಾಣತೊಡಗಿತು.
3. ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು. ವಿಶೇಷವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ಪತ್ರಿಕೆಗಳಲ್ಲಿ ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.
4. ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.
5. ಜೆ.ಎಸ್. ಮಿಲ್, ರೂಸೋ, ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
6. ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.

CET MATHEMATICS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

MULTIPLE CHOICE QUESTIONS

15) An urn contains 9 balls, 2 of which are white, 3 blue and 4 black. 3 balls are drawn at random from the urn. The chance that 2 balls will be of the same colour and the third of a different colour is..............................

(A) $\frac{45}{84}$ (B) $\frac{55}{84}$

(C) $\frac{35}{84}$ (D) $\frac{25}{84}$

Ans : (B) $\frac{55}{84}$

We can have 2 white and 1 blue or 1 black, 2 blue and 1 white or 1 black and 2 black, 1 white or 1 blue.

$$\text{The required probability} = \frac{2C_2(3C_1+4C_1)}{9C_3} + \frac{3C_2(2C_1+4C_1)}{9C_3} + \frac{4C_2(2C_1+3C_1)}{9C_3}$$

$$= \frac{7+18+30}{84} = \frac{55}{84}.$$

16) 6 boys and 6 girls sit in a row at random. The probability that all the girls sit together is

(A) $\frac{1}{432}$ (B) $\frac{12}{431}$

(C) $\frac{1}{132}$ (D) None of these

Ans : (C) $\frac{1}{132}$

Expln:-

Suppose 6 boys are seated as in the figure.

↑ □ ↑ □ ↑ □ ↑ □ ↑ □ ↑ □ ↑

B_1 B_2 B_3 B_4 B_5 B_6

There are 7 places for girls which can be considered as 1 unit.

Total 12 persons are there who can be arranged in 12! Ways.

$$\therefore \text{Required probability} = \frac{6! \times 7!}{12!} = \frac{6\times5\times4\times3\times2\times1\times7!}{12\times11\times10\times9\times8\times7!} = \frac{1}{132}.$$

17) Three dice are rolled once. The chance of getting a score of 5 is..........................

(A) $\frac{5}{216}$ (B) $\frac{1}{6}$

(C) $\frac{1}{36}$ (D) $\frac{1}{7^2}$

Ans : (C) $\frac{1}{36}$

Expln:- Since three dice are thrown, the total number of points in the sample space S is $6\times6\times6 = 216$.

E = Event of getting a total of 5.

$E = \{(1, 1, 3), (1, 3, 1), (3, 1, 1), (1, 2, 2), (2, 1, 2), (2, 2, 1)\}$

$n(E) = 6. \therefore \text{Required probability} = \frac{6}{216} = \frac{1}{36}.$

18) A bag contains 3 white, 4 black, 2 red balls. If 2 balls are drawn at random, then the probability that both the balls are white is.........

(A) $\frac{1}{18}$ (B) $\frac{1}{36}$

(C) $\frac{1}{12}$ (D) $\frac{1}{24}$

Ans : (C) $\frac{1}{12}$

Expln:- Total no. of balls = 9.

Any two can be chosen in $9C_2$ ways.

From 3 white, any 2 white balls can be chosen in $3C_2$ ways.

$$\therefore \text{Required probability} = \frac{3C_2}{9C_2} = \frac{3}{\frac{9.8}{1.2}} = \frac{3}{36} = \frac{1}{12}.$$

19) The Contrapositive statement of the statement " If x is a prime number, then x is odd" is

A) If x is not a Prime number, then x is not odd

B) If x is a Prime number, then x is not odd

C) If x is not a Prime number, then x is odd

D) If x is not odd, then x is not a prime number

Ans:-D

Expln:- Let P : x is a prime number

Q : let x be odd

Contrapositive statement is $\sim q \rightarrow \sim p$

i.e. if x is not an odd number then x is not a prime number

20) The distance of the point(-2, 4, -5) from the line $\frac{x+3}{3} = \frac{y-4}{5} = \frac{z-4}{6}$ **is**

(A) $\frac{\sqrt{37}}{10}$ (B) $\sqrt{\frac{37}{10}}$

(C) $\frac{37}{\sqrt{10}}$ (D) $\frac{37}{10}$

Ans : (B) $\sqrt{\frac{37}{10}}$

Exp ln : –Any point on the line given is of the form $3r-3, 5r+4, 6r-8$

Let R be the foot of ⊥r from $P(-2, 4, -5)$ on the line given Then $R = (3r-3, 5r+4, 6r-8)$

$\therefore 3(3r-1) + 5r + 4, 6r - 8$

The direction cosinnes of the line PR are proportional to $3r-1, 5r, 6r-3$ PR is ⊥r to the line given

$$\therefore 3(3r-1) + 5 \times 5r + 6(6r-3) = 0$$

ie $9r - 3 + 25r + 36r - 18 = 0$

$70r = 21 \therefore r = \frac{21}{70} = \frac{3}{10}$

$\therefore$ The coordinates of R are $\left(\frac{9}{10} - 3, \frac{15}{10} + 4, \frac{18}{10} - 8\right)$

i.e, $R = \left(-\frac{21}{10}, \frac{55}{10}, \frac{62}{10}\right)$

The distance between $P(-2, 4, -5)$ and $R\left(-\frac{21}{10}, \frac{55}{10}, \frac{62}{10}\right)^2$

is given by $PR^2 = \left(\frac{21}{10} + 2\right)^2 + \left(\frac{55}{10} - 4\right)^2 + \left(-\frac{62}{10} + 5\right)^2$

$$= \frac{1}{100} + \frac{15^2}{100} + \frac{12^2}{100} = \frac{1+225+144}{100} = \frac{370}{100} = \frac{37}{10}$$

$PR = \sqrt{\frac{37}{10}}$

ಆಲಮಟ್ಟಿಗೆ ಸ್ಥಳಾಂತರವಾಗದ ಕೆಬಿಜೆಎನ್ಎಲ್ ಕಚೇರಿ

• ಜಯಸಿಂಹ ಆರ್.

ಬೆಂಗಳೂರು: ಕೃಷ್ಣ ಭಾಗ್ಯ ಜಲ ನಿಗಮದ (ಕೆಬಿಜೆಎನ್ಎಲ್) ಕಚೇರಿಯನ್ನು ಆಲಮಟ್ಟಿಗೆ ಸ್ಥಳಾಂತರಿಸಿ ಎಂದು ಜಲ ಸಂಪನ್ಮೂಲ ಇಲಾಖೆಯು 2019ರಿಂದ ಹಲವು ಬಾರಿ ಆದೇಶ ಕಳುಹಿಸಿದ್ದರೂ ಅದು ಪಾಲನೆಯಾಗಿಲ್ಲ.

ಈ ಸಂಬಂಧ ರಾಜ್ಯ ಪತ್ರದಲ್ಲಿನ ಅಧಿಸೂಚನೆ, ಸರ್ಕಾರಿ ಆದೇಶ ಮತ್ತು ಸೂಚನಾಪತ್ರಗಳನ್ನು ಕಡೆಗಣಿಸಿರುವ ನಿಗಮವು, ಕಚೇರಿಯನ್ನು ಬೆಂಗಳೂರಿನಲ್ಲೇ ಉಳಿಸಿಕೊಂಡಿದೆ.

ಈ ಮಧ್ಯೆ ಈಚೆಗೆ, 'ಕಚೇರಿಯನ್ನು ಉತ್ತರ ಕರ್ನಾಟಕಕ್ಕೆ ಸ್ಥಳಾಂತರಿಸುವ ಸಂಬಂಧ ಸರ್ಕಾರದಿಂದ ಯಾವುದೇ ಆದೇಶ ಬಂದಿಲ್ಲ' ಎಂದು ಆರ್‌ಟಿಐ ಅರ್ಜಿಯೊಂದಕ್ಕೆ ನಿಗಮವು ಉತ್ತರ ನೀಡಿದೆ.

ಉತ್ತರ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಯನ್ನು ಉತ್ತೇಜಿಸಲು ಮತ್ತು ಆ ಭಾಗದ ಜನರಿಗೆ ಆಡಳಿತ ಹತ್ತಿರವಾಗಲಿ ಎಂದು 2019ರ ಜನವರಿಯಲ್ಲಿ ಕೃಷ್ಣ ಭಾಗ್ಯ ಜಲ ನಿಗಮವೂ ಸೇರಿ ವಿವಿಧ ಇಲಾಖೆಗಳ ಒಂಬತ್ತು ಕಚೇರಿಗಳನ್ನು ಉತ್ತರ ಕರ್ನಾಟಕಕ್ಕೆ ಸ್ಥಳಾಂತರಿಸಲು ಅಧಿಸೂಚನೆ ಹೊರಡಿಸಿತ್ತು.

2021ರಲ್ಲೂ ನಿಗಮದ ಕಚೇರಿ ಸ್ಥಳಾಂತರವಾಗಿರಲಿಲ್ಲ. ಈ ವಿಳಂಬವನ್ನು ಪ್ರಶ್ನಿಸಿ 2021ರಲ್ಲೇ ರಾಜ್ಯ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿತ್ತು. ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿತ್ತು.



2022ರ ಜೂನ್ 8ರಂದು ಜಲ ಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೃಷ್ಣ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದಿದ್ದ ಪತ್ರ

ಈ ಸಂಬಂಧ ಜಲ ಸಂಪನ್ಮೂಲ ಇಲಾಖೆಗೆ 2021ರ ನವೆಂಬರ್ 24ರಂದು ಪತ್ರ ಬರೆದಿದ್ದ ನಿಗಮದ ವ್ಯವಸ್ಥಾಪಕ ನಿರ್ದೇಶಕ, 'ಕಚೇರಿ ಸ್ಥಳಾಂತರದಿಂದ ಆಡಳಿತಾತ್ಮಕ ತೊಂದರೆಗಳಾಗುತ್ತವೆ. ಕೆಲ ಸಿಬ್ಬಂದಿಯನ್ನಷ್ಟೇ ವರ್ಗಾಯಿಸುತ್ತೇವೆ' ಎಂದು ಪ್ರಸ್ತಾವ ಸಲ್ಲಿಸಿದ್ದರು.

ಪ್ರಸ್ತಾವವನ್ನು ನಿರಾಕರಿಸಿದ್ದ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ 2022ರ ಮೇ 12ರಂದು ತುರ್ತು ಪತ್ರ ಬರೆದಿದ್ದರು. 'ಈ ಸಂಬಂಧ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಬೇಕಿರುತ್ತದೆ ಮತ್ತು ಜನರ ಅನುಕೂಲಕ್ಕಾಗಿ ಕಚೇರಿಯನ್ನು ಸ್ಥಳಾಂತರ ಮಾಡಬೇಕಿರುತ್ತದೆ. ಒಂದು ವಾರದಲ್ಲಿ ಕಚೇರಿಯನ್ನು ಸ್ಥಳಾಂತರಿಸಿ, ಅನುಪಾಲನಾ ವರದಿ ನೀಡಿ' ಎಂದು ಸೂಚಿಸಿದ್ದರು.

ಇಲಾಖೆಗೆ 2022ರ ಮೇ 19ರಂದು ಮತ್ತೆ ಪತ್ರ ಬರೆದಿದ್ದ ನಿಗಮದ ವ್ಯವಸ್ಥಾಪಕ ನಿರ್ದೇಶಕ, 'ನಿಗಮದ ಸಂಪರ್ಕ ಕಚೇರಿ ಮತ್ತು ಕನಿಷ್ಠ ಸಿಬ್ಬಂದಿಯನ್ನು ಬೆಂಗಳೂರಿನಲ್ಲೇ ಉಳಿಸಿಕೊಂಡು, ಉಳಿದ ಸಿಬ್ಬಂದಿಯನ್ನು 4 ರಿಂದ 6ವಾರಗಳಲ್ಲಿ ಸ್ಥಳಾಂತರಿಸುತ್ತೇವೆ' ಎಂದು ಮರುಪ್ರಸ್ತಾವ ಸಲ್ಲಿಸಿದ್ದರು.

ಇಲಾಖೆಯು ಇದನ್ನೂ ನಿರಾಕರಿಸಿತ್ತು. 'ನಿಮ್ಮದು ಸರ್ಕಾರದ ಜನಪರ ನೀತಿಗೆ ವಿರುದ್ಧದ ಧೋರಣೆಯಾಗಿರುತ್ತದೆ. ಇನ್ನೊಂದು ವಾರದಲ್ಲಿ ಕಚೇರಿ ಸ್ಥಳಾಂತರಿಸಿ. ಈ ಸಂಬಂಧ ಇನ್ನು ಮುಂದೆ ಯಾವುದೇ ಪತ್ರ ವ್ಯವಹಾರ ನಡೆಸಬೇಡಿ' ಎಂದು ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಕಟ್ಟುನಿಟ್ಟಾಗಿ 2022ರ ಜೂನ್ 6ರಂದು ಸೂಚಿಸಿದ್ದರು.

'ಕಚೇರಿ ಸ್ಥಳಾಂತರಕ್ಕೆ ಆದೇಶ ನೀಡಲಾಗಿದೆ' ಎಂದು ಇಲಾಖೆಯು ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿತ್ತು. ಆದರೆ ಕಚೇರಿ ಈವರೆಗೂ ಬೆಂಗಳೂರಿನಲ್ಲೇ ಕಾರ್ಯನಿರ್ವಹಿಸುತ್ತಿದೆ. ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ನಿಗಮದ ವ್ಯವಸ್ಥಾಪಕರಿಗೆ ಹಲವು ಬಾರಿ ಮಾಡಿದ ಕರೆಗಳನ್ನು ಅವರು ಸ್ವೀಕರಿಸಲಿಲ್ಲ. ವಾಟ್ಸ್‌ಆ್ಯಪ್ ಸಂದೇಶಕ್ಕೂ ಪ್ರತಿಕ್ರಿಯೆ ನೀಡಿಲ್ಲ.

'ಆರ್‌ಟಿಐ ಅರ್ಜಿಗೆ ಸುಳ್ಳು ಉತ್ತರ'

ಕಚೇರಿ ಸ್ಥಳಾಂತರಕ್ಕೆ ರಾಜ್ಯ ಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಜಲಸಂಪನ್ಮೂಲ ಇಲಾಖೆಯಿಂದ ನಿಗಮಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರವು ಹೈಕೋರ್ಟ್‌ಗೂ ಪ್ರಮಾಣ ಪತ್ರ ಸಲ್ಲಿಸಿದೆ. ಆದರೆ ಸರ್ಕಾರದಿಂದ ಆದೇಶವೇ ಬಂದಿಲ್ಲ ಎಂದು ನಿಗಮ ಆರ್‌ಟಿಐ ಅರ್ಜಿಗೆ ಸುಳ್ಳು ಉತ್ತರ ನೀಡಿದೆ. ಬೆಂಗಳೂರಿನಲ್ಲಿ ಆರಾಮವಾಗಿ ಇರುವ ಅಧಿಕಾರಿಗಳಿಗೆ, ಆಲಮಟ್ಟಿಗೆ ಬರಲು ಮನಸಿಲ್ಲ. ಅಧಿಕಾರಿಗಳ ಸ್ವಹಿತಾಸಕ್ತಿ ಕಾರಣದಿಂದ ನಮ್ಮ ಭಾಗದ ಜನರಿಗೆ ತೊಂದರೆಯಾಗುತ್ತಿದೆ.

ಯಾಸಿನ್ ಎನ್.ಜವಳಿ, ಅಧ್ಯಕ್ಷ, ಉತ್ತರ ಕರ್ನಾಟಕ ರೈತರ ಅಭಿವೃದ್ಧಿ ಸಂಘ

ಮುಖ್ಯಾಂಶಗಳು

- 2019ರಲ್ಲೇ ಸ್ಥಳಾಂತರಕ್ಕೆ ಸರ್ಕಾರದಿಂದ ಅಧಿಸೂಚನೆ
- 2021ರಲ್ಲಿ ಜಲ ಸಂಪನ್ಮೂಲ ಇಲಾಖೆಯಿಂದ ಆದೇಶ
- ಇಲಾಖೆ ಆದೇಶ–ಸೂಚನೆ ಪಾಲಿಸದ ನಿಗಮ



'ಅಪ್ಪು' ಸ್ಮರಣೆ

ಚಿತ್ರ ನಟ ಪುನೀತ್ ರಾಜಕುಮಾರ್ ಜನ್ಮದಿನದ ಅಂಗವಾಗಿ 'ಪುನೀತ್ ಕಲಾವಿದರ ಬಳಗ'ದ ಸದಸ್ಯರು ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇಗುಲದ ಮುಂಭಾಗ ಭಾನುವಾರ ರಂಗೋಲಿಯಲ್ಲಿ ಪುನೀತ್ ಚಿತ್ರ ಬಿಡಿಸಿದರು. 8 ಸಾವಿರ ಚ.ಅಡಿ. ವಿಸ್ತೀರ್ಣದಲ್ಲಿ 7 ಗಂಟೆಗಳಲ್ಲಿ ಈ ಚಿತ್ರ ಬಿಡಿಸಲಾಗಿದ್ದು, ಕಲಾವಿದರಾದ ಎಸ್. ಪುನೀತ್ ಕುಮಾರ್, ಸಿ. ಲಕ್ಷ್ಮಿ, ಸಿ. ಸಂಪ್ರೀತ್, ಪಿ. ಆದಿತ್ಯ ಹಾಗೂ ರಾಘವ್ ಹರಳಿಕಟ್ಟಿ ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು ಚಿತ್ರ: ಹಂಪಾ ನಾಗರಾಜ್

ಯುವ ಕಾಂಗ್ರೆಸ್: ಅಧಿಕಾರ ಸ್ವೀಕಾರ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಯುವ ಕಾಂಗ್ರೆಸ್ ನೂತನ ಅಧ್ಯಕ್ಷರಾಗಿ ಎಚ್.ಎಸ್. ಮಂಜುನಾಥ್ ಗೌಡ ಅವರು ಸೋಮವಾರ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ 'ಯುವ ಸಂಕಲ್ಪ' ಪರಿಕಲ್ಪನೆಯಡಿ ಬೆಳಿಗ್ಗೆ 11.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಹಾಲಿ ಅಧ್ಯಕ್ಷ ಮೊಹಮ್ಮದ್ ಹ್ಯಾರಿಸ್ ನಲಪಾಡ್ ಅವರು ಮಂಜುನಾಥ್ ಅವರಿಗೆ ಅಧಿಕಾರ ಹಸ್ತಾಂತರಿಸಲಿದ್ದಾರೆ.



ಮಂಜುನಾಥ್ ಗೌಡ

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ ಬಾನು ಚಿಬ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಸಂಗೀತ, ನೃತ್ಯ ಪರೀಕ್ಷೆ: ಪಠ್ಯಕ್ರಮ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ 2024–25ನೇ ಸಾಲಿನಲ್ಲಿ ನಡೆಸಲಾಗುವ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪಠ್ಯಕ್ರಮವನ್ನು ಪರಿಷ್ಕರಿಸಲಾಗಿದೆ.

ವಿದ್ಯಾರ್ಥಿಗಳು ಹಾಗೂ ಪೋಷಕರ ಕೋರಿಕೆಯ ಮೇರೆಗೆ, ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿ (ಬಿಒಎಸ್) ಶಿಫಾರಸಿನಂತೆ ಕ್ರಮ ಕೈಗೊಳ್ಳಲಾಗಿದೆ.

ಸಂಗೀತ, ನೃತ್ಯ ಹಾಗೂ ತಾಳವಾದ್ಯ ಹಿರಿಯ ದರ್ಜೆಗೆ (ಸೀನಿಯರ್) ಅರ್ಜಿ ಸಲ್ಲಿಸಲು ಅಭ್ಯರ್ಥಿಯು ಕಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 2 ವರ್ಷಗಳಾಗಿರಬೇಕು ಅಥವಾ ಅಭ್ಯರ್ಥಿಗೆ 17 ವರ್ಷ ತುಂಬಿರಬೇಕು ಅಥವಾ ಸಂಗೀತ/ನೃತ್ಯ/ ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ ಪದವಿಪೂರ್ವ (ಪಿಯುಸಿ) ಶಿಕ್ಷಣ ಇಲಾಖೆ ನಡೆಸುವ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಂಥವರು ನೇರವಾಗಿ ಹಿರಿಯ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಜೂನಿಯರ್, ಸೀನಿಯರ್, ವಿದ್ವತ್‌ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ಅಭ್ಯರ್ಥಿಗಳು ಮರು ಪರೀಕ್ಷೆಗೆ ಮಾರ್ಚ್ 17ರಿಂದ ಅರ್ಜಿ ಸಲ್ಲಿಸಬಹುದು.

ಈ ಪರೀಕ್ಷೆಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಮಹಾರಾಷ್ಟ್ರ ಗೀತೆ: ಮೂವರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ


ಬೆಳಗಾವಿ: ಇಲ್ಲಿನ ಚವಾಟ್ ಗಲ್ಲಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಶುಕ್ರವಾರ ಆಯೋಜಿಸಿದ್ದ ಹೋಳಿ ಆಚರಣೆ ವೇಳೆ, 'ಜೈ ಜೈ ಮಹಾರಾಷ್ಟ್ರ ಮಾಝಾ (ನನ್ನ ಮಹಾರಾಷ್ಟ್ರಕ್ಕೆ ಜಯವಾಗಲಿ)' ಎಂಬ ಮಹಾರಾಷ್ಟ್ರ ನಾಡಗೀತೆಗೆ ಯುವಜನರು ಕುಣಿದ ಪ್ರಕರಣದಲ್ಲಿ ಮೂವರ ವಿರುದ್ಧ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಾರ್ಯಕ್ರಮ ಆಯೋಜಕರಾದ ಚವಾಟ್ ಗಲ್ಲಿಯ ಸುನೀಲ ಜಾಧವ, ಡಾಲ್ಬಿ ಮಾಲೀಕ ತಾಲ್ಲೂಕಿನ ಗೋಜಗಾ ಗ್ರಾಮದ ವೈಭವ ಗಾವಡೆ ಮತ್ತು ಡಾಲ್ಬಿ ಆಪರೇಟರ್ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿ, ತನಿಖೆ ಕೈಗೊಂಡಿದ್ದೇವೆ' ಎಂದು ಪೊಲೀಸರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಮಂಗಳೂರು ಜೈಲಿನಲ್ಲಿ ಕೈದಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯೊಬ್ಬ ಶೌಚಾಲಯದ ಕಿಟಕಿಗೆ ಶಾಲಿನಲ್ಲಿ ನೇಣುಬಿಗಿದುಕೊಂಡು ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.



ಪ್ರಕಾಶ್

ಲೈಂಗಿಕ ಕಿರುಕುಳದಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ಬುಧವಾರ ಬಂಧನಕ್ಕೊಳಗಾಗಿದ್ದ ಮೂಡುಬಿದಿರೆಯ ಮಾರಿಗುಡಿ ದೇವಸ್ಥಾನ ಬಳಿಯ ನಿವಾಸಿ ಪ್ರಕಾಶ್ ಗೋಪಾಲ ಮೂಲ್ಯ (43) ಆತ್ಮಹತ್ಯೆ ಮಾಡಿಕೊಂಡ ಆರೋಪಿ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಜೈಲಿನ ಬಿ ಬ್ಯಾರಕ್‌ನ ಶೌಚಾಲಯದ ಕಿಟಕಿಯ ಸರಳುಗಳಿಗೆ ಆರೋಪಿ ಮುಂಜಾನೆ ಶಾಲಿನಿಂದ ನೇಣು ಬಿಗಿದುಕೊಂಡಿದ್ದನ್ನು ಜೈಲಿನ ಭದ್ರತಾ ಸಿಬ್ಬಂದಿ ಗಮನಿಸಿದ್ದರು. ಆತನನ್ನು ತಕ್ಷಣವೇ ಜಿಲ್ಲಾ ಸರ್ಕಾರಿ ವೆನ್ಲಾಕ್ ಆಸ್ಪತ್ರೆಗೆ ಜೈಲಿನ ವಾಹನದಲ್ಲಿ ಕರೆದೊಯ್ದಿದ್ದರು. ಆತ ಮೃತಪಟ್ಟಿರುವುದಾಗಿ ಆಸ್ಪತ್ರೆಯ ವೈದ್ಯರು ತಿಳಿಸಿದರು'

'ಆರೋಪಿ ಪ್ರಕಾಶ್ ವಿಪರೀತ ಕುಡಿತದ ಚಟ ಹೊಂದಿದ್ದ. ಬಾಲಕಿಗೆ ಲೈಂಗಿಕ ದೌರ್ಜನ್ಯ ನೀಡಿದ ಆರೋಪದಲ್ಲಿ ಬಂಧನಕ್ಕೊಳಗಾದ ಆತನಿಗೆ ಈ ಪ್ರಕರಣದಲ್ಲಿ ಜಾಮೀನು ಸಿಕ್ಕಿರಲಿಲ್ಲ. ಜೈಲಿನಿಂದ ತನ್ನನ್ನು ಬಿಡಿಸುವುದಕ್ಕೆ ಕುಟುಂಬಸ್ಥರು ಯಾರೂ ಬರುವುದಿಲ್ಲ ಎಂಬ ಕಾರಣಕ್ಕೆ ನೊಂದಿದ್ದ' ಎಂದು ಮೂಲಗಳು ತಿಳಿಸಿವೆ. ಕೈದಿ ಆತ್ಮಹತ್ಯೆ ಕುರಿತು ಬರ್ಕೆ ಪೊಲೀಸ್‌ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಊಟಕ್ಕೆ ಕುಳಿತವರಿಗೆ ತಕ್ಷಣ ನೀರು ಕೊಡದಿದ್ದಕ್ಕೆ ತಗಾದೆ

ನೀರಿಗೆ ಜಗಳ: ರದ್ದಾದ ಮದುವೆ

ಪ್ರಜಾವಾಣಿ ವಾರ್ತೆ

ಹಿರಿಯೂರು (ಚಿತ್ರದುರ್ಗ ಜಿಲ್ಲೆ): ಆರತಕ್ಷತೆ ಕಾರ್ಯಕ್ರಮದ ನಂತರ ಭೋಜನದ ವೇಳೆ ಕುಳಿತವರಿಗೆ ಕುಡಿಯಲು ತಕ್ಷಣ ನೀರು ನೀಡಲಿಲ್ಲ ಎಂಬ ಕಾರಣಕ್ಕೆ ಉಂಟಾದ ಜಗಳದಿಂದಾಗಿ ಮದುವೆಯೇ ರದ್ದಾದ ಘಟನೆ ಇಲ್ಲಿನ ಬಲಿಜ ಶ್ರೇಯಾ ಭವನದಲ್ಲಿ ಭಾನುವಾರ ನಡೆದಿದೆ.



ದಾವಣಗೆರೆ ಜಿಲ್ಲೆ ಜಗಳೂರಿನ ವರನ ಜೊತೆ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಗ್ರಾಮವೊಂದರ ವಧುವಿನ ವಿವಾಹದ ಆರತಕ್ಷತೆ ಸಮಾರಂಭ ಶನಿವಾರ ರಾತ್ರಿ ನಡೆದಿತ್ತು.

ಮದ್ಯಪಾನ ಮಾಡಿ ರಾತ್ರಿ 1 ಗಂಟೆಗೆ ಬಂದ ಕೆಲವರು ಊಟಕ್ಕೆ ಕುಳಿತಿದ್ದರು. ಅಷ್ಟೊತ್ತಿಗಾಗಲೇ ಮಲಗಿದ್ದ ಕೇಟರಿಂಗ್ ಸಿಬ್ಬಂದಿ ಎದ್ದು ಊಟ ಬಡಿಸಿದರು. ಕುಡಿಯುವ ನೀರನ್ನು ಕೊಡಲು ತಡ ಮಾಡಿದ್ದಕ್ಕೆ ಗಂಡು– ಹೆಣ್ಣಿನ ಕಡೆಯವರ ನಡುವೆ ಭಾರಿ ಜಗಳ ಆರಂಭವಾಯಿತು.

'ರಾತ್ರಿ ಆರಂಭವಾದ ಜಗಳ ಭಾನುವಾರ ಬೆಳಿಗ್ಗೆಯಾದರೂ ಮುಂದುವರಿದಿತ್ತು. ಎಷ್ಟೇ ರಾಜಿಸಂಧಾನ ನಡೆಸಿದರೂ ಮನಸ್ತಾಪ ದೂರವಾಗಿ, ಸಮಸ್ಯೆ ಬಗೆಹರಿಯಲಿಲ್ಲ' ಎಂದು ಕಲ್ಯಾಣ ಮಂಟಪದ ಸಿಬ್ಬಂದಿ ಹಾಗೂ ಬಂಧುಗಳು ತಿಳಿಸಿದರು.

'ಭಾನುವಾರ ಬೆಳಿಗ್ಗೆ 10.30ಕ್ಕೆ ಮಹೂರ್ತ ನಿಗದಿಯಾಗಿತ್ತು. ಸಂಬಂಧಿಕರು ಸಾಕಷ್ಟು ಪ್ರಯತ್ನಪಟ್ಟರೂ ಜಗಳ ಬಗೆಹರಿಸಲು ಸಾಧ್ಯವಾಗಲಿಲ್ಲ. ಎಂಜಿನಿಯರಿಂಗ್ ಪದವೀಧರರಾದ ವಧು– ವರರಿಬ್ಬರೂ ಜಗಳದಲ್ಲಿ ನೇರವಾಗಿ ಭಾಗಿಯಾದ ಕಾರಣ ವಿವಾಹ ರದ್ದಾಯಿತು. ವಧುವಿನ ಕಡೆಯವರು ಮದುವೆ ಮಾಡಿಕೊಡುವ ಜವಾಬ್ದಾರಿ ಹೊತ್ತಿದ್ದರು ಎಂದು ತಿಳಿದುಬಂದಿದೆ.

ರೌಡಿ ಶೀಟರ್ ಕೊಲೆ: ಬೈಕ್ ಸವಾರ ಸಾವು

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಬೀದರ್–ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯ ಸಾದ್ಯಾಪುರ ಹಳ್ಳದ ಹತ್ತಿರ ರೌಡಿ ಶೀಟರ್ ಸಣ್ಣ ಮಾಪಣ್ಣ ಭೀಮಪ್ಪ ಬಡಿಗೇರ (55) ಎಂಬಾತನನ್ನು ಚಾಕು, ಮಚ್ಚಿನಿಂದ ಹಲ್ಲೆ ಮಾಡಿ ಭಾನುವಾರ ಕೊಲೆ ಮಾಡಲಾಗಿದೆ. ತಂದೆಯ ಕೊಲೆಯಿಂದ ರೊಚ್ಚಿಗೆದ್ದ ರೌಡಿಶೀಟರ್ ಸಣ್ಣಮಾಪಣ್ಣನ ಮಕ್ಕಳು ಹಲ್ಲೆ ಮಾಡಿದ್ದರಿಂದ ಬೈಕ್ ಸವಾರ ಅಲಿಸಾಬ್ ಸಹ ಮೃತಪಟ್ಟಿದ್ದಾರೆ.

ಘಟನೆ ವಿವರ: 'ಮಾಪಣ್ಣ ಮತ್ತು ಅಲಿಸಾಬ್ ಭೀಮರಾಯನಗುಡಿಯಿಂದ ತಮ್ಮೂರು ಮದ್ರಿಕಿ ಗ್ರಾಮಕ್ಕೆ ಬೈಕ್ ಮೇಲೆ ತೆರಳುತ್ತಿದ್ದಾಗ ಸಾದ್ಯಾಪುರ ಗ್ರಾಮದ ಹಳ್ಳದ ಬಳಿ ದುಷ್ಕರ್ಮಿಗಳು ಹೆದ್ದಾರಿ ಮೇಲೆ ಅಡ್ಡಗಟ್ಟಿನಿಂತು ಮಾರಕಾಸ್ತ್ರಗಳಿಂದ ಕೊಲೆ ಮಾಡಿದ್ದಾರೆ. ಆಗ ಬೈಕ್ ಸವಾರ ಅಲಿಸಾಬ್ ಮದ್ರಿಕಿ ಗ್ರಾಮದಲ್ಲಿ ಅಡಗಿ ಕುಳಿತುಕೊಂಡಾಗ ಮಾಪಣ್ಣನ ಮಕ್ಕಳು 'ನನ್ನ ತಂದೆಯ ಕೊಲೆಗೆ ನೀನೇ ಕಾರಣ' ಎಂದು ಆರೋಪಿಸಿ ಹಲ್ಲೆ ಮಾಡಿದ್ದಾರೆ. ಗಾಯಗೊಂಡ ಅಲಿಸಾಬ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ' ಎಂದು ಸುರಪುರ ಡಿವೈಎಸ್‌ಪಿ ಜಾವೇದ ಇನಾಮದಾರ ಮಾಹಿತಿ ನೀಡಿದರು.

ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಘಟನಾ ಸ್ಥಳಕ್ಕೆ ಭೇಟಿ ನೀಡಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೇಲ್ನೋಟಕ್ಕೆ ಹಳೆಯ ವೈಷಮ್ಯ ಇರುವಂತೆ ಕಾಣುತ್ತದೆ. 2014ರಲ್ಲಿ ಕೊಲೆಯತ್ನ ಪ್ರಕರಣದಲ್ಲಿ ಭಾಗಿಯಾಗಿರುವ ಹುಸೇನಿ ಬಗ್ಗೆ ಅನುಮಾನವಿದೆ. ಈ ಬಗ್ಗೆ ತಂಡ ರಚಿಸಿದ್ದು, ಗ್ರಾಮದಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು. ಎರಡು ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ.

ಬ್ಯಾಂಕ್ ದರೋಡೆಕೋರರು ಸೆರೆ

ಸವಳಂಗದ ಎಸ್‌ಬಿಐ ದರೋಡೆಗೆ ಸಂಚು, ಸಿನಿಮೀಯ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ನ್ಯಾಮತಿ (ದಾವಣಗೆರೆ): ತಾಲ್ಲೂಕಿನ ಸವಳಂಗ ಗ್ರಾಮದಲ್ಲಿನ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಶಾಖೆಯ ದರೋಡೆಗೆ ಸಂಚು ರೂಪಿಸಿದ್ದ ನಾಲ್ವರು ಅಂತರರಾಜ್ಯ ದರೋಡೆಕೋರರನ್ನು ನ್ಯಾಮತಿ ಠಾಣೆಯ ಪೊಲೀಸರು ಭಾನುವಾರ ಸಿನಿಮೀಯ ರೀತಿಯಲ್ಲಿ ಬಂಧಿಸಿದ್ದಾರೆ.

ತಮ್ಮನ್ನು ಹಿಡಿಯಲು ಬಂದಿದ್ದ ಪೊಲೀಸರ ಮೇಲೆ ದರೋಡೆಕೋರರ ತಂಡ ಹಲ್ಲೆ ನಡೆಸಿ ಪರಾರಿಯಾಗಲು ಮುಂದಾದಾಗ ಪೊಲೀಸರು ಗುಂಡು ಹಾರಿಸಿದ್ದು, ಒಬ್ಬ ಗಾಯಗೊಂಡಿದ್ದಾನೆ. ದುಷ್ಕರ್ಮಿಗಳು ಮಚ್ಚಿನಿಂದ ನಡೆಸಿದ ದಾಳಿಯಲ್ಲಿ ಕಾನ್‌ಸ್ಟೆಬಲ್ ಆನಂದ್ ಗಾಯಗೊಂಡಿದ್ದಾರೆ.

ಕರ್ನಾಟಕ ಸೇರಿ ದೇಶದ ಹಲವೆಡೆ ಬ್ಯಾಂಕ್ ದರೋಡೆ ನಡೆಸಿದ್ದ ಈ ಗ್ಯಾಂಗ್‌ನ ಇನ್ನೂ ಮೂವರು ಪರಾರಿಯಾಗಿದ್ದಾರೆ. ಉತ್ತರಪ್ರದೇಶ ಮೂಲದ ಇವರು ವಾರದ ಹಿಂದೆ ರಾಜ್ಯಕ್ಕೆ ಬಂದಿದ್ದು, ಜಿಲ್ಲೆಯಲ್ಲಿ ಓಡಾಡಿಕೊಂಡಿದ್ದರು. ನ್ಯಾಮತಿ ತಾಲ್ಲೂಕಿನ ಸವಳಂಗದ ಎಸ್‌ಬಿಐ ಶಾಖೆಯ ಬಳಿ ಎರಡು ದಿನಗಳಿಂದ ಸುಳಿದಾಡಿದ್ದರು.

ನ್ಯಾಮತಿಯ ಎಸ್‌ಬಿಐ ಶಾಖೆಯಲ್ಲಿ ಕಳೆದ ಅಕ್ಟೋಬರ್ 27ರಂದು ₹ 13 ಕೋಟಿ ಮೌಲ್ಯದ ಚಿನ್ನಾಭರಣ ಹೊತ್ತೊಯ್ದಿದ್ದ ದರೋಡೆಕೋರರು ಈವರೆಗೆ ಪತ್ತೆಯಾಗಿಲ್ಲ. ಆ ಪ್ರಕರಣಕ್ಕೂ ಈಗ ಬಂಧನಕ್ಕೆ ಒಳಗಾಗಿರುವ ಆರೋಪಿಗಳಿಗೂ ಇರುವ ಸಂಬಂಧದ ಬಗ್ಗೆ ವಿಚಾರಣೆ ನಡೆಯುತ್ತಿದೆ.

ಉತ್ತರಪ್ರದೇಶದ ಭದೋಹಿ ಜಿಲ್ಲೆಯ ನಿವಾಸಿ ಗುಡ್ಡು ಕಾಲಿಯಾ (45), ಹಜರತ್ ಅಲಿ (50), ಅಸ್ಲಂ ಟನ್‌ಟನ್ (55), ಕಮರುದ್ದಿನ್ ಬಾಬು ಶೇರ್‌ಅಲಿ (40) ಬಂಧಿತರು. ರಾಜಾರಾಮ, ಬಾಬುಷಾ ಮತ್ತು ಕೋಲಾರ ಜಿಲ್ಲೆ ಮಾಲೂರಿನ ಹಾಫೀಜ್ ಪರಾರಿಯಾದವರು. ಗುಡ್ಡು ಕಾಲಿಯಾ ಕಾಲಿಗೆ ಗುಂಡೇಟು ತಗುಲಿದ್ದು, ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆರೋಪಿಗಳ ಬಳಿ 4 ಸಜೀವ ಗುಂಡು, ಆಕ್ಸಿಜನ್ ಸಿಲಿಂಡರ್ ಗ್ಯಾಸ್ ರೆಗ್ಯುಲೇಟರ್, ಮೂರು ಕಬ್ಬಿಣದ ಸಲಾಖೆ, ಐದು ಪ್ಯಾಕೆಟ್ ಖಾರದ ಪುಡಿ, ಎರಡು ಕಾರು, ಐದು ಮಂಕಿಕ್ಯಾಂಪ್, ಐದು ಕೈಗವಸು ಹಾಗೂ ಒಂದು ಮಚ್ಚನ್ನು ವಶಪಡಿಸಿಕೊಳ್ಳಲಾಗಿದೆ. 2014ರಿಂದ 2024ರವರೆಗೆ ಕರ್ನಾಟಕ, ತಮಿಳುನಾಡು, ಉತ್ತರ ಪ್ರದೇಶ, ಆಂಧ್ರಪ್ರದೇಶ, ತೆಲಂಗಾಣ, ಮಧ್ಯಪ್ರದೇಶ, ದೆಹಲಿ ಸೇರಿ ಹಲವು ರಾಜ್ಯಗಳಲ್ಲಿ ಬ್ಯಾಂಕ್ ದರೋಡೆ ಸೇರಿ ಹಲವು ಪ್ರಕರಣಗಳಲ್ಲಿ ಈ ತಂಡ ಭಾಗಿಯಾಗಿದ್ದು ತನಿಖೆಯಿಂದ ಬೆಳಕಿಗೆ ಬಂದಿದೆ.

ಆರೋಪಿಗಳ ಬಂಧನದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ₹ 3.18 ಕೋಟಿ ಚಿನ್ನಾಭರಣ ಹಾಗೂ ಕೊಪ್ಪಳ ಜಿಲ್ಲೆಯ ಬೇವೂರು ಪೊಲೀಸ್ ಠಾಣೆ ವ್ಯಾಪ್ತಿಯ ₹ 1.46 ಕೋಟಿ ಚಿನ್ನಾಭರಣ ದರೋಡೆ ಪ್ರಕರಣ ಬೆಳಕಿಗೆ ಬಂದಿವೆ.

ಮಚ್ಚಿನಿಂದ ದಾಳಿ: ಕಾನ್‌ಸ್ಟೆಬಲ್‌ಗೆ ಗಾಯ



ನ್ಯಾಮತಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದ ಕಾನ್‌ಸ್ಟೆಬಲ್ ಆನಂದ್

ಉತ್ತರಪ್ರದೇಶದ ನೋಂದಣಿಯ 2 ಕಾರುಗಳು ಶನಿವಾರ ರಾತ್ರಿ ಶಿವಮೊಗ್ಗ-ಹರಿಹರ ರಸ್ತೆಯಲ್ಲಿ ಸಂಚರಿಸುವ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಕೆಲ ದಿನಗಳಿಂದ ರಾತ್ರಿ ವೇಳೆ ಇದೇ ಮಾರ್ಗದಲ್ಲಿ ಸಂಚರಿಸುತ್ತಿದ್ದ ಕಾರುಗಳ ಬಗ್ಗೆ ಅನುಮಾನಗೊಂಡ ಪೊಲೀಸರು ನಿಗಾ ಇಟ್ಟಿದ್ದರು. ಹರಿಹರ, ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕಿನ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟೆಚ್ಚರ ವಹಿಸಿದ್ದರು.

'ಭಾನುವಾರ ನಸುಕಿನ 1.30ಕ್ಕೆ ಹೊನ್ನಾಳಿ ತಾಲ್ಲೂಕಿನ ಎಚ್.ಕಡದಕಟ್ಟೆ ಚೆಕ್‌ಪೋಸ್ಟ್ ಬಳಿ ಪೊಲೀಸರ ಸೂಚನೆಯನ್ನು ದುಷ್ಕರ್ಮಿಗಳು ನಿರಾಕರಿಸಿದ್ದಾರೆ. ನ್ಯಾಮತಿ ಕಡೆಗೆ ಕಾರಿನಲ್ಲಿ ಪರಾರಿಯಾಗಲು ಯತ್ನಿಸಿದ ದುಷ್ಕರ್ಮಿಗಳನ್ನು ಪೊಲೀಸರು ಬೆನ್ನಟ್ಟಿದ್ದಾರೆ. ಅರಬಗಟ್ಟ ಗ್ರಾಮದ ಕ್ರಾಸ್ ಬಳಿ ಕಾರು ಇಳಿದು ಜಮೀನಿನಲ್ಲಿ ಓಡುತ್ತಿದ್ದ 7 ಜನರಲ್ಲಿ ನಾಲ್ವರನ್ನು ಹಿಡಿಯಲಾಗಿದೆ. ಈ ವೇಳೆ ದುಷ್ಕರ್ಮಿಯೊಬ್ಬ ಕಾನ್‌ಸ್ಟೆಬಲ್ ಆನಂದ್ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿದ್ದಾರೆ. ಪೊಲೀಸರು ಪ್ರತಿಯಾಗಿ ಹಾರಿಸಿದ ಗುಂಡು ಗುಡ್ಡು ಕಾಲಿಯಾ ಕಾಲಿಗೆ ತಗುಲಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾಹಿತಿ ನೀಡಿದ್ದಾರೆ.

> ನ್ಯಾಮತಿ ಪಟ್ಟಣದ ಎಸ್‌ಬಿಐ ಶಾಖೆಯಲ್ಲಿ ಕಳೆದ ವರ್ಷ ನಡೆದ ದರೋಡೆಗೂ ಆರೋಪಿಗಳಿಗೂ ಇರುವ ಸಂಬಂಧದ ಕುರಿತು ತನಿಖೆ ನಡೆಯುತ್ತಿದೆ
>
> **ಉಮಾ ಪ್ರಶಾಂತ್**
> ಪೊಲೀಸ್ ವರಿಷ್ಠಾಧಿಕಾರಿ ದಾವಣಗೆರೆ



ಜಗ್ಗಲಗಿ ಹಬ್ಬ ಹುಬ್ಬಳ್ಳಿಯ ಮೂರುಸಾವಿರ ಮಠದ ಆವರಣದಲ್ಲಿ ಭಾನುವಾರ ನಡೆದ ಜಗ್ಗಲಗಿ ಹಬ್ಬದಲ್ಲಿ ನಾಗಸಾಧು ವೇಷಧಾರಿಗಳು ವಿಶಿಷ್ಟ ಕಲೆ ಪ್ರದರ್ಶಿಸಿದರು ಚಿತ್ರ: ಗೋವಿಂದರಾಜ ಜವಳಿ

'ಹೋರಾಡಿದರಷ್ಟೇ ಮೀಸಲಾತಿ'

ಕೊಪ್ಪಳ: 'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಪಡೆದುಕೊಳ್ಳುವ ವಿಚಾರದಲ್ಲಿ ಸಮಾಜದ ಮುಖಂಡರು, ಜನಪ್ರತಿನಿಧಿಗಳು ಹಾಗೂ ಗಣ್ಯರು ಎಲ್ಲರೂ ಸೇರಿ ಕಾನೂನಾತ್ಮಕವಾಗಿ ಗಟ್ಟಿ ಹೋರಾಟ ಮಾಡಿದರೆ ಮಾತ್ರ ನಮ್ಮ ಬೇಡಿಕೆ ಈಡೇರಲು ಸಾಧ್ಯ' ಎಂದು ಹರಿಹರಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿ 'ಸಮುದಾಯಕ್ಕೆ 2ಎ ಮೀಸಲಾತಿ ನೀಡುವುದು ಮುಖ್ಯಮಂತ್ರಿಯೊಬ್ಬರಿಂದ ಸಾಧ್ಯವಿಲ್ಲ. ಅವರು ಸಮ್ಮತಿಸಿದರೂ ಕಾನೂನಾತ್ಮಕ ಅಡಚಣೆಗಳು ಇದ್ದೇ ಇರುತ್ತವೆ' ಎಂದರು.

'ನಮ್ಮ ಮೆಟ್ರೊ': ಕನ್ನಡಿಗರಿಗೆ ಇಲ್ಲವೇ ನೌಕರಿ?

ಒಂದನೇ ಪುಟದಿಂದ...

'ಕನ್ನಡಿಗರನ್ನು ಉದ್ಯೋಗದಿಂದ ದೂರ ಇಡುವ ಈ ಅಧಿಸೂಚನೆ ಕುರಿತು ಬಿಎಂಆರ್‌ಸಿಎಲ್ ಪ್ರಧಾನ ವ್ಯವಸ್ಥಾಪಕರಿಗೆ (ಎಚ್‌ಆರ್) ತಿಳಿಸಿದ್ದೇವೆ' ಎಂದು ಬಿಎಂಆರ್‌ಸಿಎಲ್ ಕನ್ನಡಿಗರ ಸಂಘದ ಪದಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಬಿಎಂಆರ್‌ಸಿಎಲ್ ಆಡಳಿತ ನಡೆಸುವವರು, ನಿರ್ಧಾರ ಕೈಗೊಳ್ಳುವ ಹುದ್ದೆಗಳಲ್ಲಿ ಇರುವವರೆಲ್ಲ ತಮಿಳು, ಹಿಂದಿ ಮತ್ತು ಇತರ ಭಾಷಿಕರು. ಮೆಟ್ರೊ ಚಾಲಕರು, ಸಿವಿಲ್ ಎಂಜಿನಿಯರ್, ಎಲೆಕ್ಟ್ರಿಕ್ ಎಂಜಿನಿಯರ್, ರೋಲಿಂಗ್ ಸ್ಟಾಕ್, ಸಿಗ್ನಲಿಂಗ್ ಮತ್ತು ಟೆಲಿ ಕಮ್ಯುನಿಕೇಷನ್ ಎಂಜಿನಿಯರ್‌ಗಳ ಸಹಿತ ಕೆಲಸ ಮಾಡುವ ನೌಕರರಲ್ಲಿ ಶೇಕಡ 90ರಷ್ಟು ಕನ್ನಡಿಗರಿದ್ದಾರೆ. ಈಗ ಅನುಭವದ ಷರತ್ತು ವಿಧಿಸುವ ಮೂಲಕ ಸಣ್ಣ ಹುದ್ದೆಗಳಿಗೂ ಪರಭಾಷಿಕರನ್ನು ತುಂಬಲು ಬಿಎಂಆರ್‌ಸಿಎಲ್ ಆಡಳಿತ ಹೊರಟಿದೆ' ಎಂದು ನಿಗಮದ ನೌಕರರು ಆಕ್ರೋಶ ವ್ಯಕ್ತಪಡಿಸಿದರು.

'ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ತೆಗೆದುಕೊಳ್ಳಲಾಗುತ್ತಿದೆ ಎಂಬುದು ಕಣ್ಣೊರೆಸುವ ತಂತ್ರ. ಐದು ವರ್ಷಗಳ ಬಳಿಕ ಅವರ ಕೆಲಸ ನಿರ್ವಹಣೆಯನ್ನು ನೋಡಿ ಮುಂದುವರಿಸುವ ಅವಕಾಶ ಇದೆ ಎಂದು ಬಿಎಂಆರ್‌ಸಿಎಲ್ ಈ ಬಗ್ಗೆ ನೀಡಿರುವ ಜಾಹೀರಾತಿನಲ್ಲಿ ತಿಳಿಸಿದೆ. ಹಳದಿ ಮಾರ್ಗ ಇನ್ನೆರಡು ತಿಂಗಳಲ್ಲಿ ಆರಂಭವಾಗುತ್ತಿರುವುದರಿಂದ ತುರ್ತಾಗಿ ಚಾಲಕರು ಬೇಕು ಎಂದು ಅಧಿಕಾರಿಗಳು ಸ್ಪಷ್ಟನೆ ನೀಡುತ್ತಾರೆ. ಹಳದಿ ಮಾರ್ಗ ತಯಾರಾಗಿ ಆರು ತಿಂಗಳು ಕಳೆದಿದೆ. ಅದಕ್ಕಿಂತ ಮೊದಲೇ ರೈಲು ಎಷ್ಟು ಬೇಕು ಅಷ್ಟನ್ನು ತರಿಸಿಟ್ಟುಕೊಳ್ಳಬೇಕಿತ್ತು. ಅಗತ್ಯಕ್ಕೆ ಬೇಕಾದಷ್ಟು ಚಾಲಕರನ್ನು ನೇಮಕ ಮಾಡಿಕೊಳ್ಳಬೇಕಿತ್ತು. ಈಗ ಈ ನೆಪದಲ್ಲಿ ಕನ್ನಡಿಗರನ್ನು ಹೊರಗಿಡುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಮೆಟ್ರೊ ಅಧಿಕಾರಿಗಳ ಚೀನಾ ಪ್ರವಾಸ

ಬಿಎಂಆರ್‌ಸಿಎಲ್‌ನ ಮೂವರು ಹಿರಿಯ ಅಧಿಕಾರಿಗಳು ಚೀನಾ ಪ್ರವಾಸಕ್ಕೆ ಹೊರಟಿದ್ದಾರೆ.

ಚೀನಾಕ್ಕೆ ಪ್ರಯಾಣ ಬೆಳೆಸಲಿರುವ ಅಧಿಕಾರಿಗಳೆಂದರೆ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರ-ರಾವ್, ಉಪಮುಖ್ಯಮಂತ್ರಿಯವರ ಕಾರ್ಯದರ್ಶಿ ಹಾಗೂ ಬಿಎಂಆರ್‌ಸಿಎಲ್ ನಿರ್ದೇಶಕ ಪಿ.ರಾಜೇಂದ್ರ ಚೋಳನ್ ಮತ್ತು ಬಿಎಂಆರ್‌ಸಿಎಲ್‌ನ ಯೋಜನಾ ನಿರ್ದೇಶಕ ಜಿತೇಂದ್ರ ಜಾ. ಇವರು ಇದೇ 24ರಂದು ಪ್ರಯಾಣ ಬೆಳೆಸಲಿದ್ದು 29ರವರೆಗೆ ಚೀನಾದಲ್ಲಿರಲಿದ್ದಾರೆ.

ನಮ್ಮ ಮೆಟ್ರೊದ ನೇರಳೆ ಮಾರ್ಗಕ್ಕೆ 216 ಕೋಚ್‌ಗಳ ತಯಾರಿಕೆಗೆ ಚೀನಾದ ಸಿಆರ್‌ಆರ್‌ಸಿ ನಾನ್ಜಿಂಗ್ ಪುಝೆನ್ ಕೋ ಲಿಮಿಟೆಡ್‌ಗೆ ಟೆಂಡರ್ ನೀಡಲಾಗಿತ್ತು. ಕೋಚ್‌ಗಳನ್ನು ತ್ವರಿತವಾಗಿ ತಯಾರಿಸಿ ಬೆಂಗಳೂರಿಗೆ ಕಳುಹಿಸುವಂತೆ ಮನವಿ ಮಾಡುವ ಏಕೈಕ ಉದ್ದೇಶದಿಂದ ಈ ಅಧಿಕಾರಿಗಳು ಪ್ರವಾಸಕ್ಕೆ ಹೋಗಲಿದ್ದಾರೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಪ್ಪಿಗೆ ನೀಡಿದ್ದಾರೆ. ಅಂತಿಮವಾಗಿ ಭಾರತ ಸರ್ಕಾರದ ಒಪ್ಪಿಗೆ ಸಿಗಬೇಕಿದೆ ಎಂದು ಮೂಲಗಳು ತಿಳಿಸಿವೆ.

ನಮ್ಮ ಮೆಟ್ರೊ ಇದೇ ಮೊದಲಬಾರಿಗೆ ಚೀನಾ ನಿರ್ಮಿತ ಕೋಚ್‌ಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಚೀನಿ ನಿರ್ಮಿತ ಆರು ಮಾದರಿ ಕೋಚ್‌ಗಳು ಈಗಾಗಲೇ ಬಂದಿವೆ. 216 ಕೋಚ್‌ಗಳ ಟೆಂಡರ್ ಮೊತ್ತ ₹1,578 ಕೋಟಿ.

'ಅಧಿಸೂಚನೆ ಹೊರಡಿಸಿದವರ ವಿರುದ್ಧ ಕ್ರಮ ಕೈಗೊಳ್ಳಿ'

'ನಮ್ಮ ಮೆಟ್ರೊ ಚಾಲಕರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವಾಗ ಕನ್ನಡಿಗರನ್ನು ಹೊರಗಿಡುವ ಹುನ್ನಾರದ ಷರತ್ತುಗಳನ್ನು ವಿಧಿಸಿ ಅಧಿಸೂಚನೆ ಹೊರಡಿಸಿರುವ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಉಪಾಧ್ಯಕ್ಷ ಸೂರ್ಯನಾರಾಯಣ ಮೂರ್ತಿ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

'ಆ ಹುದ್ದೆಗೆ ಬೇಕಾದ ವಿದ್ಯಾರ್ಹತೆ ಹೊಂದಿರುವ ಕನ್ನಡಿಗರು ಅರ್ಜಿ ಸಲ್ಲಿಸದಂತೆ ಮಾಡಲು ಹೊರಟಿರುವ ಬಿಎಂಆರ್‌ಸಿಎಲ್‌ನ ನಾಚಿಗೇಡಿನ ಕೃತ್ಯ ಕನ್ನಡಿಗರಿಗೆ ನೋವುಂಟು ಮಾಡಿದೆ. ಚೆನ್ನೈ, ಹೈದರಾಬಾದ್, ಕೊಚ್ಚಿ ಮೆಟ್ರೊ ರೈಲುಗಳಲ್ಲಿ ಕೆಲಸ ಮಾಡುತ್ತಿರುವವರು ಮತ್ತು ಉತ್ತರ ಭಾರತೀಯರು ಮಾತ್ರ ಅರ್ಜಿ ಸಲ್ಲಿಸುವಂತೆ ಮಾಡುವ ಈ ಅಧಿಸೂಚನೆಯನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.

ಉಪ ಮುಖ್ಯಮಂತ್ರಿಯವರೂ ಈ ಅಧಿಸೂಚನೆಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಅಸಾಂವಿಧಾನಿಕ ತೀರ್ಮಾನ: ಬಿವೈವಿ

ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ: ಸರ್ಕಾರದ ವಿರುದ್ಧ ಹೋರಾಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡಿದ್ದು ರಾಜ್ಯ ಸರ್ಕಾರದ ಅಸಾಂವಿಧಾನಿಕ ತೀರ್ಮಾನ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಇಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಧರ್ಮದ ಆಧಾರದಲ್ಲಿ ಮೀಸಲಾತಿ ನೀಡುವ ಬಗ್ಗೆ ಸಂವಿಧಾನದಲ್ಲಿ ಎಲ್ಲೂ ಉಲ್ಲೇಖಿಸಿಲ್ಲ. ಸಂವಿಧಾನ ವಿರೋಧಿಯಾಗಿ ಕೈಗೊಂಡ ಈ ನಿರ್ಧಾರದ ಬಗ್ಗೆ ಸರ್ಕಾರದ ವಿರುದ್ಧ ಬಿಜೆಪಿ ಹೋರಾಡಲಿದೆ' ಎಂದರು.

'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ' ಎಂದು ಸಿದ್ದರಾಮಯ್ಯ ಘೋಷಣೆ ಮಾಡಿ, ಪಾದಯಾತ್ರೆ ಕೈಗೊಂಡಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ನೀರಾವರಿ ಯೋಜನೆಗೆ ಪ್ರತಿ ವರ್ಷ ₹10 ಸಾವಿರ ಕೋಟಿ ಕೊಡುತ್ತೇವೆ ಎಂದಿದ್ದರು. ಈಗ ಆ ವಿಷಯ ಮರೆತಿದ್ದಾರೆ. 'ಗ್ಯಾರಂಟಿ'ಗಳ ಅನುಷ್ಠಾನದಿಂದ ರಾಜ್ಯದಲ್ಲಿ ಅಭಿವೃದ್ಧಿ ಸ್ಥಗಿತಗೊಂಡಿದೆ. ಉತ್ತರ ಕರ್ನಾಟಕ ಅಭಿವೃದ್ಧಿ ಬಗ್ಗೆ ಕಾಳಜಿ ಇಲ್ಲ ಎಂದರು.

'ವೀರಶೈವ ಸಮಾವೇಶದ ವಿರುದ್ಧ ಹಿಂದೂ ಸಮಾವೇಶ ಮಾಡುತ್ತೇನೆ' ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ವಿಜಯೇಂದ್ರ ನಾಡಗೀತೆ ಅರ್ಥ ಮಾಡಿಕೊಳ್ಳಲಿ: ಡಿಕೆಶಿ



ಗದಗ: 'ಬಿ.ವೈ.ವಿಜಯೇಂದ್ರ ಅವರು ಮೊದಲು ಕುವೆಂಪು ಅವರ ನಾಡಗೀತೆಯನ್ನು ಸರಿಯಾಗಿ ಓದಬೇಕು. ಯಾರೆಲ್ಲ ಸೇರಿದರೆ, ಕರ್ನಾಟಕ ಶಾಂತಿಯ ತೋಟ ಆಗುತ್ತದೆ ಎಂಬುದು ಗೊತ್ತಾಗುತ್ತದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸರ್ಕಾರಿ ಗುತ್ತಿಗೆಯಲ್ಲಿ ಅಲ್ಪಸಂಖ್ಯಾತರಿಗೆ ಶೇ 4ರಷ್ಟು ಮೀಸಲಾತಿ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆಗೆ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಮುಸ್ಲಿಂ, ಕ್ರೈಸ್ತರು, ಸಿಖ್, ಬೌದ್ಧರೆಲ್ಲ ನಮ್ಮ ದೇಶದ ಪ್ರಜೆಗಳು. ನಮ್ಮ ರಾಜ್ಯದಲ್ಲಿನ ಅಲ್ಪಸಂಖ್ಯಾತರು, ಹಿಂದುಳಿದವರ ಬಗ್ಗೆ ನಮಗೆ ಕಾಳಜಿ ಇದೆ' ಎಂದರು.

'ಸಮಬಾಳು, ಸಮಪಾಲು ಎನ್ನುವ ಬಿಜೆಪಿಯವರು ಅಲ್ಪಸಂಖ್ಯಾತ ವರ್ಗದವರನ್ನು ಎಂಎಲ್‌ಸಿ, ರಾಜ್ಯಸಭಾ ಸದಸ್ಯ ಅಥವಾ ಕೇಂದ್ರದಲ್ಲಿ ಮಂತ್ರಿ ಮಾಡಲಿ. ಆಗ, ಬಿ.ವೈ.ವಿಜಯೇಂದ್ರಗೆ ಮಾತನಾಡಲು ಅವಕಾಶ ಸಿಗಲಿದೆ' ಎಂದರು.



> ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ಸೇರಿ ಯಾವ ಪ್ರಾಧಿಕಾರಕ್ಕೂ ಈ ಸರ್ಕಾರ ಯಾವುದೇ ಅನುದಾನ ಕೊಟ್ಟಿಲ್ಲ. ಕೇವಲ ಹಾಳೆ ಮೇಲೆ ಬರೆಯಲಾಗುತ್ತಿದೆ ಹೊರತು ಹಣ ಕೊಡುತ್ತಿಲ್ಲ. ಇದು ಪೇಪರ್ ಟೈಗರ್ ಸರ್ಕಾರ
>
> **ಬಿ.ವೈ.ವಿಜಯೇಂದ್ರ,** ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

'ಧರ್ಮಾಧಾರಿತ ಮೀಸಲಾತಿ ಸಂವಿಧಾನ ವಿರೋಧಿ'



ಬೆಂಗಳೂರು: 'ಧರ್ಮದ ಆಧಾರದಲ್ಲಿ ಮೀಸಲಾತಿ ಕೊಡುವುದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ. ಆದ್ದರಿಂದ ಗುತ್ತಿಗೆಯಲ್ಲಿ ಶೇ 4 ಮೀಸಲಾತಿ ನೀಡುವುದನ್ನು ಒಪ್ಪಲು ಸಾಧ್ಯವಿಲ್ಲ. ಇದರ ವಿರುದ್ಧ ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸಲಾಗುವುದು' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ಮುಸ್ಲಿಂ ಮತಬ್ಯಾಂಕ್ ಗಟ್ಟಿಗೊಳಿಸಲು ರಾಜ್ಯ ಸರ್ಕಾರ ಅವರಿಗೆ ಶೇ 4 ಮೀಸಲಾತಿ ನೀಡಿದೆ. ಇದು ಸಂವಿಧಾನ ವಿರೋಧಿ ಕ್ರಮ ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಧಾರ್ಮಿಕ ಮೀಸಲಾತಿಯನ್ನು ಹಿಂದಕ್ಕೆ ಪಡೆಯಲಾಗಿತ್ತು. ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದರೆ ಮತ್ತೆ ಮುಸ್ಲಿಮರಿಗೆ ಧಾರ್ಮಿಕ ಮೀಸಲಾತಿ ನೀಡುವುದಾಗಿ ಘೋಷಿಸಿದ್ದರು. ಆ ಪ್ರಕಾರ ಗುತ್ತಿಗೆಯಲ್ಲಿ ಶೇ 4 ಮೀಸಲಾತಿ ನೀಡಿದ್ದಾರೆ ಎಂದರು.

ಡಿಮ್ಹಾನ್ಸ್: ಮಾರುಕಟ್ಟೆ ದರಕ್ಕಿಂತ ಹೆಚ್ಚು ದರ ನಿಗದಿ; ಟೆಂಡರ್‌ನಲ್ಲಿ ಅವ್ಯವಹಾರ ಶಂಕೆ

ಅನುಮೋದನೆಯಿಲ್ಲದೆ ಬಿಲ್ ಪಾವತಿ

● ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ಡಿಮ್ಹಾನ್ಸ್) ಆಡಳಿತಾತ್ಮಕ ಅನುಮೋದನೆ ಇಲ್ಲದೇ, ₹98.67 ಲಕ್ಷ ವೆಚ್ಚದ ವೈದ್ಯಕೀಯ ಮತ್ತು ಇತರ ಸಾಮಗ್ರಿಗಳನ್ನು ಟೆಂಡರ್ ಮೂಲಕ ಖರೀದಿಸಿದ ಆರೋಪ ಕೇಳಿ ಬಂದಿದೆ. ನಿಯಮಬಾಹಿರವಾಗಿ ಟೆಂಡರ್ ಕರೆದಿದ್ದೂ ಅಲ್ಲದೆ, ಅನುಮತಿ ಪಡೆಯದೇ ಗುತ್ತಿಗೆದಾರರಿಗೆ ಹಣ ಪಾವತಿಯಾಗಿದೆ ಎಂಬ ದೂರು ಇದೆ. ಅದಕ್ಕೆ ಅಧಿಕಾರಿಗಳಿಗೆ ಸಂಸ್ಥೆಯ ನಿರ್ದೇಶಕರಾದ ಡಾ. ಅರುಣಕುಮಾರ್.ಸಿ ಅವರು ನೋಟಿಸ್ ಜಾರಿಗೊಳಿಸಿದ್ದಾರೆ.

ವೈಫೈ ರೂಟರ್, ಟಿವಿ, ಎ.ಸಿ ಸೇರಿ ಹತ್ತಕ್ಕೂ ಹೆಚ್ಚು ಸಾಮಗ್ರಿಗಳನ್ನು ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಬೆಲೆಗೆ ಖರೀದಿಸಿ, ಅವ್ಯವಹಾರ ನಡೆದಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ. ಸಂಸ್ಥೆಯ ಮೇಲಧಿಕಾರಿಗಳ ಅನುಮತಿ ಪಡೆಯದೆ ಬಿಲ್ ಪಾವತಿಸಿದ್ದು ಒಂದೆಡೆಯಾದರೆ, ಮಾರುಕಟ್ಟೆ ದರಕ್ಕಿಂತ ಹೆಚ್ಚಿಗೆ ಹಣದ ಬಿಲ್ ಪಡೆದು ಸಾಮಗ್ರಿಗಳನ್ನು ಪೂರೈಸಿಕೊಂಡಿದ್ದು ಅನುಮಾನ ಮೂಡಿಸಿದೆ.

ಡಿಮ್ಹಾನ್ಸ್ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜನವರಿ 18ರಂದು ನಡೆದ ನಡಾವಳಿ ಸಭೆಯಲ್ಲಿ ಈ ಕುರಿತು ಚರ್ಚೆ ಆಗಿದೆ. ಟೆಂಡರ್‌ಗೆ ಸಂಬಂಧಿಸಿದ ಪ್ರತಿ, ಸಭಾ ನಡವಳಿ ಪ್ರತಿ, ಕಚೇರಿ ಟಿಪ್ಪಣಿ, ಪ್ರಮುಖ ದಾಖಲೆಗಳು 'ಪ್ರಜಾವಾಣಿ'ಗೆ ಸಿಕ್ಕಿವೆ.

ಹೆಚ್ಚುವರಿ ₹18 ಲಕ್ಷ ಪಾವತಿ!

ಆರ್ಥಿಕ ಸಮಿತಿಯ ಸಭೆಯಲ್ಲಿ ನ್ಯೂರೊ ಸೈಕಾಲಜಿ ಟೆಸ್ಟ್ ಬ್ಯಾಟರಿ ಖರೀದಿಗೆ ₹3.50 ಲಕ್ಷಕ್ಕೆ ಒಪ್ಪಿಗೆ ನೀಡಿದ್ದು, ಟೆಂಡರ್‌ನಲ್ಲಿ ₹9.50 ಲಕ್ಷಕ್ಕೆ ಖರೀದಿಸಲಾಗಿದೆ. ಹೆಚ್ಚುವರಿಯಾಗಿ ₹6ಲಕ್ಷ ನೀಡಲಾಗಿದೆ. ಅದೇ ರೀತಿ, ಬಯೋಫೀಡ್‌ಬ್ಯಾಕ್ ಇಕ್ವಿಪ್‌ಮೆಂಟ್ ಅನ್ನು ₹4.50 ಲಕ್ಷದ ಬದಲಾಗಿ, ₹7.33 ಲಕ್ಷಕ್ಕೆ ಖರೀದಿಸಿ ಹೆಚ್ಚುವರಿ ₹2.83 ಲಕ್ಷ ಪಾವತಿಸಲಾಗಿದೆ. ಕಾಗ್ನಿಟಿವ್ ಟ್ರೇನಿಂಗ್ ಸಾಫ್ಟ್‌ವೇರ್‌ಗೆ ಒಪ್ಪಿಗೆ ನೀಡಿದ್ದ ₹4 ಲಕ್ಷದ ಬದಲಾಗಿ, ಹೆಚ್ಚುವರಿಯಾಗಿ ₹9ಲಕ್ಷ ನೀಡಿ ಖರೀದಿಸಲಾಗಿದೆ.

ಈಗಾಗಲೇ ಎರಡು ವರ್ಷದಲ್ಲಿ 70 ಹವಾನಿಯಂತ್ರಣ (ಎಸಿ) ಯತ್ರಗಳನ್ನು ಖರೀದಿಸಿ ದಾಸ್ತಾನು ಮಾಡಲಾಗಿದೆ. ಹೀಗಿದ್ದರೂ ಮತ್ತೆ 25 ಎ.ಸಿ ಯಂತ್ರಗಳನ್ನು ಮಾರುಕಟ್ಟೆ ದರಕ್ಕಿಂತ (₹42 ಸಾವಿರ) ಹೆಚ್ಚು ನೀಡಿ, ಅಂದರೆ ₹68 ಸಾವಿರಕ್ಕೆ ಒಂದರಂತೆ (ಒಟ್ಟು ₹17ಲಕ್ಷ) ಖರೀದಿಸಲಾಗಿದೆ. ಈ ವ್ಯವಹಾರದಲ್ಲಿ ರಾಜ್ಯ ಆರ್ಥಿಕ ಸಂಹಿತೆ 1958ರ ಅನುಚ್ಛೇದ 15 ಉಲ್ಲಂಘನೆಯಾಗಿದೆ ಎಂದು ಮುಖ್ಯ ಲೆಕ್ಕಾಧಿಕಾರಿ ಪ್ರದೀಪಕುಮಾರ್ ಅವರು ನಿರ್ದೇಶಕರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.



ಧಾರವಾಡದ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ ಕಟ್ಟಡ

ಸಂಸ್ಥೆಯ ಆರ್ಥಿಕ ಸಲಹೆಗಾರ ಮತ್ತು ಮುಖ್ಯ ಲೆಕ್ಕಾಧಿಕಾರಿ ಪ್ರದೀಪಕುಮಾರ್ ಅವರು, ಸಂಸ್ಥೆಯ ನಿರ್ದೇಶಕ ಅರುಣಕುಮಾರ್ ಸಿ. ಅವರಿಗೆ ಜನವರಿ 28ರಂದು ಪತ್ರ ಬರೆದಿದ್ದು, 'ನಿಮ್ಮ ಗಮನಕ್ಕೆ ತರದೆ, ಕಡತಗಳನ್ನು ಮಂಡಿಸದೆ ಬಿಲ್ ಪಾವತಿಸಲಾಗಿದೆ. ಆರ್ಥಿಕ ಸಮಿತಿ ಅನುಮೋದನೆ ನೀಡಿದ ಮೊತ್ತಕ್ಕಿಂತ ಹೆಚ್ಚು ಹಣ ಪಾವತಿಸಲಾಗಿದೆ. ಕೆಲವು ಸಾಮಗ್ರಿಗಳಿಗೆ ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರದ ಬಿಲ್ ಸಲ್ಲಿಸಲಾಗಿದೆ. ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಯಿಂದ ಸ್ಪಷ್ಟನೆ ಪಡೆದು, ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದ್ದಾರೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ (ಎನ್‌ಎಂಎಚ್‌ಪಿ) ಯೋಜನೆಯ ಮಾಸಾಂತ್ಯದ ಲೆಕ್ಕಪರಿಶೀಲನೆ ಕೈಗೊಂಡಾಗ ಏಳು ಸಾಮಗ್ರಿಗಳ ಖರೀದಿಗೆ ನಿಯಮ ಬಾಹಿರವಾಗಿ ಬಿಲ್ ಪಾವತಿಸಿದ್ದು ಕಂಡು ಬಂದಿದೆ. ₹5 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಮಗ್ರಿ ಖರೀದಿಸ ಬೇಕೆಂದರೆ ಸರ್ಕಾರದ ಜೆಮ್ ಪೋರ್ಟಲ್‌ನಲ್ಲೇ ಟೆಂಡರ್ ಕರೆಯಬೇಕು. ಅದಕ್ಕೂ ಮುನ್ನ ಕಚೇರಿಯ ಟಿಪ್ಪಣಿಯೊಂದಿಗೆ ವಿಷಯ ನಿರ್ವಾಹಕರ ಮೂಲಕ ಕಚೇರಿ ಅಧೀಕ್ಷಕರು, ಸಹಾಯಕ ಆಡಳಿತಾಧಿಕಾರಿ, ವೈದ್ಯಕೀಯ ಅಧೀಕ್ಷಕರು, ಆರ್ಥಿಕ ಸಲಹೆಗಾರರು, ಮುಖ್ಯ ಆಡಳಿತಾಧಿಕಾರಿಗಳು ಮತ್ತು ನಿರ್ದೇಶಕರಿಗೆ ಕಡತ ಮಂಡಿಸಿ ಅನುಮೋದನೆ ಪಡೆಯಬೇಕು. ಆದರೆ, ಈ ಟೆಂಡರ್ ಪ್ರಕ್ರಿಯೆಯಲ್ಲಿ ಇದ್ಯಾವುದನ್ನೂ ಪಾಲನೆ ಮಾಡಿಲ್ಲ.



ಅನುಮೋದನೆ ಪಡೆಯದೆ ಬಿಲ್ ಪಾವತಿಸಿರುವ ಕುರಿತು ನಿರ್ದೇಶಕರು ಆಂತರಿಕ ತನಿಖೆಗೆ ಸೂಚಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು

ಸಿದ್ದಲಿಂಗಯ್ಯ ಹಿರೇಮಠ,
ಆಡಳಿತಾಧಿಕಾರಿ, ಡಿಮ್ಹಾನ್ಸ್, ಧಾರವಾಡ



ಕೆಲ ಸಿಬ್ಬಂದಿಯ ಕಣ್ತಪ್ಪಿನಿಂದ ಬಿಲ್ ಪಾವತಿಯಲ್ಲಿ ಸಮಸ್ಯೆಯಾಗಿದೆ. ಈ ಕುರಿತು ಆಡಳಿತಾಧಿಕಾರಿ, ವೈದ್ಯಕೀಯ ಅಧೀಕ್ಷಕರ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿದೆ

ಡಾ. ಅರುಣಕುಮಾರ್ ಸಿ.,
ನಿರ್ದೇಶಕ, ಡಿಮ್ಹಾನ್ಸ್, ಧಾರವಾಡ

ಜೆಮ್ ಪೋರ್ಟಲ್‌ನಲ್ಲಿ ಟೆಂಡರ್ ಕರೆದ ನಂತರ ತಾಂತ್ರಿಕ ಬಿಡ್ ಮತ್ತು ಫೈನಾನ್ಶಿಯಲ್ ಬಿಡ್ ತೆರೆಯುವಾಗಲೂ ಕಡತ ಮಂಡಿಸದೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಸಾಮಗ್ರಿಗಳ ಪೂರೈಕೆಗೆ ಆದೇಶ ನೀಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಬಿಲ್‌ಗಳನ್ನು ಪರಿಶೀಲಿಸಿದ ನಂತರ, ಕಚೇರಿ ಟಿಪ್ಪಣೆಯೊಂದಿಗೆ ಕಡತ ಅನುಮೋದನೆ ಪಡೆದು ನಗದು ಶಾಖೆಗೆ ಕಳುಹಿಸಬೇಕು. ಬಿಲ್ ಪಾವತಿ ಕುರಿತು ಸರ್ಕಾರದ ಖಜಾನೆ ತಂತ್ರಾಂಶ(K2)ದಲ್ಲಿ ರೋಲ್ ಮ್ಯಾಪಿಂಗ್ (ಸಂಪೂರ್ಣ ಪರಿಶೀಲನೆ) ಆಗುತ್ತದೆ. ಆದರೆ, ಈ ಟೆಂಡರ್‌ನಲ್ಲಿ ರೋಲ್ ಮ್ಯಾಪಿಂಗ್ ಆಗದೆ, ನೇರವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ಅನುಮೋದನೆ ಪಡೆದು ಹಣ ಪಾವತಿಸಲಾಗಿದೆ.

ಎರಡು ವೈಫೈ ರೂಟರ್ ಬೆಲೆ ಮಾರುಕಟ್ಟೆಯಲ್ಲಿ ಜಿಎಸ್‌ಟಿ ಸೇರಿ ₹8,270 ಇದೆ. ಅವುಗಳಿಗೆ ₹30 ಸಾವಿರ ಬಿಲ್ ಮಾಡಲಾಗಿದೆ. 55 ಇಂಚಿನ 15 ಎಲ್‌ಇಡಿ ಟಿವಿ ಮೊತ್ತ ₹3.97 ಲಕ್ಷವಿದ್ದು, ಅವುಗಳಿಗೆ ₹4.64 ಲಕ್ಷ ಬಿಲ್ ಸಲ್ಲಿಸಲಾಗಿದೆ. 25 ಎ.ಸಿ ಸ್ಪ್ಲಿಟ್ ಮಾರುಕಟ್ಟೆ ದರ ₹9.50 ಲಕ್ಷವಿದ್ದು, ಅವುಗಳಿಗೆ ₹17 ಲಕ್ಷ ಬಿಲ್ ಸಲ್ಲಿಸಲಾಗಿದೆ. ಈ ಮೂರು ಉಪಕರಣವನ್ನು ಒಂದೇ ಕಂಪನಿ ₹22.85 ಲಕ್ಷಕ್ಕೆ ಪೂರೈಸಿದ್ದು, ಡಿಮ್ಹಾನ್ಸ್ ಇನ್ನೂ ಹಣ ಪಾವತಿಸಿಲ್ಲ.

ನಾಳೆಯಿಂದ 3 ದಿನ ಬಿಸಿ ಗಾಳಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಇದೇ 18ರಿಂದ 20ರವರೆಗೆ ಬಿಸಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಾಗಲಕೋಟೆ, ಬೀದರ್, ಕಲಬುರಗಿ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಮೂರು ದಿನಗಳು ಬಿಸಿ ಗಾಳಿಯ ಪರಿಸ್ಥಿತಿ ಹೆಚ್ಚಾಗಿ ಇರುವ ಸಂಭವವಿದೆ. ಈ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಆದ್ದರಿಂದ ಜನರು ಮುನ್ನೆಚ್ಚರಿಕೆ ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶವು ಸಾಮಾನ್ಯಕ್ಕಿಂತ 3 ಡಿಗ್ರಿ ಸೆಲ್ಸಿಯಸ್ ವರೆಗೂ ಹೆಚ್ಚಳವಾಗಿದೆ. ಮುಂದಿನ ಐದು ದಿನಗಳಲ್ಲಿ ಉತ್ತರ ಒಳನಾಡಿನಲ್ಲಿ ಗರಿಷ್ಠ ಉಷ್ಣಾಂಶವು 2ರಿಂದ 4 ಡಿಗ್ರಿ ಸೆಲ್ಸಿಯಸ್, ದಕ್ಷಿಣ ಒಳನಾಡಿನಲ್ಲಿ



2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ, ಮೈಸೂರು, ಹಾಸನ ಮತ್ತು ಕೊಡಗು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಸೋಮವಾರ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಮಡಿಕೇರಿ: ಕೆಲವೆಡೆ ಮಳೆ

ಮಡಿಕೇರಿ: ತಾಲ್ಲೂಕಿನ ಕೆಲವೆಡೆ ಭಾನುವಾರ ಆಲಿಕಲ್ಲು, ಗುಡುಗು ಸಹಿತ ಮಳೆಯಾಗಿ, ತಂಪೆರೆಯಿತು.

ಭಾಗಮಂಡಲ, ಬೆಂಗೂರು, ಎಮ್ಮೆಮಾಡು, ನೆಲಜಿ, ಬಲ್ಲಮಾವಟಿ ಮೊದಲಾದ ಗ್ರಾಮಗಳಲ್ಲಿ ಮಳೆ ಬಿದ್ದಿತು.



ಕಲಬುರಗಿ ಜಿಲ್ಲೆಯ ಸೇಡಂ ಪೊಲೀಸ್ ಠಾಣೆ ಎದುರು ಹೋಳಿ ಹಬ್ಬದ ಅಂಗವಾಗಿ ಹಾಡಿಗೆ ಪೊಲೀಸರು ಹೆಜ್ಜೆ ಹಾಕಿದರು

ಸಮವಸ್ತ್ರದಲ್ಲೇ ಹೋಳಿ ಆಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಪೊಲೀಸರು ಸಮವಸ್ತ್ರದಲ್ಲಿಯೇ ಹೋಳಿ ಹಬ್ಬವನ್ನು ಪರಸ್ಪರ ಬಣ್ಣ ಎರಚಿ ಸಂಭ್ರಮಿಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಜಿಲ್ಲೆಯ ಸೇಡಂ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಪೊಲೀಸರು ಮಧ್ಯಾಹ್ನ ಖಾಕಿ ಬಟ್ಟೆ ಧರಿಸಿ ಪೊಲೀಸ್ ಸಮವಸ್ತ್ರದಲ್ಲಿಯೇ ಬಣ್ಣ ಎರಚಿ ಹಾಡಿಗೆ ನೃತ್ಯ ಪ್ರದರ್ಶಿಸಿದ್ದಾರೆ. ಮಹಿಳಾ ಮತ್ತು ಪುರುಷ ಪೊಲೀಸರು ಪರಸ್ಪರ ನೃತ್ಯಕ್ಕೆ ಹೆಜ್ಜೆ ಹಾಕಿದ್ದಾರೆ. ಮುಖಕ್ಕೆ ಬಣ್ಣ ಬಳಿದುಕೊಂಡಿರುವ ದೃಶ್ಯಗಳು ವಿಡಿಯೊದಲ್ಲಿದೆ.

ಭದ್ರತೆಯಲ್ಲಿ ಸಂಭಲ್ ಮಸೀದಿಗೆ ಬಣ್ಣ

ಸಂಭಲ್ (ಪಿಟಿಐ): ಭಾರಿ ಹಿಂಸಾಚಾರಕ್ಕೆ ಕಾರಣವಾಗಿದ್ದ ಉತ್ತರ ಪ್ರದೇಶದ ಸಂಭಲ್ ಜಿಲ್ಲೆಯ ಶಾಹಿ ಜಾಮಾ ಮಸೀದಿಯ ಹೊರ ಗೋಡೆಗಳಿಗೆ ಬಣ್ಣ ಬಳಿಯುವ ಕಾರ್ಯ ಭಾನುವಾರ ಶುರುವಾಗಿದೆ.

ಹೈಕೋರ್ಟ್ ಆದೇಶದಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಮೇಲ್ವಿಚಾರಣೆಯಲ್ಲಿ ಬಣ್ಣ ಬಳಿಯುವ ಕಾರ್ಯ ನಡೆಯುತ್ತಿದೆ ಎಂದು ಮಸೀದಿ ಸಮಿತಿಯ ವಕೀಲ ಶಕೀಲ್ ವರ್ಸಿ ತಿಳಿಸಿದ್ದಾರೆ. ಮೊಘಲರ ಕಾಲದ ಮಸೀದಿಯ ಸ್ಥಳವು ಪುರಾತನ ಹಿಂದೂ ದೇಗುಲಕ್ಕೆ ಸೇರಿದ್ದು ಎಂದು ಹಿಂದೂಗಳ ಪರವಾಗಿ ಸ್ಥಳೀಯ ಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿತ್ತು.

ಕೇಂದ್ರದಿಂದ ಶಿಕ್ಷಣ ಕ್ಷೇತ್ರ ನಿರ್ಲಕ್ಷ್ಯ: ಖರ್ಗೆ

ಪ್ರಜಾವಾಣಿ ವಾರ್ತೆ

ಗದಗ: 'ಕೇಂದ್ರ ಸರ್ಕಾರವು ಶಿಕ್ಷಣ ಕ್ಷೇತ್ರಕ್ಕೆ ಮಹತ್ವ ಕೊಡದೇ, ನಿರ್ಲಕ್ಷ್ಯ ತೋರುತ್ತಿರುವ ಕಾರಣ ಶಿಕ್ಷಣ ಸಂಸ್ಥೆಗಳಿಗೆ ಹಣದ ಮತ್ತು ಸಿಬ್ಬಂದಿ ಕೊರತೆ ಕಾಡುತ್ತಿದೆ. ಕೇಂದ್ರ ಸರ್ಕಾರವು ನಿರೀಕ್ಷಿತ ಮಟ್ಟದಲ್ಲಿ ಅನುದಾನವನ್ನೂ ಬಿಡುಗಡೆ ಮಾಡುತ್ತಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ಕೆ.ಎಚ್.ಪಾಟೀಲ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನವೋದಯ, ಕೇಂದ್ರೀಯ ವಿದ್ಯಾಲಯ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಶೇ 50ರಷ್ಟು ಹುದ್ದೆಗಳು ಖಾಲಿ ಉಳಿದಿವೆ. ಇಂಥ ಪರಿಸ್ಥಿತಿಯಲ್ಲಿ ಬಡಮಕ್ಕಳು ಉತ್ತಮ ಶಿಕ್ಷಣ ಪಡೆದು ಕೇಂದ್ರೀಯ ವಿಶ್ವವಿದ್ಯಾಲಯ, ಐಐಟಿ, ಐಐಎಂಗಳಲ್ಲಿ ಓದಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಕೇಂದ್ರ ಸರ್ಕಾರದವರು ದಕ್ಷಿಣದವರಿಗೆ ಅನ್ಯಾಯ ಮಾಡಲು ಪ್ರಯತ್ನಿಸುತ್ತಿದ್ದಾರೆ. ಜನಸಂಖ್ಯೆ ಆಧಾರದ ಮೇಲೆ ಸಂಸದರ ಸೀಟುಗಳನ್ನು ಕಡಿಮೆ ಮಾಡಿ, ಉತ್ತರ ಭಾರತದಲ್ಲಿ ಶೇ 30ರಷ್ಟು ಸೀಟುಗಳನ್ನು ಹೆಚ್ಚು ಮಾಡಿಕೊಳ್ಳುವ ಉದ್ದೇಶ ಹೊಂದಿದ್ದಾರೆ. ರಾಜ್ಯದ ಅಭಿವೃದ್ಧಿ ವಿಚಾರ ಬಂದಾಗ ಪ್ರಾದೇಶಿಕತೆ ಮರೆತು ನಾವೆಲ್ಲರೂ ಒಂದಾಗಬೇಕು. ಆಗ ಮಾತ್ರ ರಾಜ್ಯ ಉದ್ಧಾರವಾಗುತ್ತದೆ' ಎಂದರು.

ಗದಗದಲ್ಲಿ ನಡೆದ ಜನ್ಮಶತಮಾನೋತ್ಸವ ಸಮಾರಂಭ

ಅರಣ್ಯ ರಕ್ಷಿಸಿದ ಕೆ.ಎಚ್.ಪಾಟೀಲ ಸ್ಮರಣೆ

ಪ್ರಜಾವಾಣಿ ವಾರ್ತೆ

ಗದಗ: 'ಸಹಕಾರಿ ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸಿದ ಕೆ.ಎಚ್.ಪಾಟೀಲ ಅವರು ಸಮಗ್ರ ಕರ್ನಾಟಕದ ಅಭಿವೃದ್ಧಿಯ ದೂರದೃಷ್ಟಿ ಹೊಂದಿದ್ದರು. ಅರಣ್ಯ ಸಚಿವರಾಗಿದ್ದ ಅವರು ಕೈಗೊಂಡ ದಿಟ್ಟ ನಿಲುವಿನಿಂದ ಇಂದು ನಮ್ಮ ರಾಜ್ಯದಲ್ಲಿ ಪರಿಸರ ಮತ್ತು ಅರಣ್ಯ ಭೂಮಿ ಉಳಿದಿದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಕೆ.ಎಚ್.ಪಾಟೀಲ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೆ.ಎಚ್.ಪಾಟೀಲರ ಸಂಕಲ್ಪ, ಸಿದ್ಧಾಂತದ ಕಾರಣಕ್ಕೆ ಗದಗ ಜಿಲ್ಲೆ ಮಾದರಿಯಾಗಿದೆ' ಎಂದರು.



ಕೆ.ಎಚ್.ಪಾಟೀಲ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಎಚ್.ಕೆ.ಪಾಟೀಲ ಅಭಿನಂದಿಸಿದರು. ಡಿ.ಕೆ.ಶಿವಕುಮಾರ್, ಬಸವರಾಜ ಹೊರಟ್ಟಿ ಮತ್ತು ಪ್ರಮುಖರು ಪಾಲ್ಗೊಂಡಿದ್ದರು

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, 'ಗದಗ ಜಿಲ್ಲೆಯನ್ನು ಸಹಕಾರಿ ಜಿಲ್ಲೆಯನ್ನಾಗಿಸಿದ ಕೀರ್ತಿ ಕೆ.ಎಚ್.ಪಾಟೀಲರಿಗೆ ಸಲ್ಲುತ್ತದೆ. ಸರ್ವರ ಅಭಿವೃದ್ಧಿಗೆ ನೆರವಾಗುವ ಸಹಕಾರ ಕ್ಷೇತ್ರವನ್ನು ಉಳಿಸಲು ರಾಜ್ಯ ಸರ್ಕಾರ ಕ್ರಮ ವಹಿಸಬೇಕು. ಗ್ಯಾರಂಟಿ ಯೋಜನೆಗಳ ಜೊತೆಗೆ ರಾಜ್ಯದ ಅಭಿವೃದ್ಧಿಗೆ ಒತ್ತು ಕೊಡಬೇಕು' ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಕೆ.ಎಚ್.ಪಾಟೀಲ ಅವರು ಗ್ರಾಮ ಪಂಚಾಯಿತಿಯಿಂದ ಸಚಿವ ಸ್ಥಾನದವರೆಗೆ ತಮಗೆ ಸಿಕ್ಕ ಅವಕಾಶವನ್ನು ಜನರ ಬದುಕಿನ ಬದಲಾವಣೆಗೆ ಶ್ರಮಿಸಿದರು' ಎಂದರು.

ಸಚಿವ ಎಚ್.ಕೆ.ಪಾಟೀಲ ಮಾತನಾಡಿ, 'ಕೆ.ಎಚ್.ಪಾಟೀಲ ಅವರು ಕುಟುಂಬದ ಆಸ್ತಿಯಾಗಿರಲಿಲ್ಲ; ಸಾರ್ವಜನಿಕ ಆಸ್ತಿಯಾಗಿದ್ದರು. ಅವರ ಸಿದ್ಧಾಂತಗಳು ಹತ್ತು ಹಲವು ರೀತಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ' ಎಂದರು.

ಚಿನ್ನ ಮಾರಾಟಕ್ಕೆ ರನ್ಯಾ ಕಂಪನಿ

ಒಂದನೇ ಪುಟದಿಂದ...

'ಜಿನೀವಾ ಮತ್ತು ಬ್ಯಾಂಕಾಕ್‌ನಲ್ಲಿ ಪೂರೈಕೆದಾರರ ಪರಿಚಯವಿದ್ದ ಕಾರಣ 2024ರಿಂದ ಈ ದೇಶಗಳಿಂದಲೇ ಚಿನ್ನ ಖರೀದಿಸಲಾಗುತ್ತಿತ್ತು. ಕಸ್ಟಮ್ಸ್ ಬಳಿ ಜಿನೀವಾಗೆ ತೆಗೆದುಕೊಂಡು ಹೋಗುತ್ತಿರುವುದಾಗಿ ನನ್ನ ಹೆಸರಿನಲ್ಲಿ ರನ್ಯಾ ಡಿಕ್ಲರೇಷನ್ ಕೊಡುತ್ತಿದ್ದಳು ಎಂದು ತರುಣ್ ಹೇಳಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಚಿನ್ನದ ವ್ಯಾಪಾರಿಗಳು ವಶಕ್ಕೆ: ರನ್ಯಾ ಹಾಗೂ ತರುಣ್ ರಾಜು ಅವರಿಂದ ವಶಪಡಿಸಿಕೊಂಡಿರುವ ಮೊಬೈಲ್ ಹಾಗೂ ಲ್ಯಾಪ್‌ಟಾಪ್‌ಗಳನ್ನು ಪರಿಶೀಲನೆ ನಡೆಸಲಾಗಿದೆ. ಇಬ್ಬರಿಗೂ ಪ್ರಭಾವಿಗಳ ಜತೆ ನಂಟು ಹೊಂದಿರುವುದು ಗೊತ್ತಾಗಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಉಲ್ಲಂಘಿಸಿ ವಿದೇಶಿ ವಿನಿಮಯ ವಹಿವಾಟು ನಡೆದಿದೆ ಎಂಬ ಆರೋಪದ ಮೇರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ನಗರದ ಹಲವು ಕಡೆ ಶೋಧ ನಡೆಸಿದ್ದರು. ಆಗ ಚಿನ್ನದ ವ್ಯಾಪಾರಿಗಳ ಮನೆಯಲ್ಲಿ ವಿದೇಶದಿಂದ ತಂದಿರುವ ಚಿನ್ನ ಪತ್ತೆಯಾಗಿತ್ತು. ಇದರ ಆಧಾರದ ಮೇಲೆ ಇಬ್ಬರು ಚಿನ್ನದ ವ್ಯಾಪಾರಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿದೇಶಿ ಕರೆಗಳ ಪರಿಶೀಲನೆ

ರನ್ಯಾ ಅವರಿಗೆ ಬರುತ್ತಿದ್ದ ಅಂತರರಾಷ್ಟ್ರೀಯ ಕರೆಗಳ ಐಪಿ ವಿಳಾಸದ ಜಾಡು ಹಿಡಿದು ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಯಾರು, ಯಾವ ಕಾರಣಕ್ಕೆ ಇಂಟರ್‌ನೆಟ್ ಕರೆ ಮಾಡುತ್ತಿದ್ದರು ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೂ ತನಿಖಾ ತಂಡವು 50ಕ್ಕೂ ಹೆಚ್ಚು ಮಂದಿಯ ವಿಚಾರಣೆ ನಡೆಸಿದೆ. ಡಿಜಿಟಲ್ ಸಾಕ್ಷ್ಯ, ಬ್ಯಾಂಕ್ ಖಾತೆಗಳ ವಿವರಗಳನ್ನು ಸಂಗ್ರಹಿಸುತ್ತಿದೆ ಎಂದು ಮೂಲಗಳು ಹೇಳಿವೆ.

ಚಾಲಕನ ವಿಚಾರಣೆ

ವಿಮಾನ ನಿಲ್ದಾಣದಿಂದ ರನ್ಯಾ ಅವರನ್ನು ಕರೆದೊಯ್ಯಲು ಬಂದಿದ್ದ ಕಾರು ಚಾಲಕ ಅಬು ಅವರನ್ನು ಅಧಿಕಾರಿಗಳು ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ.

'ಮೂರು ದಿನಗಳ ಹಿಂದೆಯಷ್ಟೇ ರನ್ಯಾ ಅವರ ಪರಿಚಯವಾಗಿತ್ತು. ಮಾರ್ಚ್ 3ರಂದು ಅವರನ್ನು ಕರೆದೊಯ್ಯಲು ವಿಮಾನ ನಿಲ್ದಾಣಕ್ಕೆ ಸಂಜೆ 6.30ಕ್ಕೆ ಬಂದೆ. ರಾತ್ರಿ 10 ಗಂಟೆಯಾದರೂ ಬರಲಿಲ್ಲ. ಅವರ ಮೊಬೈಲ್‌ಗೆ ಕರೆ ಮಾಡಿದಾಗ ಸ್ವಿಚ್‌ಆಫ್ ಆಗಿತ್ತು. ಅವರ ಪತಿ ಜತೀನ್ ಅವರಿಗೆ ಕರೆ ಮಾಡಿ ನಾನು ಮನೆಗೆ ತೆರಳಿದೆ. ಅವರ ಬಂಧನವಾಗಿರುವ ವಿಚಾರ ಬೆಳಿಗ್ಗೆ ಮಾಧ್ಯಮಗಳಿಂದ ಗೊತ್ತಾಯಿತು' ಎಂದು ಅಬು ವಿಚಾರಣೆ ವೇಳೆ ತಿಳಿಸಿದ್ದಾರೆ.



ದೋಣಿಯಲ್ಲಿ ದೇವರು

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪೊಳಲಿ ಶ್ರೀರಾಜರಾಜೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರೆಯ ಕುದಿ ಮುಹೂರ್ತಕ್ಕೆ ತಂದಿದ್ದ ನಂದ್ಯ ಕ್ಷೇತ್ರದ ಆಯುಧ, ಮೊಗ, ಮೂರ್ತಿಗಳನ್ನು ಫಲ್ಗುಣಿ ನದಿಯಲ್ಲಿ ದೋಣಿಯಲ್ಲಿ ಭಾನುವಾರ ಒಯ್ಯಲಾಯಿತು

ಚಿತ್ರ: ಫಕ್ರುದ್ದೀನ್ ಎಚ್.

'ಕಾಂಗ್ರೆಸ್‌ಗೆ ಸೋಮಶೇಖರ್, ಹೆಬ್ಬಾರ ಶೀಘ್ರ'

ಹುಬ್ಬಳ್ಳಿ: 'ಬಿಜೆಪಿ ಶಾಸಕರಾದ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ ಅವರು ಶೀಘ್ರವೇ ಪಕ್ಷದಿಂದ ಉಚ್ಚಾಟನೆಯಾಗುವ ನಿರೀಕ್ಷೆಯಿದೆ. ಅವರು ಯಾವಾಗ ಕಾಂಗ್ರೆಸ್‌ಗೆ ಅಧಿಕೃತವಾಗಿ ಸೇರ್ಪಡೆ ಆಗುತ್ತಾರೆ ಎಂಬುದು ನೋಡಬೇಕಿದೆ' ಎಂದು ವಿಧಾನಪರಿಷತ್ ಸದಸ್ಯ ಸಲೀಂ ಅಹ್ಮದ್ ಹೇಳಿದರು.

'ಸೋಮಶೇಖರ್ ಮತ್ತು ಹೆಬ್ಬಾರ ಈಗಾಗಲೇ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದು, ಬಜೆಟ್ ಕೂಡ ಸ್ವಾಗತಿಸಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್‌ನ ಕೆಲ ನಾಯಕರು ಕಾಂಗ್ರೆಸ್ ಸೇರಲು ಉತ್ಸುಕರಾಗಿದ್ದಾರೆ. ಈ ಎಲ್ಲದರ ಬಗ್ಗೆ ಪಕ್ಷದ ವರಿಷ್ಠರು ಶೀಘ್ರವೇ ತೀರ್ಮಾನ ಕೈಗೊಳ್ಳುವರು' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ಐವರು ವಿದ್ಯಾರ್ಥಿಗಳ ಅಮಾನತು

ಹುಬ್ಬಳ್ಳಿ: ಇಲ್ಲಿನ ಕೆಎಂಸಿ-ಆರ್‌ಐ ಆಸ್ಪತ್ರೆಯ ಕಿರಿಯ ಎಂಬಿಬಿಎಸ್ ವಿದ್ಯಾರ್ಥಿಗಳು, ಹಿರಿಯ ಎಂಬಿಬಿಎಸ್ ವಿದ್ಯಾರ್ಥಿಗಳ ತರಗತಿಯಲ್ಲಿ ಕುಳಿತು ಅವರ ಪರ ಹಾಜರಾತಿ ಹಾಕಿದ ಆರೋಪದ ಮೇಲೆ, ಐವರು ವಿದ್ಯಾರ್ಥಿಗಳನ್ನು ಒಂದು ತಿಂಗಳು ಕಾಲೇಜಿನಿಂದ ಅಮಾನತು ಮಾಡಲಾಗಿದೆ.

ಸರ್ಜರಿ ವಿಭಾಗಕ್ಕೆ ಸಂಬಂಧಿಸಿ ಮಾರ್ಚ್ 14ರಂದು ಕೊನೆಯ ತರಗತಿ ನಡೆಯುತ್ತಿದ್ದಾಗ ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳು ಪ್ರಥಮ ವರ್ಷದ ಕೆಲ ವಿದ್ಯಾರ್ಥಿಗಳನ್ನು ಬೆದರಿಸಿ, ತಮ್ಮ ಪರ ತರಗತಿಗೆ ಹಾಜರಾಗುವಂತೆ ಹೇಳಿದ್ದರು. ಮಾಹಿತಿ ತಿಳಿದ ವಿಭಾಗದ ಸಹಾಯಕ ಪ್ರಾಧ್ಯಾಪಕರು ವಿದ್ಯಾರ್ಥಿಗಳನ್ನು ವಿಚಾರಿಸಿ, ಪ್ರಾಚಾರ್ಯ ಡಾ. ಗುರುಶಾಂತಪ್ಪ ಯಲಗಚ್ಚಿನ ಅವರಿಗೆ ಮಾಹಿತಿ ನೀಡಿದ್ದರು. ವಿಷಯ ತಿಳಿದ ಕೆಎಂಸಿ-ಆರ್‌ಐ ನಿರ್ದೇಶಕ ಡಾ. ಎಸ್.ಎಫ್. ಕಮ್ಮಾರ ಅವರು ಕಾಲೇಜಿನಲ್ಲಿ ಇರುವ ರ‍್ಯಾಗಿಂಗ್ ನಿಯಂತ್ರಕ ಸಮಿತಿಗೆ ವರದಿ ನೀಡುವಂತೆ ಸೂಚಿಸಿದ್ದರು. ಸಮಿತಿ ವಿದ್ಯಾರ್ಥಿಗಳ ವಿರುದ್ಧ ನಿರ್ದೇಶಕರಿಗೆ ವರದಿ ಸಲ್ಲಿಸಿದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ನಿರ್ದೇಶಕರು ಅಮಾನತು ಮಾಡಿದ್ದಾರೆ.

'ಮುಂದಿನ ಮುಖ್ಯಮಂತ್ರಿ ಸತೀಶ್ ಜಾರಕಿಹೊಳಿ'



ಗುರುತಿಪ್ಪೇರುದ್ರ ಸ್ವಾಮಿ ಜಾತ್ರೆಯ ಅಂಗವಾಗಿ ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯಲ್ಲಿ ಭಾನುವಾರ ನಡೆದ ರಥೋತ್ಸವದ ವೇಳೆ ಸಚಿವ ಸತೀಶ ಜಾರಕಿಹೊಳಿ ಅವರ ಭಾವಚಿತ್ರ ಪ್ರದರ್ಶಿಸಿದ ಅಭಿಮಾನಿಗಳು 'ಮುಂದಿನ ಮುಖ್ಯಮಂತ್ರಿ' ಎಂಬ ಘೋಷಣೆ ಕೂಗಿದರು

ಪ್ರಜಾವಾಣಿ ವಾರ್ತೆ

ನಾಯಕನಹಟ್ಟಿ (ಚಿತ್ರದುರ್ಗ ಜಿಲ್ಲೆ): ಭಾನುವಾರ ನಡೆದ ಇಲ್ಲಿನ ಗುರುತಿಪ್ಪೇರುದ್ರ ಸ್ವಾಮಿಯ ಮಹಾಜಾತ್ರೆಯಲ್ಲಿ 'ಮುಂದಿನ ಮುಖ್ಯಮಂತ್ರಿ ಸತೀಶ ಜಾರಕಿಹೊಳಿ' ಎಂದು ಕೆಲವರು ಘೋಷಣೆ ಕೂಗಿ, ಅವರ ಭಾವಚಿತ್ರ ಪ್ರದರ್ಶಿಸಿದ ಪ್ರಸಂಗ ಜರುಗಿತು.

ಕಾಯಕಯೋಗಿ, ಪವಾಡ ಪುರುಷ ಎಂದೆಲ್ಲ ಕರೆಯಿಸಿಕೊಳ್ಳುವ ತಿಪ್ಪೇರುದ್ರ ಸ್ವಾಮಿ ರಾಜಕಾರಣಿಗಳಿಗೆ ಬಲು ಇಷ್ಟದ ದೈವ. ಈ ಹಿನ್ನೆಲೆಯಲ್ಲಿ ರಾಜ್ಯದ ಹಲವು ರಾಜಕೀಯ ನಾಯಕರು ಈ ದೈವದ ಮೊರೆಹೋಗುವುದು ಸಾಮಾನ್ಯ. ಅಂತೆಯೇ ಕಳೆದ ಎರಡು ದಿನಗಳಿಂದ ಪಟ್ಟಣದಲ್ಲಿ ಸತೀಶ ಜಾರಕಿಹೊಳಿ ಅವರ ಅಭಿಮಾನಿಗಳು, ನೂರಾರು ಯುವಕರು ಸ್ವಯಂಪ್ರೇರಿತವಾಗಿ 'ಮುಂದಿನ ಮುಖ್ಯಮಂತ್ರಿ ಸತೀಶ ಜಾರಕಿಹೊಳಿ' ಎಂದು ಮುದ್ರಿಸಿರುವ 50ಕ್ಕೂ ಹೆಚ್ಚು ಫ್ಲೆಕ್ಸ್, ಬಂಟಿಂಗ್ಸ್, ಬ್ಯಾನರ್‌ಗಳನ್ನು ಜಾತ್ರೆ ನಡೆಯುವ ಎಲ್ಲೆಡೆ ಕಟ್ಟಿದ್ದಾರೆ.

ಭಾನುವಾರ ಬೆಳಿಗ್ಗೆಯಿಂದಲೇ ಭಕ್ತರಿಗೆ ಬ್ಯಾನರ್‌ಗಳ ಅಡಿಯಲ್ಲಿ ಮಜ್ಜಿಗೆ, ಉಪಹಾರ ಹಂಚಿದರು. ರಥೋತ್ಸವದ ವೇಳೆ 20ಕ್ಕೂ ಹೆಚ್ಚು ಯುವಕರು ಸತೀಶ್ ಜಾರಕಿಹೊಳಿ ಅವರ ಭಾವಚಿತ್ರಗಳನ್ನು ಪ್ರದರ್ಶಿಸಿ 'ಮುಂದಿನ ಮುಖ್ಯಮಂತ್ರಿಗೆ ಜಯವಾಗಲಿ' ಎಂದು ಕೂಗಿದರು. ಬಾಳೆಹಣ್ಣುಗಳ ಮೇಲೆ ಇದನ್ನೇ ಬರೆದು ರಥಕ್ಕೆ ಎಸೆದರು.

ತಿಂಗಳಿಗೆ ಒಮ್ಮೆಯಾದರೂ ಸ್ಪಂದಿಸಲು ಸೂಚನೆ

ಅಂಗವಿಕಲರ ಅಹವಾಲು: ನಡೆಯದ ಸಭೆ

● ಹರಿಶಂಕರ್ ಆರ್.

ಬಳ್ಳಾರಿ: ಸರ್ಕಾರದ ಸೂಚನೆಯಂತೆ ಪ್ರತಿ ತಿಂಗಳ ಮೂರನೇ ಸೋಮವಾರ ಪ್ರತಿ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಅಂಗವಿಕಲರ ಅಹವಾಲು ಸಭೆ ನಡೆಯಬೇಕು. ಆದರೆ, ಬಹುತೇಕ ಜಿಲ್ಲೆಗಳಲ್ಲಿ ಸಭೆಗಳೇ ನಡೆದಿಲ್ಲ.

ಅಂಗವಿಕಲರ ಅಧಿನಿಯಮ 2016ರ ಪರಿಣಾಮಕಾರಿ ಅನುಷ್ಠಾನಕ್ಕೆ ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಸರ್ಕಾರಕ್ಕೆ ತಲುಪಿಸಲು ಈ ಸಭೆಗಳು ಮುಖ್ಯ. ಅಧಿನಿಯಮ ಜಾರಿಯಾದ ಬಳಿಕ 2023ರ ನವೆಂಬರ್ 27ರಂದು ಸರ್ಕಾರವು ಸುತ್ತೋಲೆ ಹೊರಡಿಸಿ, ಸಭೆಗಳನ್ನು ನಡೆಸಲು ಸೂಚಿಸಿತು.

2024ರ ಅಂತ್ಯಕ್ಕೆ ಒಂದು ವರ್ಷದ ಅವಧಿಯಲ್ಲಿ ಬೆಂಗಳೂರು ನಗರ ಜಿಲ್ಲೆ-1, ಬೆಂಗಳೂರು ಗ್ರಾಮಾಂತರ-1, ಬಾಗಲಕೋಟೆ -1, ದಕ್ಷಿಣ ಕನ್ನಡ-2, ದಾವಣಗೆರೆ-1, ಹಾಸನ -1, ಶಿವಮೊಗ್ಗ-1, ಉಡುಪಿ -1, ಯಾದಗಿರಿ-1, ಚಿಕ್ಕಬಳ್ಳಾಪುರ-1, ವಿಜಯನಗರದಲ್ಲಿ-2 ಸಭೆಗಳು ನಡೆದಿದ್ದು ಹೊರತುಪಡಿಸಿದರೆ, ಇತರೆ ಜಿಲ್ಲೆಗಳಲ್ಲಿ ನಡೆದಿಲ್ಲ.

ಧಮಕಿ, ಮಾನನಷ್ಟದ ಕೇಸು: 'ಅಂಗವಿಕಲರ ಕಲ್ಯಾಣಕ್ಕೆ ಸರ್ಕಾರವು ಕಾಯಿದೆ ಜಾರಿಗೊಳಿಸಿ, ಹತ್ತಾರು ಕಾರ್ಯಕ್ರಮ ರೂಪಿಸಿದೆ. ಆದರೆ, ಇವುಗಳ ಅನುಷ್ಠಾನದಲ್ಲಿ ಅಕ್ರಮ, ವಿಳಂಬ ಆಗುತ್ತಿದೆ. ಈ ಕುರಿತ ಸಮಸ್ಯೆ ಆಲಿಸಲು ಕುಂದು ಕೊರತೆ ಆಲಿಕೆ ಸಭೆ ನಡೆಯಬೇಕು. ಸಭೆಯೇ ನಡೆಸದಿದ್ದರೆ, ಸಮಸ್ಯೆ ಪರಿಹಾರ ಆಗುವುದಾದರೂ ಹೇಗೆ? ನಮ್ಮ ಹಕ್ಕು ಕೇಳಲು ಹೋದರೆ, ನಮ್ಮನ್ನೇ ಬೆದರಿಸಲಾಗುತ್ತದೆ' ಎಂದು ರಾಜ್ಯ ಅಂಗಕವಿಕಲರ ಹಾಗೂ ಪಾಲಕರ ಒಕ್ಕೂಟದ ಸದಸ್ಯ ಎನ್. ಕುಮಾರಪ್ಪ ತಿಳಿಸಿದರು.




ರಾಜ್ಯದಲ್ಲಿ ಅಂಗವಿಕಲರ ಕಲ್ಯಾಣ ಕಾರ್ಯಗಳು ಚೆನ್ನಾಗಿ ಆಗುತ್ತಿವೆ. ಆದರೂ, ತಿಂಗಳಿಗೆ ಒಂದಾದರೂ ಅಹವಾಲು ಸಭೆ ನಡೆಸಲು ಡಿ.ಸಿಗಳಿಗೆ ತಿಳಿಸಿದ್ದೇನೆ

ದಾಸ್ ಸೂರ್ಯವಂಶಿ
ಅಂಗವಿಕಲ ವ್ಯಕ್ತಿಗಳ ಹಕ್ಕು ಅಧಿನಿಯಮ ಅನುಷ್ಠಾನದ ರಾಜ್ಯ ಆಯುಕ್ತ

'ಸವಲತ್ತು, ಸಲಕರಣೆಗಳು ಅನರ್ಹರ ಪಾಲಾಗುತ್ತಿವೆ. ಗುರುತಿನ ಚೀಟಿ ಮಾಡಿಸಲೂ ಲಂಚ ಕೊಡ ಬೇಕಿದೆ. ಇಲಾಖೆಗಳಲ್ಲಿ ಶೇ 5ರ ಅನುದಾನ ಮೀಸಲಿಡುತ್ತಿಲ್ಲ, ಮೀಸಲಿಟ್ಟ ಅನುದಾನ ಸದ್ಬಳಕೆಯಾಗಿಲ್ಲ. 2023-24ನೇ ಸಾಲಿನಲ್ಲಿ ರಾಜ್ಯದಾದ್ಯಂತ 15,670 ಯಂತ್ರಚಾಲಿತ ವಾಹನಗಳನ್ನು ನೀಡಿರುವುದು ದಾಖಲೆಗಳಲ್ಲಿದೆ. ಆದರೆ, ಅಂಗವೈಕಲ್ಯ ಇಲ್ಲದವರಿಗೂ ವಾಹನಗಳು ಸಿಕ್ಕಿವೆ. ಪ್ರತಿಯೊಂದಕ್ಕೂ ಲಂಚ ಕೊಟ್ಟು, ಕೆಲಸ ಮಾಡಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ' ಎಂದು ತಿಳಿಸಿದರು.

'2011ರ ಜನಗಣತಿಯ ಪ್ರಕಾರ, ರಾಜ್ಯದಲ್ಲಿ 13,24,205 ಅಂಗವಿಕಲರು ಇದ್ದರು. ಈ 13 ವರ್ಷಗಳಲ್ಲಿ ಈ ಸಂಖ್ಯೆ ಏರಿಕೆಯಾಗಿದೆ. ಆದರೆ, ಸದ್ಯ 10,17,093 ಅಂಗವಿಕಲರಿಗೆ ಮಾಸಾಶನ ಸಿಗುತ್ತಿದೆ.



❦ ಸುಭಾಷಿತ ❦

ಸ್ವಾತಂತ್ರ್ಯ ಮನುಷ್ಯನ ದುಡಿಮೆಯನ್ನು ಬೇಡುತ್ತದೆ.
ದುಡಿಯದ ಮನುಷ್ಯನಿಗೆ ಸ್ವಾತಂತ್ರ್ಯವಿರುವುದಿಲ್ಲ.
– ಹಾ.ಮಾ.ನಾಯಕ

ಕೊಪ್ಪಳ: ಕೈಗಾರಿಕೆಗಳಿಂದ ಮಾಲಿನ್ಯ ಹೆಚ್ಚಳ ಆಡಳಿತ ವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿ

ಕೊಪ್ಪಳ ತಾಲ್ಲೂಕಿನ ವಿವಿಧ ಗ್ರಾಮಗಳ ಜನರು ಅಲ್ಲಿನ ಕೈಗಾರಿಕೆಗಳು ಹೊರಬಿಡುತ್ತಿರುವ ದೂಳು ಮತ್ತು ಮಾಲಿನ್ಯಕಾರಕ ಗಾಳಿಯಿಂದ ರೋಸಿಹೋಗಿದ್ದಾರೆ. ಹಲವು ದಿನಗಳಿಂದ ಅವರು ಸಂಘಟಿತರಾಗಿ ಕೈಗಾರಿಕೆಗಳ ವಿರುದ್ಧ ನಡೆಸುತ್ತಿರುವ ಹೋರಾಟವು ಕೊಪ್ಪಳ ತಾಲ್ಲೂಕಿನಲ್ಲಿ ಕೈಗಾರಿಕೆಗಳಿಂದ ಆಗುತ್ತಿರುವ ಮಾಲಿನ್ಯದಿಂದ ಜನರು ಎದುರಿಸುತ್ತಿರುವ ಸಮಸ್ಯೆಗಳ ತೀವ್ರತೆಯನ್ನು ತೆರೆದಿಟ್ಟಿದೆ. ಕೊಪ್ಪಳ ತಾಲ್ಲೂಕು ಕೇಂದ್ರದ ವ್ಯಾಪ್ತಿಯಲ್ಲೇ ಒಟ್ಟು 202 ಸಣ್ಣ, ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳಿವೆ. ಅವುಗಳಲ್ಲಿ 40ಕ್ಕೂ ಹೆಚ್ಚು ಕಬ್ಬಿಣ ಮತ್ತು ಉಕ್ಕು ತಯಾರಿಕಾ ಕೈಗಾರಿಕೆಗಳು. ಈ ವ್ಯಾಪ್ತಿಯಲ್ಲಿನ 33 ಕೈಗಾರಿಕೆಗಳು ಮಾಲಿನ್ಯಕ್ಕೆ ಕಾರಣವಾಗುತ್ತಿವೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ವರದಿ ನೀಡಿದೆ. ಅವುಗಳಲ್ಲಿ 22 ಕೈಗಾರಿಕೆಗಳಿಂದ ಭಾರಿ ಪ್ರಮಾಣದ ಮಾಲಿನ್ಯವಾಗುತ್ತಿದೆ ಎಂಬುದು ವರದಿಯಲ್ಲಿದೆ. ಕೈಗಾರಿಕೆಗಳಿಂದ ಆಗುತ್ತಿರುವ ಈ ಮಾಲಿನ್ಯವು ಅಲ್ಲಿನ ಜನರ ಆರೋಗ್ಯ, ಜೀವನೋಪಾಯ ಮತ್ತು ಪರಿಸರದ ಮೇಲೆ ತೀವ್ರವಾದ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿದೆ. ಕೊಪ್ಪಳ ಜಿಲ್ಲಾ ಕೇಂದ್ರಕ್ಕೆ ಬರೀ ಒಂದು ಕಿ.ಮೀ. ದೂರದಲ್ಲಿ ಒಂದು ಸಾವಿರ ಎಕರೆ ಜಮೀನನ್ನು ಬಳಸಿಕೊಂಡು ಉಕ್ಕು ಮತ್ತು ವಿದ್ಯುತ್ ಉತ್ಪಾದನಾ ಕಾರ್ಖಾನೆಯನ್ನು ವಿಸ್ತರಿಸಲು ಬಲ್ಡೋಟಾ ಸಮೂಹವು ಮುಂದಾಗಿದೆ. ಜನರ ವಿರೋಧಕ್ಕೆ ಮಣಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕೈಗಾರಿಕೆ ವಿಸ್ತರಣಾ ಕಾಮಗಾರಿಗೆ ತಾತ್ಕಾಲಿಕ ತಡೆ ವಿಧಿಸಿದ್ದಾರೆ. ಇದರಿಂದ ಜನರಿಗೆ ತಾತ್ಕಾಲಿಕ ಪರಿಹಾರವಷ್ಟೇ ಸಿಕ್ಕಿದೆ.



ಮಾಲಿನ್ಯ ನಿಯಂತ್ರಣ ಮಂಡಳಿಯು ಬಿಗಿಯಾದ ನಿಲುವು ತಳೆಯಬೇಕು. ಜನರ ಆರೋಗ್ಯ, ಜೀವನೋಪಾಯ ಮತ್ತು ಪರಿಸರ ರಕ್ಷಣೆಯನ್ನು ಆದ್ಯತೆಯಾಗಿ ಪರಿಗಣಿಸಬೇಕು

ಉಕ್ಕು, ಸಿಮೆಂಟ್, ರಸಗೊಬ್ಬರ ಮತ್ತು ಕೈಗಾರಿಕಾ ಅನಿಲಗಳನ್ನು ಉತ್ಪಾದಿಸುವ ಕಾರ್ಖಾನೆಗಳ ಪೈಕಿ ಕೆಲವು ಕೈಗಾರಿಕಾ ತ್ಯಾಜ್ಯವನ್ನು ಸಂಸ್ಕರಿಸದೇ ನೇರವಾಗಿ ಹೊರಬಿಡುತ್ತಿರುವ ಆರೋಪವಿದೆ. ಇದರಿಂದಾಗಿ ಅಲ್ಲಿನ ರೈತರ ಫಲವತ್ತಾದ ಜಮೀನುಗಳು ಬರಡಾಗಿ ಪರಿವರ್ತನೆಯಾಗುತ್ತಿವೆ. ಕೈಗಾರಿಕೆಗಳಿಂದ ಹೆಚ್ಚುತ್ತಿರುವ ಮಾಲಿನ್ಯವು ಕೃಷಿಯನ್ನು ಅಸ್ತವ್ಯಸ್ತಗೊಳಿಸಿದೆ. ಬೆಳೆ ಹಾನಿಯಾದ ಜಮೀನುಗಳ ಮಾಲೀಕರಿಗೆ ಪರಿಹಾರ ಒದಗಿಸುವುದಾಗಿ ಕಾರ್ಖಾನೆಯವರು ಹೇಳುತ್ತಿದ್ದಾರೆ. ಆದರೆ, ಆ ಮೊತ್ತ ತೀರಾ ಕಡಿಮೆ. ಅದು ನ್ಯಾಯಸಮ್ಮತವಾಗಿಲ್ಲ ಎಂಬುದು ರೈತರ ಆಕ್ಷೇಪ. ಕೈಗಾರಿಕೆಗಳು ಇರುವ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿನ ನೀರು ಹಾಗೂ ಗಾಳಿಯಲ್ಲಿ ವಿಷಕಾರಿ ಅಂಶಗಳ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಇದರಿಂದಾಗಿ ಅಲ್ಲಿನ ನಿವಾಸಿಗಳು ಉಸಿರಾಟದ ತೊಂದರೆ, ಚರ್ಮರೋಗ ಸೇರಿದಂತೆ ಹಲವು ಬಗೆಯ ಆರೋಗ್ಯದ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಬಲ್ಡೋಟಾ ಕಾರ್ಖಾನೆಯ ವಿಸ್ತರಣೆಯ ಜೊತೆ ಇನ್ನೆರಡು ಬೃಹತ್ ಕೈಗಾರಿಕೆಗಳ ಆರಂಭಕ್ಕೆ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಸಹಿ ಹಾಕಲಾಗಿರುವುದು ಸ್ಥಳೀಯರ ಆತಂಕ ಹೆಚ್ಚಿಸಿದೆ. ಉದ್ದೇಶಿತ ಕೈಗಾರಿಕೆಗಳ ಸ್ಥಾಪನೆಗೆ ಜಮೀನು ಗುರುತಿಸಿರುವ ಪ್ರದೇಶಗಳು ಜನವಸತಿಗಳಿಗೆ ಸಮೀಪದಲ್ಲೇ ಇವೆ.

ಕೊಪ್ಪಳದಲ್ಲಿನ ಕೈಗಾರಿಕೆಗಳ ಮಾಲೀಕರು ಮಾಲಿನ್ಯ ತಡೆಗೆ ಸರಿಯಾದ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಕೈಗಾರಿಕಾ ತ್ಯಾಜ್ಯ ಮತ್ತು ಹಾರುಬೂದಿಯ ಸಂಸ್ಕರಣೆಗೆ ಹೆಚ್ಚು ವಿದ್ಯುತ್ ಅಗತ್ಯವಿರುವುದರಿಂದ ಸಂಸ್ಕರಿಸದೇ ಅವುಗಳನ್ನು ವಾತಾವರಣಕ್ಕೆ ಬಿಡಲಾಗುತ್ತಿದೆ. ಇದು ಜನರ ಅರಿವಿಗೆ ಬಾರದೇ ಇರಲಿ ಎಂಬ ಕಾರಣಕ್ಕಾಗಿ ರಾತ್ರಿ ವೇಳೆಯಲ್ಲೇ ಹೆಚ್ಚಿನ ಉತ್ಪಾದನಾ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎನ್ನುವ ದೂರುಗಳಿವೆ. ಹಾರುಬೂದಿ ನೇರವಾಗಿ ಶ್ವಾಸಕೋಶವನ್ನು ಸೇರುತ್ತಿರುವುದರಿಂದ ಶಾಲಾ ಮಕ್ಕಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉಸಿರಾಟದ ತೊಂದರೆಗಳು ವರದಿಯಾಗುತ್ತಿವೆ. ಸಾರ್ವಜನಿಕರಿಂದ ದೂರುಗಳು ನಿರಂತರವಾಗಿ ಸಲ್ಲಿಕೆಯಾಗುತ್ತಿದ್ದರೂ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗಾರಿಕೆಗಳಿಗೆ ನೋಟಿಸ್ ಜಾರಿಗೊಳಿಸುವುದನ್ನು ಹೊರತಾಗಿ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಈಗ ಕೊಪ್ಪಳದಲ್ಲಿ ಉಂಟಾಗಿರುವ ಪರಿಸ್ಥಿತಿಯು ಆಡಳಿತ ವೈಫಲ್ಯಕ್ಕೆ ಕನ್ನಡಿ ಹಿಡಿಯುತ್ತಿದೆ. ಅಲ್ಲದೆ, ಸಾರ್ವಜನಿಕ ಹಿತಾಸಕ್ತಿ ರಕ್ಷಣೆಯ ವಿಷಯದಲ್ಲಿ ಜನರು ಆಡಳಿತ ವ್ಯವಸ್ಥೆಯ ಮೇಲೆ ಇರಿಸಿರುವ ನಂಬಿಕೆಗೆ ದ್ರೋಹ ಬಗೆಯುವಂತಹದ್ದು. ಮಾಲಿನ್ಯ ನಿಯಂತ್ರಣ ಮಂಡಳಿಯು ಈ ವಿಷಯದಲ್ಲಿ ರಾಜಕಾರಣಿಗಳು ಮತ್ತು ಕೈಗಾರಿಕೋದ್ಯಮಿಗಳ ಪ್ರಭಾವಕ್ಕೆ ಮಣಿಯದೇ ಬಿಗಿಯಾದ ನಿಲುವು ತಳೆಯಬೇಕು. ಜನರ ಆರೋಗ್ಯ, ಜೀವನೋಪಾಯ ಮತ್ತು ಪರಿಸರ ರಕ್ಷಣೆಯನ್ನು ಆದ್ಯತೆಯಾಗಿ ಪರಿಗಣಿಸಿ ಮಾಲಿನ್ಯ ನಿಯಂತ್ರಣಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ರಾಜ್ಯದ ಪ್ರಗತಿ ಆಗಬೇಕಾದರೆ ಕೈಗಾರಿಕೆಗಳ ಅಭಿವೃದ್ಧಿಯೂ ಅಗತ್ಯ. ಆದರೆ, ಅದಕ್ಕಾಗಿ ಜನರ ಜೀವ ಮತ್ತು ಪರಿಸರವನ್ನು ಬಲಿ ಕೊಡಬೇಕಿಲ್ಲ. ಜನರ ಆರೋಗ್ಯ ಮತ್ತು ಜೀವನೋಪಾಯವನ್ನೂ ರಕ್ಷಿಸಿಕೊಂಡು ಸುಸ್ಥಿರ ಕೈಗಾರಿಕಾ ಅಭಿವೃದ್ಧಿಗೆ ಉತ್ತೇಜನ ನೀಡುವಂತಹ ಸಮತೋಲಿತ ಪ್ರಯತ್ನ ಬೇಕಿದೆ.

ದಿನದ ಟ್ವೀಟ್

ಲಾಲ್‌ಬಾಗ್‌ನಲ್ಲಿ ಪುಂಡಾಟಿಕೆ ಸಲ್ಲ



ಲಾಲ್‌ಬಾಗ್ ಅಂದ್ರೆ ಬೆಂಗಳೂರಿಗರ ಮನದಲ್ಲಿ ಸಸ್ಯಕಾಶಿ ಅನ್ನುವ ಪವಿತ್ರವಾದ ಜಾಗ. ಅದಕ್ಕೊಂದು ಭಾವನಾತ್ಮಕವಾದ ನಂಟೂ ಇದೆ. ಅಲ್ಲಿ ಹೋಳಿ ಹೆಸರಿನಲ್ಲಿ ಸೇರಿದ ಕಿಡಿಗೇಡಿಗಳ ಪುಂಡಾಟಿಕೆ ನೋಡಿ ಬೇಸರವಾಯಿತು. ಲಾಲ್‌ಬಾಗ್, ಕಬ್ಬನ್ ಪಾರ್ಕ್ ತರದ ಜಾಗಗಳಲ್ಲಿ ಈ ತರದ್ದಕ್ಕೆಲ್ಲ ಅವಕಾಶ ಕೊಡಬೇಡಿ ಮುಖ್ಯಮಂತ್ರಿಯವರೇ...

ವಸಂತ ಶೆಟ್ಟಿ, ಲೇಖಕ

ಕಿಡಿನುಡಿ



ದೇಶದಲ್ಲಿ ಸರ್ಕಾರಿ ಶಾಲೆಗಳು ಬಂದ್ ಆಗುತ್ತಿವೆ. ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚುತ್ತಿದೆ. ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಂದ ಹೊರಗುಳಿಯುತ್ತಿದ್ದಾರೆ. ನವೋದಯ ವಿದ್ಯಾಲಯಗಳಲ್ಲಿ 40 ಸಾವಿರ, ಕೇಂದ್ರೀಯ ವಿದ್ಯಾಲಯಗಳಲ್ಲಿ 7,400, ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ 5,400 ಹುದ್ದೆಗಳು ಖಾಲಿ ಇವೆ. ಅಲ್ಲದೆ, ದೇಶದಾದ್ಯಂತ 90 ಸಾವಿರ ಸರ್ಕಾರಿ ಶಾಲೆಗಳು ಬಂದ್ ಆಗಿವೆ. ಹೀಗೆ ಸರ್ಕಾರಿ ಶಾಲೆಗಳನ್ನು ಬಂದ್ ಮಾಡಿದರೆ, ಬಡವರ ಮಕ್ಕಳು ಎಲ್ಲಿ ಕಲಿಯಬೇಕು?

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

25 ವರ್ಷಗಳ ಹಿಂದೆ

ಶುಕ್ರವಾರ, 17-3-2000

● **ಸಿಬಿಐನಿಂದ ಕಂಬಾಲಪಲ್ಲಿ ಹತ್ಯೆ ತನಿಖೆ: ವಿರೋಧಿ ಬೇಡಿಕೆಗೆ ಮಣಿದ ಸರ್ಕಾರ**

ಬೆಂಗಳೂರು, ಮಾರ್ಚ್ 16– ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿಯಲ್ಲಿ ಕಳೆದ ಶನಿವಾರ ರಾತ್ರಿ ಏಳು ಮಂದಿ ದಲಿತರನ್ನು ಸಜೀವವಾಗಿ ದಹನ ಮಾಡಿದ ಘಟನೆಯ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂಬ ಪ್ರತಿಪಕ್ಷಗಳ ಬೇಡಿಕೆಗೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಇಂದು ವಿಧಾನಸಭೆಯಲ್ಲಿ ಒಪ್ಪಿಗೆ ಸೂಚಿಸಿದರು.

‘ಜತೆಗೆ ಅದೇ ದಿನ ಕಂಬಾಲಪಲ್ಲಿ ಗ್ರಾಮದಲ್ಲಿ ನಡೆದ ಸವರ್ಣೀಯ ವ್ಯಕ್ತಿಯೊಬ್ಬನ ಕೊಲೆ ಹಾಗೂ ಈ ಕೊಲೆಗೆ ಕಾರಣ ಎನ್ನಲಾದ ರಸ್ತೆ ಅಪಘಾತ ಪ್ರಕರಣವನ್ನೂ ಸರ್ಕಾರ ಸಿಬಿಐ ತನಿಖೆಗೆ ಒಪ್ಪಿಸಲಿದೆ. ಈ ಮೂರು ಪ್ರಕರಣಗಳ ಬಗ್ಗೆ ಸಿಬಿಐ ತನಿಖೆ ನಡೆಸಲಿರುವುದರಿಂದ ಈ ಘಟನೆಗಳ ಬಗ್ಗೆ ಪ್ರತ್ಯೇಕವಾಗಿ ನ್ಯಾಯಾಂಗ ತನಿಖೆ ನಡೆಸುವುದಿಲ್ಲ’ ಎಂದರು.

● **ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಶಿವರಾಜ ಪಾಟೀಲ್**

ಬೆಂಗಳೂರು, ಮಾರ್ಚ್ 16– ಮೂಲತಃ ಕರ್ನಾಟಕದವರಾದ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ್ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಬಡ್ತಿ ನೀಡಲಾಗಿದೆ. ಮುಖ್ಯ ನ್ಯಾಯಮೂರ್ತಿ ಡಾ.ಎ.ಎಸ್.ಆನಂದ ಅವರು ಬುಧವಾರ ಪ್ರಮಾಣ ವಚನ ಬೋಧಿಸಿದರು. ರಾಜಸ್ತಾನ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆಗಿದ್ದ ಪಾಟೀಲ್ ಅವರು ದೇವದುರ್ಗ ತಾಲ್ಲೂಕಿನ ಮಲಡ್ಕಲ್ ಗ್ರಾಮದವರು.

50 ವರ್ಷಗಳ ಹಿಂದೆ

ಸೋಮವಾರ, 17-3-1975

● **ಒಂದು ವಾರದಲ್ಲಿ ಬಿಹಾರಕ್ಕೆ ಹೊಸ ಮುಖ್ಯಮಂತ್ರಿ?**

ಚೈಬಾಸ, ಮಾರ್ಚ್ 16– ಇನ್ನು ಒಂದು ವಾರದೊಳಗಾಗಿ ಬಿಹಾರ ಮುಖ್ಯಮಂತ್ರಿ ಅಬ್ದುಲ್ ಗಫೂರ್ ಅವರ ಸ್ಥಾನಕ್ಕೆ ಹೊಸಬರನ್ನು ಆಯ್ಕೆ ಮಾಡುವ ಸ್ಪಷ್ಟ ಸೂಚನೆಗಳು ಕಂಡುಬಂದಿವೆ.

ಬಿಹಾರ ವಿಧಾನಸಭೆ ಬಜೆಟ್ ಅಧಿವೇಶನದ ನಂತರ ಕಾಂಗ್ರೆಸ್ ಶಾಸಕ ಪಕ್ಷದ ನಾಯಕತ್ವದಲ್ಲಿ ಬದಲಾವಣೆಯಾಗುವುದೆಂದು ಈ ಮೊದಲು ವರದಿಯಾಗಿತ್ತು.

ಇನ್ನು ಒಂದು ವಾರದೊಳಗಾಗಿ ಹೊಸ ನಾಯಕರನ್ನು ಆಯ್ಕೆ ಮಾಡಲಾಗುವುದೆಂದು ಬಿಹಾರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸೀತಾರಾಮ ಕೇಸರಿ ತಿಳಿಸಿದ್ದಾರೆ.

● **ಇಂದಿರಾ– ಭಾವೆ ರಹಸ್ಯ ಚರ್ಚೆ ವಿವರಗಳ ಬಹಿರಂಗಕ್ಕೆ ಆಗ್ರಹ**

ನಾಗಪುರ, ಮಾರ್ಚ್ 16– ಜಯಪ್ರಕಾಶ ನಾರಾಯಣ್ ಅವರು ಬಿಹಾರದಲ್ಲಿ ಚಳವಳಿ ಪ್ರಾರಂಭಿಸಿದ ನಂತರ ಆಚಾರ್ಯ ವಿನೋಬಾ ಭಾವೆ ಮತ್ತು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರ ನಡುವೆ ನಡೆದ ರಹಸ್ಯ ಮಾತುಕತೆಯ ವಿವರಗಳನ್ನು ಬಹಿರಂಗ ಪಡಿಸುವಂತೆ ಜನಸಂಘದ ನಾಯಕ ಎ.ಬಿ. ವಾಜಪೇಯಿಯವರು ಇಂದು ಇಲ್ಲಿ ಒತ್ತಾಯಪಡಿಸಿದರು.

ಒಂದು ವರ್ಷದಿಂದೀಚೆಗೆ ಇಂದಿರಾ ಅವರು ಪೌನಾರ್ ಆಶ್ರಮದಲ್ಲಿ ಮೂರು ಬಾರಿ ಆಚಾರ್ಯ ವಿನೋಬಾ ಭಾವೆಯವರನ್ನು ಭೇಟಿ ಮಾಡಿದ್ದಾರೆ.

ಎರಡೂ ಪಕ್ಷಗಳಿಗೆ ‘ಸಾಲ’ ಎಂಬುದು ಪರಸ್ಪರ ಆರೋಪದ ವಿಷಯವಷ್ಟೇ ಆಗಿದೆ

ಸರ್ಕಾರ: ಪಕ್ಷ ಸಂಗೋಪನಾ ಕೇಂದ್ರವೇ?



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ರಾಜಕೀಯ ಪಕ್ಷವೊಂದು ಸರ್ಕಾರದ ನೇತೃತ್ವ ವಹಿಸಿಕೊಂಡಾಗ ಮಂತ್ರಿ ಸ್ಥಾನ ಸಿಗದ ಶಾಸಕರು, ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳು, ಪಕ್ಷದ ತಳಹಂತದ ಕಾರ್ಯಕರ್ತರು ಹಾಗೂ ಮಧ್ಯಮ ಸ್ತರದ ನಾಯಕರು ದೈನಂದಿನ ರಾಜಕಾರಣದಲ್ಲಿ ತೊಡಗುವಂತೆ ಅವರಲ್ಲಿ ಅಧಿಕಾರದ ‘ಬಲ’ ತುಂಬಲು ವಿವಿಧ ಸ್ಥಾನಮಾನಗಳನ್ನು ದಯಪಾಲಿಸುವುದು ಎಲ್ಲ ಪಕ್ಷಗಳು ಹಿಂದಿನಿಂದ ಪಾಲಿಸಿಕೊಂಡು ಬಂದ ಸಂಪ್ರದಾಯ ಆಗಿದೆ. ಆಡಳಿತ ನಡೆಸುವವರ ಇಂತಹ ನಡೆಯ ಹಿಂದೆ ಸ್ವಪಕ್ಷೀಯರನ್ನು ರಾಜಕೀಯವಾಗಿ, ಆರ್ಥಿಕವಾಗಿ ಶಕ್ತಗೊಳಿಸುವ ಉದ್ದೇಶದ ಜೊತೆಗೆ ಅವರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ, ಓಲೈಸುವ ಕಾರ್ಯಸೂಚಿ ಇರುವುದು ರಹಸ್ಯವೇನಲ್ಲ. ಒಂದು ಮಟ್ಟದಲ್ಲಿ ಒಳಗೊಳಗೇ ನಡೆಯುತ್ತಿದ್ದ ರಾಜಕೀಯ ಪಕ್ಷಗಳ ಇಂತಹ ಅಧಿಕಾರ, ಸ್ಥಾನಮಾನ, ಅನುದಾನ ಹಂಚಿ ತಿನ್ನುವ ಪ್ರವೃತ್ತಿಯು ಪ್ರಚಲಿತ ‘ಅತಿರೇಕಗಳ ಕಾಲ’ಕ್ಕೆ ತಕ್ಕಂತೆ ವ್ಯಾಪಕ ಹಾಗೂ ಬಹಿರಂಗ ಸ್ವರೂಪ ಪಡೆದಂತಿದೆ.

ಸರ್ಕಾರದ ಬೊಕ್ಕಸ ಭರ್ತಿಯಾಗಿರುವ ಸಮೃದ್ಧ ಕಾಲಮಾನದಲ್ಲಿ ಇಂತಹ ಬಾಬತ್ತುಗಳಿಗೆ ವ್ಯಯವಾಗುವ ಮೊತ್ತ ಗಂಭೀರ ಗಣನೆಗೂ ಗಮನಕ್ಕೂ ಬಾರದೇ ಹೋಗಬಹುದಿತ್ತು, ನಿರ್ಲಕ್ಷ್ಯಕ್ಕೂ ಒಳಗಾಗುವ ಸಾಧ್ಯತೆ ಇತ್ತು. ಆದರೆ ಅತಿಶೀಘ್ರ ಅಧಿಕಾರ ಗಳಿಕೆ ಮತ್ತು ಅತಿದೀರ್ಘ ಅವಧಿಗೆ ಅಧಿಕಾರ ಉಳಿಸಿಕೊಳ್ಳುವ ಹಂಬಲದ ಬೆನ್ನುಹತ್ತಿರುವ ರಾಜಕೀಯ ಪಕ್ಷಗಳು ಸರ್ಕಾರದ ಆರ್ಥಿಕ ವ್ಯವಸ್ಥೆಯನ್ನು ಹದಗೆಡಿಸಲು ಅಗತ್ಯವಾದ ಎಲ್ಲ ಕಸರತ್ತುಗಳನ್ನು ಮಾಡುತ್ತಿವೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳುವಂತೆ ಕರ್ನಾಟಕ ರಾಜ್ಯ ಸರ್ಕಾರವು ಮುಂದಿನ ಆರ್ಥಿಕ ವರ್ಷದಲ್ಲಿ ₹1.16 ಲಕ್ಷ ಕೋಟಿ ಸಾಲ ಮಾಡುವ ಮೂಲಕ ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಲಿದೆ. ಇದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಕ್ಕೂಟ ಸರ್ಕಾರದ ಸಾಲ ₹200 ಲಕ್ಷ ಕೋಟಿ ದಾಟಿದ್ದನ್ನು ಪ್ರಸ್ತಾಪಿಸುತ್ತಾರೆ. ಅಂದರೆ ಎರಡೂ ಪಕ್ಷಗಳಿಗೆ ಈ ‘ಸಾಲ’ ಎಂಬುದು ಅನುಕರಣೀಯ ಆರೋಪ ಮತ್ತು ಆದರ್ಶವಾಗಿ ಮಾರ್ಪಟ್ಟಿದೆ!

‘ಹಾಸಿಗೆ ಇದ್ದಷ್ಟು ಕಾಲು ಚಾಚು’ ಎಂಬ ಪಾರಂಪರಿಕ ತಿಳಿವಳಿಕೆ ಹೊಂದಿದ ನಾಡು ನಮ್ಮದು. ಆದರೆ ಕಾಲಾಂತರದಲ್ಲಿ ಒಂದು ನಾಗರಿಕ ಸಮಾಜವಾಗಿ, ಒಂದು ಪ್ರಜಾಸತ್ತಾತ್ಮಕ ಸರ್ಕಾರವಾಗಿ ‘ಕಾಲು ಚಾಚುವಷ್ಟು ಹಾಸಿಗೆ ಹಾಸು’ ಎಂಬ ಬದಲಾವಣೆಗೆ ಒಗ್ಗಿಕೊಂಡಂತೆ ಕಾಣಿಸುತ್ತದೆ. ಜಾಗತೀಕರಣ ಮತ್ತು ಉದಾರೀಕರಣದ ಫಲಾನುಭವಿಯಾಗಿ ಜನರ ಬದುಕಿನೊಳಗೆ ನುಸುಳಿರುವ ಕಾರ್ಪೋರೇಟ್ ಪ್ರಣೀತ ಕೊಳ್ಳುಬಾಕ ಸಂಸ್ಕೃತಿಯು ‘ಸಾಲಗಾರರ ಸಂತತಿ’ ಹೆಚ್ಚಿಸಲು ಸಾಧ್ಯವಿರುವ ಎಲ್ಲ ವಿಧ, ತಂತ್ರ ಮತ್ತು ತಂತ್ರಜ್ಞಾನವನ್ನು ಹೇರಳವಾಗಿ ಬಳಸುತ್ತಿದೆ. ‘ಸಾಲ ಮಾಡಿಯಾದರೂ ತುಪ್ಪ ತಿನ್ನು’ ಎನ್ನುವ ಇನ್ನೊಂದು ಗಾದೆಮಾತನ್ನು ವ್ಯಕ್ತಿಗಳಷ್ಟೇ ಅಲ್ಲ, ಸರ್ಕಾರಗಳೂ ಅಳವಡಿಸಿಕೊಂಡ ಎಲ್ಲಾ ಲಕ್ಷಣಗಳಿವೆ.

ವ್ಯಕ್ತಿಯಾಗಲೀ, ಸಂಸ್ಥೆಯಾಗಲೀ, ಸರ್ಕಾರವಾಗಲೀ ಸಾಲ ಮಾಡಲೇಕೂಡದು ಎಂದು ಯಾವ ಅರ್ಥಶಾಸ್ತ್ರವೂ ಸಮಾಜಶಾಸ್ತ್ರವೂ ಪ್ರತಿಪಾದಿಸುವುದಿಲ್ಲ. ಹಾಗೆಯೇ ತುಪ್ಪ ತಿನ್ನಲೇಕೂಡದು ಎಂದು ಯಾವ ಆಹಾರ ತಜ್ಞರೂ ಹೇಳಲಾರರು. ಆದರೆ ಸಾಲವನ್ನು ಯಾರು ಯಾವಾಗ ಯಾವುದಕ್ಕೆ ಮಾಡಬೇಕು ಎಂಬ ವಿವೇಕ ಹಾಗೂ ಆರೋಗ್ಯಕ್ಕೆ ಎಷ್ಟು ತುಪ್ಪ ಹಿತಕಾರಿ ಎಂಬ ತಿಳಿವಳಿಕೆ ಬಹಳ ಮುಖ್ಯ. ಈ ರೀತಿಯ ವಿವೇಚನೆ ಮರೆಯಾಗಿ ಅಥವಾ ಮರೆಮಾಚಿ ಸಾಲ ಬಾಚಿಕೊಳ್ಳಲು ಮುಂದಾದರೆ ಚಾಣಕ್ಯ ಕೂಡ ಅಸಹಾಯಕನಾಗಿ ನಿಲ್ಲಬೇಕಾದೀತು.

ಯಾವುದೇ ಆರ್ಥಿಕ ಕೊರತೆ ನಿಭಾಯಿಸಲು ಜನಸಾಮಾನ್ಯರು ಸಾಂಪ್ರದಾಯಿಕವಾಗಿ ಅನುಸರಿಸುವ ಎರಡು ಸರಳ ಮತ್ತು ಸಾಮಾನ್ಯ ಮಾರ್ಗಗಳಿವೆ. ಒಂದು, ವಿವಿಧ ಮೂಲಗಳಿಂದ ಆದಾಯದಲ್ಲಿ ಹೆಚ್ಚಳ ಮಾಡಿಕೊಳ್ಳುವುದು. ಎರಡು, ವೆಚ್ಚಕ್ಕೆ ಕಡಿವಾಣ ಹಾಕಿ ಸಮತೋಲನ ಸಾಧಿಸುವುದು. ಇಂತಹ ಪ್ರಾಥಮಿಕ, ಸಾಮುದಾಯಿಕ ತಿಳಿವಳಿಕೆಯನ್ನೇ ಆರ್ಥಿಕ ತಜ್ಞರು ಅವರವರ ಪ್ರಮೇಯಗಳಿಗೆ ಅನುಗುಣವಾಗಿ ಸಂಕೀರ್ಣ ರೀತಿಯಲ್ಲಿ ಮಂಡಿಸಬಹುದು. ವಿಚಿತ್ರವೂ ವಿಷಾದನೀಯವೂ ಆದ ಸಂಗತಿಯೆಂದರೆ ಈಗಿನ ಸರ್ಕಾರ ಇವೆರಡರಲ್ಲಿ ಯಾವ ಒಂದು ದಿಕ್ಕಿನಲ್ಲಿ ಕ್ರಮಿಸಲೂ ಸಾಧ್ಯವಾಗದಂತೆ ತನ್ನನ್ನು ತಾನು ಕಟ್ಟಿಹಾಕಿಕೊಂಡ ಸ್ಥಿತಿ ತಲುಪಿರುವುದು.

ಸರ್ಕಾರದ ವರಮಾನ ಹೆಚ್ಚಿಸಲು ಬೇಕಾದ ದಕ್ಷತೆ, ಪ್ರಾಮಾಣಿಕತೆ ಮತ್ತು ಆಡಳಿತ ನೀತಿಯನ್ನು ದುರ್ಬೀನು ಹಿಡಿದು ಹುಡುಕಿದರೂ ವ್ಯವಸ್ಥೆಯ ಯಾವ ಮೂಲೆಯಲ್ಲಿಯೂ ಅದು ಗೋಚರಿಸಲಿಕ್ಕಿಲ್ಲ. ಭ್ರಷ್ಟಾಚಾರ ಮತ್ತು ಪ್ರಾಮಾಣಿಕತೆ ನಡುವೆ ಏರ್ಪಡಬೇಕಿದ್ದ ಸಂಘರ್ಷ, ಚರ್ಚೆ ಮತ್ತು ತುಲನೆ ಕೇವಲ ಭ್ರಷ್ಟಾಚಾರದ ಪ್ರಮಾಣ ಸೂಚಿಸುವ ಪರ್ಸೆಂಟೇಜುಗಳ ವ್ಯತ್ಯಾಸ ಅಳೆಯುವುದಕ್ಕೆ ಸೀಮಿತವಾಗಿರುವುದು ಬೇರೆಯದೇ ಕಥೆ ಹೇಳುತ್ತದೆ. ಹಾಗೆ ನೋಡಿದರೆ ರಾಜಕಾರಣಿಗಳು ಮತ್ತು ಅಧಿಕಾರಿಗಳು ಹಣ ಹುಟ್ಟಿಸುವುದರಲ್ಲಿ ನಿಸ್ಸೀಮರು; ಮರಳುಗಾಡಿನಲ್ಲೂ ಆದಾಯ ಕಟಾವು ಮಾಡಬಲ್ಲರು. ಆದರೆ ಆ ದಕ್ಷತೆ, ಚಾಣಾಕ್ಷತೆ, ಚಮತ್ಕಾರಗಳು ಸರ್ಕಾರದ ಬೊಕ್ಕಸ ತುಂಬಿಸಲು ಲಭಿಸುವುದಿಲ್ಲ.

ಈ ಹಿಂದೆ 1989-90ರಲ್ಲಿ ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ವೀರೇಂದ್ರ ಪಾಟೀಲ ಅವರು ನೀಡಿದ ಸಮರ್ಥ ಆಡಳಿತ ಶೈಲಿಯನ್ನು ಅನುಕರಿಸುವುದು ಒತ್ತಟ್ಟಿಗಿರಲಿ, ಈಗಿನ ರಾಜಕಾರಣ ಅದನ್ನು ಸ್ಮರಿಸುವ ಮನಃಸ್ಥಿತಿಯಲ್ಲೂ ಇಲ್ಲ. ವೀರೇಂದ್ರ ಪಾಟೀಲ ಅವರು ಎರಡನೇ ಬಾರಿ ಅಧಿಕಾರದ ಹೊಣೆ ಹೊತ್ತಾಗಿನ ಸಮಯ ಅತ್ಯಂತ ಕಠಿಣ ಆರ್ಥಿಕ ಸಂಕಷ್ಟದಿಂದ, ಸವಾಲಿನಿಂದ ಕೂಡಿತ್ತು. ಆದಾಗ್ಯೂ ಅವರು ಅಲ್ಪಾವಧಿಯಲ್ಲಿಯೇ ಆರ್ಥಿಕ ಸ್ಥಿರತೆಯನ್ನು ಕಾಪಾಡುವುದರ ಜೊತೆಗೆ ರಾಜ್ಯದ ಮೂಲ ಸೌಕರ್ಯಗಳ ಬೆಳವಣಿಗೆಗೆ ವಿಶೇಷ ಒತ್ತು ನೀಡಿದರು. ಮದ್ಯದ ಮೇಲಿನ ಸುಂಕ ಕುರಿತಾದ ಅವರ ರಾಜಿರಹಿತ ನೀತಿಗಳು ರಾಜ್ಯದ ವರಮಾನದ ಹೆಚ್ಚಳಕ್ಕೆ ಸಹಜವಾಗಿಯೇ ಕಾರಣವಾದವು. ಬಿಗಿ ನಿಲುವಿನ ಆಡಳಿತದ ಮಾತು ಬಂದಾಗ ಕೇಳಿಬರುವ ಮತ್ತೊಂದು ಹೆಸರೆಂದರೆ, ಎಂ.ರಾಜಶೇಖರಮೂರ್ತಿ. ಅವರು ಹಣಕಾಸು, ಅಬಕಾರಿ ಮತ್ತು ಕಂದಾಯ ಸಚಿವರಾಗಿ ಕಟ್ಟುನಿಟ್ಟಿನ ಆಡಳಿತಕ್ಕೆ, ವರಮಾನದ ಹೆಚ್ಚಳಕ್ಕೆ ಹೆಸರು ಮಾಡಿದ್ದರು.



ಖಜಾನೆಯ ವರಮಾನ ಹೆಚ್ಚಳದ ಮಾರ್ಗೋಪಾಯಗಳು, ಮಾದರಿಗಳು ರುಚಿಸದಿದ್ದರೆ ಆರ್ಥಿಕ ಆರೋಗ್ಯ ಕಾಪಾಡಿಕೊಳ್ಳಲು ಸರ್ಕಾರ ತನ್ನ ಮುಂದಿರುವ ದುಂದು ವೆಚ್ಚಗಳ ಮೇಲೆ ನಿಯಂತ್ರಣ ಸಾಧಿಸುವ ಮತ್ತೊಂದು ಆಯ್ಕೆಯನ್ನಾದರೂ ಪರಿಗಣಿಸುವ ಸ್ಥಿತಿಯಲ್ಲಿದೆಯೇ? ಅಂತಹ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ. ಮಂತ್ರಿಗಳ ಮನೆ-ಕಚೇರಿಗಳ ನವೀಕರಣ, ಕಾರುಗಳ ಖರೀದಿ, ಸಲಹೆಗಾರರ ತಂಡ, ನಿಗಮ ಮಂಡಳಿಗಳ ಅಧ್ಯಕ್ಷರು-ಸದಸ್ಯರ ನೇಮಕದಂತಹ ಖರ್ಚುಗಳ ಬಾಬತ್ತು ಕಡಿತಗೊಳಿಸುವ ಸಾಮರ್ಥ್ಯ ಯಾವ ಸರ್ಕಾರದ ಬಳಿಯೂ ಉಳಿದಿಲ್ಲ. ಈಗಿನ ಸರ್ಕಾರದಲ್ಲಿ ಅಧಿಕಾರದಲ್ಲಿರುವವರ ಇಚ್ಛೆಗನುಗುಣವಾಗಿ ಹೀಗೆ ಭರ್ತಿಯಾಗಿರುವ ನೂರಕ್ಕೂ ಹೆಚ್ಚು ಹುದ್ದೆಗಳಿಗೆ ಸಂಪುಟ ದರ್ಜೆ ಸಚಿವರ ಸ್ಥಾನ-ಸೌಲಭ್ಯ ನೀಡಿರುವುದು ಗಮನಾರ್ಹ.

ಎಲ್ಲ ಪಕ್ಷಗಳ ನೇತೃತ್ವದ ಸರ್ಕಾರಗಳಲ್ಲಿ ಅನೂಚಾನವಾಗಿ ನಡೆಯುವ ಈ ಪ್ರಕ್ರಿಯೆಗೆ ಇದೀಗ ಹೊಸದಾಗಿ ಸೇರ್ಪಡೆಯಾಗಿರುವುದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳು. ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಈ ಸಮಿತಿಗಳಲ್ಲಿ ಆಡಳಿತ ಪಕ್ಷದ ಕಾರ್ಯಕರ್ತರಿಗೆ, ನಾಯಕರಿಗೆ ಅವಕಾಶ ಕಲ್ಪಿಸಲು ವಾರ್ಷಿಕ ₹15 ಕೋಟಿ ವ್ಯಯಿಸಲಾಗುತ್ತಿದೆ. ರಾಜ್ಯ ಭರಿಸುತ್ತಿರುವ ಹಣಕಾಸು ಹೊರೆಗಿಂತ ಆಡಳಿತ ಪಕ್ಷ ಗಳಿಸುವ ರಾಜಕೀಯ ಲಾಭದ ಮೇಲೆ ಪ್ರತಿಪಕ್ಷಗಳ ಕೆಂಗಣ್ಣು. ಇಂಥ ಬಹಳಷ್ಟು ವಿಷಯಗಳನ್ನು ಪ್ರಸ್ತಾಪಿಸಲು ನೈತಿಕ ಶಕ್ತಿ ಹೊಂದಿಲ್ಲದ ವಿರೋಧ ಪಕ್ಷಗಳಿಗೆ ಆಡಳಿತ ಪಕ್ಷದಿಂದ ‘ನಿಮ್ಮ ಪಕ್ಷ ಮಾಡಿಲ್ಲವೇ?’ ಎಂಬ ಸಿದ್ಧ ಉತ್ತರ ಇದ್ದೇ ಇರುತ್ತದೆ. ಪಕ್ಷದ ನಾಯಕರು ಮತ್ತು ಕಾರ್ಯಕರ್ತರನ್ನು ತೃಪ್ತಿಪಡಿಸುವುದರ ಹಿಂದೆ ಅತ್ಯಂತ ಸಂಕೀರ್ಣವೂ ದುಬಾರಿಯೂ ಆದ ಚುನಾವಣೆಗಳನ್ನು ನಿರ್ವಹಿಸುವ ಮತ್ತು ಗೆಲ್ಲುವ ಅನಿವಾರ್ಯ ಕೆಲಸ ಮಾಡುವುದನ್ನು ಮರೆಯಬಾರದು.

ಮಾರ್ಚ್ ಮಾಸದಲ್ಲಿ ಶಾಂತವೇರಿ ಗೋಪಾಲಗೌಡ, ರಾಮಮನೋಹರ ಲೋಹಿಯಾ ಅವರಂತಹ ಮಹನೀಯರ ಹುಟ್ಟಿದ ದಿನಗಳು ಬರುತ್ತವೆ. ಸಮಾಜವಾದಿಗಳು ತಮ್ಮ ಸರಳ ಬದುಕಿನ ಮೂಲಕ ಹಾಕಿಕೊಟ್ಟ ಸಾರ್ವಜನಿಕ ಜೀವನದ ಆದರ್ಶಗಳು ಈ ಸಂದರ್ಭದಲ್ಲಾದರೂ ಸಂಬಂಧಿಸಿದವರ ಎದೆಗೆ ಬೀಳಲಿ ಎಂದು ಆಶಿಸಬಹುದಷ್ಟೇ.

ಚುರುಮುರಿ



ಹೆಗ್ಗಣಗಳ ರಾಜ್ಯದಲ್ಲಿ

● ಸುಮಂಗಲಾ

ಬೆಕ್ಕಣ್ಣ ಪೇಪರು ಓದುತ್ತ ಪಕಪಕನೆ ನಗುತ್ತಿತ್ತು.

‘ಹಿಂತಾಪರಿ ಎದಕ್ಕೆ ನಗಾಕೆ ಹತ್ತೀ?’ ನಾನು ಅಚ್ಚರಿಯಿಂದ ಕೇಳಿದೆ.

ಪ್ರಜಾವಾಣಿಯಲ್ಲಿ ‘ಬೇಕಾಗಿದ್ದಾನೆ ಕಿಂದರಿಜೋಗಿ’ ಅಂತ ಐವತ್ತು ವರ್ಷಗಳ ಹಿಂದಿನ ಸುದ್ದಿಯನ್ನು ಬೆಕ್ಕಣ್ಣ ತೋರಿಸಿತು.

‘ಒಂದು ಜೋಡಿ ಹೆಗ್ಗಣಗಳ ಸಂತಾನ ಮೂರು ವರ್ಷದಲ್ಲಿ 35 ಕೋಟಿ ಆಗುವುದೆಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಪ್ರಕಟಣೆಯೊಂದು ತಿಳಿಸುತ್ತದೆ’ ಎನ್ನುವುದು ಸುದ್ದಿಯ ಸಾರವಾಗಿತ್ತು.

‘ಒಂದು ಜೋಡಿ ಹೆಗ್ಗಣದಿಂದ 35 ಕೋಟಿ ಹೆಗ್ಗಣಗಳ ಸಂತಾನ ಆಗೂದು ಉತ್ಪ್ರೇಕ್ಷೆ ಅನ್ನಿಸಿದರೂ, ಲಕ್ಷಗಟ್ಟಲೆ ಆಗೂದಂತೂ ಹೌದು’ ಎಂದೆ.

‘ಅತಪಾ... ಹಂಗೇ ಅಂದ್ಕಳಣ. ಈ ಐವತ್ತು ವರ್ಷಕ್ಕೆ ಎಷ್ಟಾಗಿರಬೌದು ಹೇಳು’ ಎಂದು ಮರುಪ್ರಶ್ನಿಸಿತು.

ಹೆಗ್ಗಣಗಳು ಪ್ರತಿ ಮೂರು ತಿಂಗಳಿಗೆ ಸುಮಾರು 8-10 ಮರಿ ಹಾಕುತ್ತವೆ, ಇವುಗಳಲ್ಲಿ ಅರ್ಧದಷ್ಟು ಹೆಣ್ಣು ಅಂದ್ಕಳಣ, ಪ್ರತಿ ಮರಿಯೂ ಮೂರೇ ತಿಂಗಳಲ್ಲಿ ಸಂತಾನೋತ್ಪತ್ತಿಗೆ ಸಿದ್ಧವಾಗುತ್ತೆ. ಅಂದ್ರೆ ಘಾತೀಯ ಬೆಳವಣಿಗೆ, ಎಕ್ಸ್‌ಪೊನೆನ್ಷಿಯಲ್ ಗ್ರೋತ್. ಅರ್ಧದಷ್ಟು ಮಾತ್ರ ಬದುಕುಳೀತಾವೆ, ಒಂದೂವರೆ-ಎರಡು ವರ್ಷ ಇವುಗಳ ಆಯುಷ್ಯ... ನಾನು ತಲೆ ಕೆರೆದುಕೊಂಡೆ.

ಬೆಕ್ಕಣ್ಣ ಚಾಟ್‌ಜಿಪಿಟಿಗೆ ಕೇಳಿತು. ಚಾಟ್‌ಜಿಪಿಟಿ ಅದೇನೋ ಪೈಥಾನ್ ಸ್ಕ್ರಿಪ್ಟ್ ಹಾಕಿ ತಟ್ಟನೆ ಉತ್ತರಿಸಿತು ‘50 ವರ್ಷದ ಹಿಂದಿದ್ದ ಒಂದು ಹೆಗ್ಗಣ ದಂಪತಿಯಿಂದ 13ರ ಮುಂದೆ 48 ಸೊನ್ನೆ ಹಾಕಿದ್ರೆ ಎಷ್ಟಾಗುತ್ತೆ ಅಷ್ಟು ಹೆಗ್ಗಣಗಳು ಹುಟ್ಟಿರತಾವೆ’.

ರಾತ್ರಿ ಬೆಂಗಳೂರಿನ ರಸ್ತೆಗಳಲ್ಲಿ ಕೋಟ್ಯಂತರ ಹೆಗ್ಗಣಗಳೇ ಓಡಾಡುವುದನ್ನು ಚಿತ್ರಿಸಿಕೊಂಡು ನನ್ನ ಮೈನಡುಗಿತು.

‘ಬೀದಿ ಬೆಕ್ಕುಗಳ ಸಂತಾನೋತ್ಪತ್ತಿ ಹೆಚ್ಚಿಸೋದಕ್ಕೆ ಸರ್ಕಾರ ಕ್ರಮ ತಗಂಡು, ಛಲೋತ್ನಾಗಿ ಸಾಕಿ, ಹೆಗ್ಗಣ ಹಿಡಿಯೋ ಡ್ಯೂಟಿ ವಹಿಸಬೇಕು’ ಎಂದೆ.

‘ನಾವು ಬೆಕ್ಕುಗಳು ಡ್ಯೂಟಿ ಮಾಡತೀವಿ, ಬಿಡು. ಆದರೆ ಈ ಐವತ್ತು ವರ್ಷದಲ್ಲಿ ಎರಡೇ ಕಾಲಿನ ಹೆಗ್ಗಣಗಳ ಸಂಖ್ಯೆ ಸರ್ಕಾರದ ಎಲ್ಲಾ ಇಲಾಖೆವಳಗೆ ಎಕ್ಸ್‌ಪೊನೆನ್ಷಿಯಲ್ ಆಗಿ ಹೆಚ್ಚೈತಲ್ಲ... ಅವರನ್ನು ಹಿಡಿಯೋರು ಯಾರು?’ ಎಂದು ಬೆಕ್ಕಣ್ಣ ಮರುಪ್ರಶ್ನಿಸಿತು!

ಸಂಗತ

ಪಾಲಕರಿಗೂ ಬೇಕು ಪೂರ್ವಸಿದ್ಧತೆ!

ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕುವಂತೆ ಮಾಡುವುದು ಪಾಲಕರ ಕರ್ತವ್ಯವಾದರೂ ಅದು ವಿಪರೀತ ಹೊರೆಯಾಗದಂತೆ ನೋಡಿಕೊಳ್ಳಬೇಕು

● ಮಲ್ಲಿಕಾರ್ಜುನ ಹೆಗ್ಗಳಗಿ

ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಪರಿಚಿತರೊಬ್ಬರು ಸೇವೆಯಿಂದ ಅಮಾನತುಗೊಂಡಿದ್ದರು. ‘ಕೆಲಸದ ಸ್ಥಳದಲ್ಲಿ ಸರಿಯಾಗಿ ಇರುವುದಿಲ್ಲ, ಗಮನ ಕೊಟ್ಟು ಕೆಲಸ ಮಾಡುವುದಿಲ್ಲ, ಕೆಲಸದ ಅವಧಿಯಲ್ಲಿ ಉದ್ಯೋಗದ ಸ್ಥಳ ತೊರೆದು ಹೊರಗೆ ಹೋಗುತ್ತೀರಿ...’ ಎಂದು ಕಂಪನಿ ಅವರ ಮೇಲೆ ಆಪಾದನೆಗಳನ್ನು ಹೊರಿಸಿ ನೋಟಿಸ್ ನೀಡಿತ್ತು.

ಅವರಿಗೆ ಇಬ್ಬರು ಮಕ್ಕಳು. ಇಬ್ಬರನ್ನೂ ಖಾಸಗಿ ಶಾಲೆಯೊಂದಕ್ಕೆ ಸೇರಿಸಿದ್ದಾರೆ. ಸಮಸ್ಯೆ ಎಂದರೆ ಆ ಶಾಲೆ ಮನೆಯಿಂದ ದೂರದಲ್ಲಿದೆ. ‘ಶಾಲೆ ಚೆನ್ನಾಗಿದೆ ಅಂತ ಹೇಳಿದರು. ಸೇರಿಸಿಬಿಟ್ಟಿದ್ದೇನೆ. ಆದರೆ, ಶಾಲೆಯ ಸಾರಿಗೆ ವ್ಯವಸ್ಥೆ ಸರಿಯಾಗಿಲ್ಲದ ಕಾರಣ, ಮಕ್ಕಳನ್ನು ಮುಂಜಾನೆ ಶಾಲೆಗೆ ಬಿಡುವುದು ಮತ್ತು ಸಂಜೆ ಕರೆದುಕೊಂಡು ಬರುವುದು ಅನಿವಾರ್ಯವಾಗಿದೆ. ಇದರಿಂದ ಹೈರಾಣ ಆಗಿದ್ದೇನೆ...’ ಎಂಬುದು ಅವರ ಅಳಲು. ಅವರ ಮನೆಯ ಸಮೀಪದಲ್ಲೇ ಸರ್ಕಾರಿ ಶಾಲೆ ಇದೆ. ಅನೇಕ ಪೋಷಕರಂತೆ ಅವರಿಗೂ ಆ ಶಾಲೆ ಬೇಡವಾಗಿದೆ. ಅದಕ್ಕೆ ಅವರದೇ ಆದ ತರ್ಕ ಇದೆ.

ಇದು, ಇವರೊಬ್ಬರ ಸಮಸ್ಯೆ ಮಾತ್ರವಲ್ಲ, ಬಹಳಷ್ಟು ಪಾಲಕರು ಅನುಭವಿಸುವ ಸಂಕಟವಾಗಿದೆ. ಮಕ್ಕಳನ್ನು ಶಾಲೆಗೆ ಕಳಿಸಲು, ಮರಳಿ ಕರೆತರಲು, ಮಧ್ಯಾಹ್ನದ ಊಟ ಕೊಡಲು, ಶಾಲಾ ಅವಧಿಯ ನಂತರ ಮನೆ ಪಾಠಕ್ಕೆ ಬಿಟ್ಟು ಬರಲು ಪಾಲಕರು ಓಡಾಡುತ್ತಿರುತ್ತಾರೆ. ಈ ಒತ್ತಡದಲ್ಲಿ ಅವರು ಸಿಲುಕಿಕೊಂಡಿರುತ್ತಾರೆ. ಅದು ಕುಟುಂಬದ ನೆಮ್ಮದಿಯನ್ನು ಹಾಳುಮಾಡುತ್ತದೆ ಮಾತ್ರವಲ್ಲ, ಉದ್ಯೋಗದ ಕಾರ್ಯಕ್ಷಮತೆಯ ಮೇಲೂ ಪರಿಣಾಮ ಬೀರುತ್ತದೆ.

ವಿವಿಧ ಸಂಸ್ಥೆಗಳಲ್ಲಿ, ಸರ್ಕಾರಿ ಹಾಗೂ ಖಾಸಗಿ ಕಚೇರಿಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಕೆಲಸದ ಅವಧಿಯಲ್ಲಿ ಮಕ್ಕಳ ಸ್ಕೂಲ್ ಡ್ಯೂಟಿ ಮಾಡುತ್ತಾರೆ ಎಂಬ ಆಪಾದನೆಗಳು ಕೇಳಿಬರುತ್ತವೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕು ಎಂಬುದು ಎಲ್ಲ ಪಾಲಕರ ಉದ್ದೇಶವಾಗಿರುತ್ತದೆ. ಆದರೆ ಅವರನ್ನು ಯಾವ ಶಾಲೆಗೆ ಸೇರಿಸಬೇಕು, ದೂರದ ಶಾಲೆಗೆ ಸೇರಿಸಿದರೆ ಆಗುವ ಅನನುಕೂಲಗಳೇನು, ಪ್ರತಿವರ್ಷ ಎಷ್ಟು ವೆಚ್ಚ ಮಾಡಬೇಕಾಗುತ್ತದೆ, ಈ ಖರ್ಚನ್ನು ನಿಭಾಯಿಸುವುದು ಹೇಗೆ, ಮಗುವಿನ ಒಲವು ಏನು ಎಂಬಂತಹ ವಿಷಯಗಳ ಬಗ್ಗೆ ವಿಚಾರ ಮಾಡಿ, ಚೆನ್ನಾಗಿ ಪೂರ್ವಸಿದ್ಧತೆ ಮಾಡಿಕೊಳ್ಳುವುದು ಬಹಳ ಅವಶ್ಯ.

ಶಿಕ್ಷಣ ಸಂಸ್ಥೆ ದೊಡ್ಡದು, ಹೆಸರು ಚೆನ್ನಾಗಿದೆ, ಮಕ್ಕಳು ಅಂಕ ಹೆಚ್ಚಿಗೆ ಪಡೆಯುತ್ತಾರೆ ಎಂಬಂತಹ ಮಾಹಿತಿಗಳನ್ನು ಕೇಳಿ ಮಕ್ಕಳನ್ನು ದೂರದ ಶಾಲೆಗಳಿಗೆ ಪಾಲಕರು ಸೇರಿಸುತ್ತಾರೆ.

ಪ್ರಾಥಮಿಕ, ಮಾಧ್ಯಮಿಕ ಹಂತದಲ್ಲಿ ಓದುವ ಮಕ್ಕಳನ್ನು ಸಾಧ್ಯವಾದಷ್ಟೂ ಮನೆಯ ಸಮೀಪದ ಶಾಲೆಗೆ ಸೇರಿಸುವುದು ಉತ್ತಮ. ಮಕ್ಕಳು ತಮ್ಮಷ್ಟಕ್ಕೆ ತಾವೇ ಶಾಲೆಗೆ ನಡೆದುಕೊಂಡು ಹೋಗಿ ಬರುವುದಕ್ಕೆ ಸಾಧ್ಯವಾಗಬೇಕು. ಇದರಿಂದ ಅವರಲ್ಲಿ ಧೈರ್ಯ, ಆತ್ಮವಿಶ್ವಾಸ ಬೆಳೆಯುತ್ತದೆ. ಉಳಿದ ಮಕ್ಕಳೊಂದಿಗೆ ಮಾತನಾಡಿಕೊಂಡು ನಲಿಯುತ್ತಾ ಹೋಗುವುದು ಸಂತಸದ ಸಂಗತಿ. ಇದು ಕ್ರಮೇಣ ಅವರಲ್ಲಿ ಸಮಷ್ಟಿ ಪ್ರಜ್ಞೆಯನ್ನೂ ಬೆಳೆಸುತ್ತದೆ.

ಬಹಳಷ್ಟು ಪಾಲಕರು ತಮ್ಮ ವಾಹನಗಳಲ್ಲಿ ಮಕ್ಕಳನ್ನು ಶಾಲೆಗೆ ಬಿಟ್ಟು ಬರುತ್ತಾರೆ. ಮಕ್ಕಳು ಸ್ವತಂತ್ರವಾಗಿ ನಡೆದುಕೊಂಡು ಶಾಲೆಗೆ ಹೋಗುವುದು ಅಪರೂಪವಾಗಿದೆ. ಇದರಿಂದ ಅವರು ನಡಿಗೆಯ ಸಂಭ್ರಮವನ್ನೇ ಕಳೆದುಕೊಳ್ಳುತ್ತಿದ್ದಾರೆ. ‘ನಡಿಗೆ ಎಂಬುದು ಅರಿವಿನ ಹಾದಿ’ ಎನ್ನುತ್ತಿದ್ದರು ವಿಜಯಪುರದ ಸಿದ್ಧೇಶ್ವರ ಶ್ರೀಗಳು.



ಆರ್ಥಿಕ ಅನುಕೂಲ ಇರುವವರು ತಮ್ಮ ಮಕ್ಕಳನ್ನು ದೂರದ ವಸತಿಶಾಲೆಗಳಿಗೆ ಹೆಚ್ಚು ಹಣ ಕೊಟ್ಟು ಸೇರಿಸುತ್ತಾರೆ. ಅವರನ್ನು ಭೇಟಿಯಾಗುವುದಕ್ಕೆ ಕುಟುಂಬ ಸದಸ್ಯರು ತಿಂಗಳಲ್ಲಿ ಎರಡು– ಮೂರು ಬಾರಿ ಹೋಗಿ ಬರುತ್ತಾರೆ. ಆದರೆ ಕಡಿಮೆ ಆದಾಯದವರು ಇದನ್ನು ಅನುಕರಿಸಿ ಸಂಕಷ್ಟಕ್ಕೆ ಸಿಲುಕಿದ ಉದಾಹರಣೆಗಳು ಬಹಳಷ್ಟಿವೆ. ಮಕ್ಕಳ ಶಿಕ್ಷಣಕ್ಕಾಗಿ ಮೈಕ್ರೊಫೈನಾನ್ಸ್ ಕಂಪನಿಗಳಲ್ಲಿ, ಲೇವಾದೇವಿ ವ್ಯವಹಾರ ಮಾಡುವವರ ಬಳಿ ಸಾಲ ಮಾಡಿದವರೂ ಇದ್ದಾರೆ. ಅವರು ಮಕ್ಕಳ ಶಿಕ್ಷಣವನ್ನು ಮುಂದುವರಿಸುವುದಕ್ಕೆ ಅನುಭವಿಸುತ್ತಿರುವ ಕಷ್ಟ ಅಷ್ಟಿಷ್ಟಲ್ಲ.

ಕೆಲವು ಕಡೆ ಶಾಲಾ ವಾಹನಗಳು ಬಂದು ಮಕ್ಕಳನ್ನು ಕರೆದುಕೊಂಡು ಹೋಗುತ್ತವೆ. ಕೆಲವು ನಿಗದಿತ ಸ್ಥಳದಲ್ಲಿ ನಿಲ್ಲುತ್ತವೆ. ಪಾಲಕರು ಮಕ್ಕಳನ್ನು ಅಲ್ಲಿಯವರೆಗೆ ಕರೆದುಕೊಂಡು ಹೋಗಿ ವಾಹನಕ್ಕೆ ಹತ್ತಿಸಿ ಬರಬೇಕಾಗುತ್ತದೆ. ಶಾಲಾ ವಾಹನ ಬರುವ ಸಮಯಕ್ಕೆ ಮಕ್ಕಳು ಸಿದ್ಧವಾಗಿ ಇರದಿದ್ದರೆ ತಮ್ಮ ವಾಹನದಲ್ಲಿಯೇ ಕರೆದುಕೊಂಡು ಹೋಗಿ ಶಾಲೆಗೆ ಬಿಟ್ಟು ಬರುವುದು ಅನಿವಾರ್ಯವಾಗುತ್ತದೆ.

ವಿಜಯಪುರದ ವಕೀಲೆ ವಿದ್ಯಾ ಅಂಕಲಗಿ ಅವರು ‘ನಾ ಕಂಡ ಅಮೆರಿಕ’ ಎಂಬ ತಮ್ಮ ಪ್ರವಾಸ ಕಥನವನ್ನು ಪ್ರಕಟಿಸಿದ್ದಾರೆ. ಆ ದೇಶದಲ್ಲಿ ಮಕ್ಕಳನ್ನು ವಾಸದ ಮನೆಗೆ ಸಮೀಪದಲ್ಲಿರುವ ಶಾಲೆಗೇ ಸೇರಿಸಬೇಕು ಎಂಬ ಕಾನೂನು ಇದೆ. ದೂರದ ಶಾಲೆಗೆ ಸೇರಿಸುವುದಾದರೆ ಕಾರಣ ವಿವರಿಸಿ ಒಪ್ಪಿಗೆ ಪಡೆಯಬೇಕು. ಶಾಲಾ ಬಸ್ಸಿನಲ್ಲಿ ದೂರದ ಶಾಲೆಗೆ ಹೋಗುವ ಮಕ್ಕಳ ಸುರಕ್ಷಿತ ಪ್ರಯಾಣ ಮತ್ತು ಸೂಕ್ತ ರಕ್ಷಣೆ ವ್ಯವಸ್ಥೆಗಾಗಿ ಸರ್ಕಾರಕ್ಕೆ ಶುಲ್ಕ ಕಟ್ಟಬೇಕಾಗುತ್ತದೆ. ಇಂಥ ಕಾನೂನು ಅನೇಕ ದೇಶಗಳಲ್ಲಿ ಇದೆ ಎಂಬ ಸಂಗತಿಯನ್ನು ಅವರು ಹೇಳಿದ್ದಾರೆ.

ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕುವಂತೆ ಮಾಡುವುದು ಪಾಲಕರ ಕರ್ತವ್ಯ. ಆದರೆ ಅದು ವಿಪರೀತ ಹೊರೆ ಆಗಬಾರದು. ಸರಳ ಹಾದಿಯಲ್ಲಿ ಅದು ಯಶಸ್ವಿಯಾಗಿ ನಡೆಯುವಂತೆ ಸೂಕ್ತ ಸಿದ್ಧತೆ ಮಾಡಿಕೊಳ್ಳಬೇಕು.

ವಾಚಕರ ವಾಣಿ

ಮಕ್ಕಳ ಆಸಕ್ತಿ ಅರಿತು ಸ್ಪಂದಿಸಬೇಕು

ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯಲ್ಲಿ ತಂದೆಯೊಬ್ಬರು ತನ್ನ ಇಬ್ಬರು ಮಕ್ಕಳನ್ನು ಕಲಿಕೆಯಲ್ಲಿ ಹಿಂದುಳಿದಿದ್ದಾರೆ ಎಂಬ ಕಾರಣಕ್ಕಾಗಿ ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ (ಪ್ರ.ವಾ., ಮಾರ್ಚ್ 16) ಓದಿ ಆಘಾತವಾಯಿತು. ಮಕ್ಕಳು ಓದಬೇಕು ನಿಜ. ಆದರೆ ಓದದೇ ಇರುವ ಮಕ್ಕಳಿಗೆ ಬದುಕೇ ಇಲ್ಲವೇ?! ಥಾಮಸ್ ಅಲ್ವ ಎಡಿಸನ್, ಐನ್‌ಸ್ಟೀನ್‌ರಂಥ ವಿಜ್ಞಾನಿಗಳು ಬಾಲ್ಯದಲ್ಲಿ ದಡ್ಡ ವಿದ್ಯಾರ್ಥಿಗಳು ಎನಿಸಿಕೊಂಡಿದ್ದರು. ಆನಂತರ ಲೋಕವೇ ಬೆರಗಾಗುವಂತಹ ಸಾಧನೆ ಮಾಡಿದರು.

ಶಾಲೆಯಲ್ಲಿ ಓದುವುದರಲ್ಲಿ ಹಿನ್ನಡೆ ಸಾಧಿಸಿದ ಹಲವರು ಆನಂತರ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿರುವ ಉದಾಹರಣೆಗಳು ಬಹಳಷ್ಟು ಇವೆ. ಹಾಗಾಗಿ ನಮ್ಮ ಭಾವನೆಗಳನ್ನು ಮಕ್ಕಳ ಮೇಲೆ ಹೇರುವುದು ತರವಲ್ಲ. ಮಕ್ಕಳ ಆಸಕ್ತಿಯ ಕ್ಷೇತ್ರವನ್ನು ಗುರುತಿಸಿ, ಅದರಲ್ಲಿ ಮುಂದುವರಿಯಲು ಬೆಂಬಲವಾಗಿ ನಿಲ್ಲಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಸರಳ ಮದುವೆ: ಬೇಕಿದೆ ಪೂರಕ ವಾತಾವರಣ

ಮದುವೆ ಸಮಾರಂಭವನ್ನು ಹೆಚ್ಚು ಆಡಂಬರದಿಂದ ಆಯೋಜಿಸುವ ಪರಿಪಾಟ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿದೆ. ವಿವಾಹ ಕಾರ್ಯಕ್ರಮವು ಅಂತಸ್ತು, ಶ್ರೀಮಂತಿಕೆಯ ಪ್ರದರ್ಶನಕ್ಕೆ ವೇದಿಕೆ ಎಂಬಂತಾಗಿದೆ. ಈ ಬಗೆಯ ಸಮಾರಂಭಗಳು ಸಮಾಜದ ಮೇಲೆ ಬೇರೆ ಬೇರೆ ನೆಲೆಯಲ್ಲಿ ಪ್ರಭಾವ ಬೀರುತ್ತಿವೆ, ಕಡಿಮೆ ಆದಾಯದ ಕುಟುಂಬಗಳ ಮೇಲೆ ಒತ್ತಡವನ್ನೂ ಸೃಷ್ಟಿಸುತ್ತಿವೆ. ಸರಳ ವಿವಾಹಗಳನ್ನು ಮುನ್ನೆಲೆಗೆ ತರುವ ಕೆಲಸ ಬಿರುಸು ಪಡೆಯಬೇಕು. ಯುವಕ–ಯುವತಿಯರು ಈ ದಿಸೆಯಲ್ಲಿ ಚಿಂತಿಸಬೇಕು. ಅದಕ್ಕೆ ಬೇಕಾದ ವಾತಾವರಣ ಸೃಷ್ಟಿಗೆ ಎಲ್ಲರೂ ಕೈಜೋಡಿಸಬೇಕು. ಮದುವೆಗಾಗಿ ಮಾಡಲಾಗುವ ದುಂದುವೆಚ್ಚವನ್ನು ಯುವದಂಪತಿಗಳು ಬದುಕಿಗೆ ಆರ್ಥಿಕ ಭದ್ರತೆ ಒದಗಿಸುವಂತಹ ಕೆಲಸಗಳಿಗೆ ಬಳಸಿಕೊಳ್ಳಬಹುದಲ್ಲವೇ?

ಸುರೇಂದ್ರ ಪೈ, ಭಟ್ಕಳ

ದುರ್ಬಲ ವರ್ಗಗಳ ಉಸಿರುಗಟ್ಟಿಸುವಂತಹ ಸ್ಥಿತಿ

ಜಾತಿಯ ಸಂಕೋಲೆಗಳನ್ನು ಮುರಿಯಲು ಬೆಂಬಲವಾಗಿ ನಿಲ್ಲಬೇಕಾಗಿದ್ದ ಜನಪ್ರತಿನಿಧಿಗಳೇ ಜಾತಿ ಸಭೆಗಳನ್ನು ನಡೆಸುವುದು, ತಮ್ಮ ಜಾತಿ, ಉಪಜಾತಿಗೆ ವಿಶೇಷ ಸೌಲಭ್ಯ ಮತ್ತು ರಾಜಕೀಯ ಅಧಿಕಾರಕ್ಕಾಗಿ ಒತ್ತಡ ಹೇರುವಂತಹ ಕೆಲಸಗಳಲ್ಲಿ ತೊಡಗುವುದು ಸರಿಯೇ? ಹಾಗಾದರೆ, ಇವರು ಜಾತಿಯವರ ಮತಗಳಿಂದ ಮಾತ್ರವೇ ಆರಿಸಿಬಂದಿದ್ದಾರೆಯೇ? ಎಲ್ಲ ಜಾತಿ–ವರ್ಗದವರ ಏಳಿಗೆಗಾಗಿ ಶ್ರಮಿಸಬೇಕಾದ ರಾಜಕಾರಣಿಗಳು ತಮ್ಮ ಜಾತಿಯವರ ಯೋಗಕ್ಷೇಮ ಮಾತ್ರ ನೋಡಿಕೊಂಡರೆ ಸಾಕೇ? ಜನರ ಉದ್ಧಾರದ ಮಾತು ಭಾಷಣಕ್ಕೆ ಸೀಮಿತವಾಗಿದೆ. ದುರ್ಬಲ ವರ್ಗಗಳು ನಿಂತಲ್ಲೇ ನಿಂತಿವೆ. ಇಲ್ಲಿನ ಜಾತಿ ವ್ಯವಸ್ಥೆಯು ಸಾಮಾಜಿಕವಾಗಿ ದುರ್ಬಲವಾದ ವರ್ಗಗಳ ಉಸಿರುಗಟ್ಟಿಸುವಂತಿದೆ.

ಟಿ. ಶಿವಮೂರ್ತಿ ಉಪ್ಪಾರ, ಕೆಸ್ತೂರು, ಯಳಂದೂರು

ಹೂಳು ತೆಗೆಯುವತ್ತ ಗಮನಹರಿಸಿ

ತುಂಗಭದ್ರಾ ಜಲಾಶಯಕ್ಕೆ ಸಮಾನಾಂತರವಾಗಿ 15,601 ಕೋಟಿ ಅಂದಾಜು ವೆಚ್ಚದಲ್ಲಿ ಮತ್ತೊಂದು ಅಣೆಕಟ್ಟು ನಿರ್ಮಿಸಲು ಸಿದ್ಧತೆ ನಡೆದಿದೆ. ನೆರೆ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಈ ಸಂಬಂಧ ಚರ್ಚಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ (ಪ್ರ.ವಾ., ಮಾರ್ಚ್ 14). ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವುದರಿಂದ ಅದರ ಸಂಗ್ರಹ ಸಾಮರ್ಥ್ಯ ಕಡಿಮೆಯಾಗಿದೆ. ಆದಕಾರಣ ಹೊಸ ಅಣೆಕಟ್ಟು ನಿರ್ಮಿಸಲು ಯೋಜನೆ ರೂಪಿಸಲಾಗಿದೆ ಎಂದಿದ್ದಾರೆ.

ಹೂಳು ತುಂಬಿದ್ದರೆ ಹೂಳು ತೆಗೆಸಿ ನೀರು ಸಂಗ್ರಹ ಸಾಮರ್ಥ್ಯ ಹೆಚ್ಚಿಸಬೇಕೆ ವಿನಾ ಹೊಸ ಅಣೆಕಟ್ಟು ನಿರ್ಮಿಸಲು ಮುಂದಾಗುವುದು ಎಷ್ಟು ಸರಿ? ಜಲಾಶಯಗಳಲ್ಲಿ ಶೇಖರಣೆಯಾಗಿರುವ ಹೂಳು ತೆಗೆಯುವ ಪ್ರಸ್ತಾವ ಹಲವಾರು ವರ್ಷಗಳಿಂದ ಕೇಳಿಬರುತ್ತಿದೆ. ಆದರೆ, ಆಡಳಿತದ ಚುಕ್ಕಾಣಿ ಹಿಡಿದ ಯಾವ ಪಕ್ಷವೂ ಈ ಬಗ್ಗೆ ಗಂಭೀರ ಪ್ರಯತ್ನ ಮಾಡಿಲ್ಲ. ಹೂಳು ತೆಗೆಯುವ ಕೆಲಸದ ಕಡೆ ಈಗಲಾದರೂ ಸರ್ಕಾರ ಗಮನ ಹರಿಸಲಿ.

ಅಭಿಲಾಷ್ ಪಟೇಲ್ ಎಂ.ಎಸ್., ಮಾವಿನಹೊಳೆ, ಚನ್ನಗಿರಿ

ಕೋಳಿ ಸಮಾಚಾರ!

ಒಂದು ಕಡೆ ಕೋಳಿಗಳ ಸಾವು;
ಮತ್ತೊಂದು ಕಡೆ ಕೋಳಿಗಳ ವಧೆ;
ಇನ್ನೊಂದು ಕಡೆ ರಾಜಕಾರಣಿಗಳ
‘ಕೋಳಿ ಜಗಳ’!
(ಕಡೆಯದು ಸದಾ ಇದ್ದದ್ದೆ)

ಸಿ.ಪಿ.ಕೆ., ಮೈಸೂರು

ಕಾರ್ಯಕರ್ತರ ನೇಮಕ: ಈ ಕ್ರಮ ಸರಿಯಲ್ಲ

ಆರ್.ಎಸ್.ಎಸ್. ನಿಷ್ಠರನ್ನು ಸಚಿವರ ಆಪ್ತ ಸಹಾಯಕರನ್ನಾಗಿ ಮತ್ತು ಕೇಂದ್ರ ಸರ್ಕಾರದ ಭಾರತೀಯ ನಾಗರಿಕ ಸೇವೆಗಳ ಹುದ್ದೆಗಳಿಗೆ ನೇರ ಪ್ರವೇಶದ ಮೂಲಕ ನೇಮಕಾತಿ ಮಾಡಿಕೊಂಡು ಸರ್ಕಾರದಿಂದ ವೇತನ ಕೊಡುತ್ತಿರುವ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿಗಳನ್ನು ರಚಿಸಿ, ಅದರಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ತುಂಬಿಕೊಂಡು ಅವರಿಗೆ ಸರ್ಕಾರದಿಂದ ಸಂಬಳ ಕೊಡುತ್ತಿರುವ ಬಗ್ಗೆ ಕ್ರಮವಾಗಿ ಪ್ರಿಯಾಂಕ್ ಖರ್ಗೆ ಮತ್ತು ಆರ್.ಅಶೋಕ ಬರೆದಿರುವ ಲೇಖನಗಳನ್ನು ಓದಿದೆ (ಚರ್ಚೆ, ಪ್ರ.ವಾ., ಮಾರ್ಚ್ 15). ಬಿಜೆಪಿ ಆಡಳಿತದಲ್ಲಿರುವ ಕೇಂದ್ರ ಮತ್ತು ರಾಜ್ಯಗಳಲ್ಲಿ ಜನರ ತೆರಿಗೆ ಹಣದಲ್ಲಿ ಆರ್.ಎಸ್.ಎಸ್. ಕಾರ್ಯಕರ್ತರನ್ನು ನೇಮಿಸಿಕೊಳ್ಳುವ ಕ್ರಮವೂ ತಪ್ಪು. ಹಾಗೆಯೇ, ಕಾಂಗ್ರೆಸ್ ಆಡಳಿತ ಇರುವ ರಾಜ್ಯಗಳಲ್ಲಿ ಅವರ ಕಾರ್ಯಕರ್ತರನ್ನು ಬೇರೆ ಬೇರೆ ಸಮಿತಿಗಳಲ್ಲಿ ನೇಮಿಸಿಕೊಳ್ಳುವುದೂ ತಪ್ಪು.

ಯೋಜನೆಗಳ ಅನುಷ್ಠಾನಕ್ಕೆ ಕಾರ್ಯಾಂಗ ವ್ಯವಸ್ಥೆ ಇದೆ. ಜಿಲ್ಲಾಧಿಕಾರಿಗಳಿಗೆ ಅದರ ಹೊಣೆ ಹೊರುವ ಶಕ್ತಿಯೂ ಇದೆ. ರಾಜಕೀಯ ಕಾರ್ಯಕರ್ತರನ್ನು ಖುಷಿಪಡಿಸಲು, ಇಲ್ಲವೇ ಮುಂದಿನ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಈ ರೀತಿ ಬೊಕ್ಕಸವನ್ನು ದುರ್ಬಳಕೆ ಮಾಡಿಕೊಳ್ಳುವುದು ಪ್ರಜಾಪ್ರಭುತ್ವದ ವಿರೋಧಿ ನಡೆಯಾಗುತ್ತದೆ. ಅಷ್ಟೇ ಅಲ್ಲ, ಮೀಸಲಾತಿಯ ವಂಚನೆ ಹಾಗೂ ಪ್ರತಿಭಾವಂತರನ್ನು ಉದ್ಯೋಗದಿಂದ ದೂರ ಇಡುವ ವ್ಯವಸ್ಥಿತವಾದ ಕೆಟ್ಟ ಯೋಜನೆ ಆಗುತ್ತದೆ. ಸರ್ಕಾರಗಳ ಇಂತಹ ದುರ್ನಡತೆಗಳನ್ನು ಪ್ರಜಾಪ್ರಭುತ್ವ ಒಪ್ಪುವುದಿಲ್ಲ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಭಾರತಕ್ಕೆ ಸ್ಟಾರ್‌ಲಿಂಕ್ ಭದ್ರತೆಗೆ ಬೆದರಿಕೆಯೇ?

ಅಮೆರಿಕದ ಉದ್ಯಮಿ ಎಲಾನ್ ಮಸ್ಕ್ ಮಾಲೀಕತ್ವದ ಸ್ಪೇಸ್‌ಎಕ್ಸ್ ಕಂಪನಿಯ ಸ್ಟಾರ್‌ಲಿಂಕ್ ಇಂಟರ್‌ನೆಟ್ ಸೇವೆ ಭಾರತಕ್ಕೂ ಶೀಘ್ರದಲ್ಲಿ ಬರಲಿದೆ. ಹಿಂದೆ ಭಾರತ ಪ್ರವೇಶಿಸಲು ಮಸ್ಕ್ ಮಾಡಿದ್ದ ಯತ್ನ ಸಫಲವಾಗಿರಲಿಲ್ಲ. ಅಮೆರಿಕಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಮಸ್ಕ್ ಅವರನ್ನು ಭೇಟಿ ಮಾಡಿದ ಬಳಿಕ ಸ್ಟಾರ್‌ಲಿಂಕ್ ಭಾರತ ಪ್ರವೇಶದ ಸುದ್ದಿ ಹೊರಬಿದ್ದಿದೆ. ಸ್ಟಾರ್‌ಲಿಂಕ್ ಉಪಗ್ರಹಗಳು, ಸ್ಟಾರ್‌ಲಿಂಕ್ ಮೇಲೆ ಕೇಂದ್ರ ಸರ್ಕಾರ ಹೆಚ್ಚು ನಿಯಂತ್ರಣ ಹೊಂದಿದಂತೆ ಕಾಣುತ್ತಿಲ್ಲ. ಇದು ದೇಶದ ಭದ್ರತೆಗೆ ಅಪಾಯಕಾರಿಯಾಗಬಹುದು ಎಂಬ ಆತಂಕವೂ ವ್ಯಕ್ತವಾಗಿದೆ

ಪ್ರಜಾವಾಣಿ ವಾರ್ತೆ

ಜಗತ್ತಿನಲ್ಲಿಯೇ ಅತಿ ಹೆಚ್ಚು ಜನಸಂಖ್ಯೆ ಇರುವ ಭಾರತವು ಎರಡನೇ ಅತಿ ದೊಡ್ಡ ಇಂಟರ್‌ನೆಟ್ ಮಾರುಕಟ್ಟೆಯೂ ಆಗಿದೆ. ದೇಶದ ಸುಮಾರು 67 ಕೋಟಿ ಮಂದಿ ಇಂಟರ್‌ನೆಟ್ ಸೇವೆ ಪಡೆದಿಲ್ಲ ಎಂದು 2024ರ ವರದಿಯೊಂದು ಹೇಳಿದೆ. ಈ ದಿಸೆಯಲ್ಲಿ ಹೆಚ್ಚು ಗ್ರಾಹಕರನ್ನು ಸೆಳೆಯಲು ಮತ್ತು ಉತ್ತಮ ಇಂಟರ್‌ನೆಟ್ ಸೇವೆ ಕಲ್ಪಿಸಲು ಏರ್‌ಟೆಲ್, ಜಿಯೋದಂಥ ದೇಶೀಯ ಕಂಪನಿಗಳ ನಡುವೆ ಪೈಪೋಟಿ ಇದೆ. ಇವರ ಜತೆಗೆ ಈಗ ಜಾಗತಿಕ ದೈತ್ಯ ಕಂಪನಿಯೊಂದು, ಭಾರತದ ದೂರಸಂಪರ್ಕ ರಂಗಕ್ಕೆ ಅಡಿಯಿಡಲು ಸಜ್ಜಾಗಿದೆ. ಅದು ಅಮೆರಿಕದ ಉದ್ಯಮಿ ಎಲಾನ್ ಮಸ್ಕ್ ಒಡೆತನದ ಸ್ಪೇಸ್‌ಎಕ್ಸ್. ತನ್ನ ಸ್ಟಾರ್‌ಲಿಂಕ್ ಸರ್ವಿಸಸ್ ಕಂಪನಿಯ ಮೂಲಕ ಟವರ್, ಕೇಬಲ್ ರಹಿತವಾಗಿ ಉಪಗ್ರಹದ ಮೂಲಕ ನೇರ ಇಂಟರ್‌ನೆಟ್ ಸೇವೆ ಒದಗಿಸಲು ಮುಂದಾಗಿದೆ.

5ಜಿ ಇಂಟರ್‌ನೆಟ್‌ಗಿಂತ ಇದು ಉತ್ತಮ ಎನ್ನಲಾಗದಿದ್ದರೂ ಟವರ್ ಅಥವಾ ಕೇಬಲ್ ಅಳವಡಿಸಲು ಸಾಧ್ಯವಿಲ್ಲದ ಪ್ರದೇಶಗಳಲ್ಲಿ, ಕುಗ್ರಾಮಗಳಲ್ಲಿ, ಮರುಭೂಮಿಗಳಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ ಸ್ಟಾರ್‌ಲಿಂಕ್ ಮೂಲಕ ಇಂಟರ್‌ನೆಟ್ ಸೇವೆ ಲಭ್ಯವಾಗುವಂತೆ ಮಾಡಬಹುದು.


ಸ್ಟಾರ್‌ಲಿಂಕ್ ಈಗ ಭಾರತಕ್ಕೆ ಅಡಿಯಿಡುತ್ತಿದೆಯಾದರೂ ಮಸ್ಕ್ ಇದನ್ನು ಆರಂಭಿಸಿ ದಶಕವೇ ಕಳೆದಿದೆ. 2015ರ ಜನವರಿಯಲ್ಲಿ ವಾಷಿಂಗ್ಟನ್‌ನಲ್ಲಿ ಸ್ಟಾರ್‌ಲಿಂಕ್ ಘೋಷಣೆಯಾಯಿತು. ಫೆಡರಲ್ ಕಮ್ಯುನಿಕೇಷನ್ ಕಮಿಷನ್‌ನಿಂದ (ಎಫ್‌ಸಿಸಿ) ಮತ್ತು ಇತರ ಇಲಾಖೆಗಳ ಅನುಮತಿ ಪಡೆದ ನಂತರ ಕಂಪನಿಯು 2018ರಲ್ಲಿ ಮೊದಲ ಬಾರಿಗೆ ಎರಡು ಉಪಗ್ರಹಗಳನ್ನು, 2019ರ ಮೇನಲ್ಲಿ 60 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿತು. ಈಗ ಸ್ಟಾರ್‌ಲಿಂಕ್‌ನ 7,086 ಉಪಗ್ರಹಗಳು ಭೂಮಿಗೆ ಹತ್ತಿರದ ಕಕ್ಷೆಯಲ್ಲಿ ಕಾರ್ಯಾಚರಣೆ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಇದನ್ನು 42 ಸಾವಿರಕ್ಕೆ ಹೆಚ್ಚಿಸುವುದು ಕಂಪನಿಯ ಗುರಿ.

ಸದ್ಯ ಸ್ಟಾರ್‌ಲಿಂಕ್ ಉತ್ತರ ಅಮೆರಿಕ, ಯುರೋಪ್, ಆಸ್ಟ್ರೇಲಿಯಾ, ಇಂಡೊನೇಷ್ಯಾ, ಶ್ರೀಲಂಕಾ, ಭೂತಾನ್ ಸೇರಿದಂತೆ ಜಗತ್ತಿನ 125ಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯಾಚರಿಸುತ್ತಿದೆ. ಸ್ಟಾರ್‌ಲಿಂಕ್ ಸದ್ಯ 50 ಲಕ್ಷಕ್ಕೂ ಹೆಚ್ಚು ಚಂದಾದಾರರನ್ನು ಹೊಂದಿದೆ ಎಂದು ಕಂಪನಿ ಪ್ರತಿಪಾದಿಸಿದೆ. ಸ್ಟಾರ್‌ಲಿಂಕ್ ಭಾರತ ಪ್ರವೇಶಿಸಲು 2021ರಲ್ಲೇ ತೀವ್ರ ಪ್ರಯತ್ನ ನಡೆಸಿತ್ತು. ಆದರೆ, ರಾಷ್ಟ್ರೀಯ ಭದ್ರತೆಯ ಕಾರಣದಿಂದ ಪರವಾನಗಿ ನಿರಾಕರಿಸಲಾಗಿತ್ತು.

ಮೋದಿ ಭೇಟಿ ನಂತರ ಸಮ್ಮತಿ: ಕಳೆದ ತಿಂಗಳು ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಪ್ರವಾಸದಲ್ಲಿ ಎಲಾನ್ ಮಸ್ಕ್ ಅವರನ್ನು ಭೇಟಿ ಮಾಡಿದ್ದರು. ಈ ವೇಳೆ ಅವರು ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಇತರ ವಿಚಾರಗಳ ಬಗ್ಗೆ ಚರ್ಚೆ ನಡೆಸಿದ್ದರು ಎನ್ನಲಾಗಿತ್ತು. ಆ ಭೇಟಿ ನಂತರ ಸ್ಟಾರ್‌ಲಿಂಕ್‌ಗೆ ಭಾರತದಲ್ಲಿ ಕಾರ್ಯಾಚರಿಸಲು ಸಮ್ಮತಿ ನೀಡಲಾಗಿದೆ. ಸ್ಟಾರ್‌ಲಿಂಕ್ 20 ವರ್ಷಕ್ಕೆ ಪರವಾನಗಿ ಬಯಸಿದ್ದು, ಮೊದಲು ಐದು ವರ್ಷಕ್ಕೆ ಮಾತ್ರ ನೀಡಬೇಕು ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಶಿಫಾರಸು ಮಾಡಲು ನಿರ್ಧರಿಸಿದೆ ಎನ್ನಲಾಗಿದೆ.


ಇನ್ನೊಂದು ಮುಖ್ಯ ಬೆಳವಣಿಗೆ ಎಂದರೆ, ದೇಶೀಯ ಮಟ್ಟದಲ್ಲಿ ಭಾರ್ತಿ ಏರ್‌ಟೆಲ್ ಮತ್ತು ರಿಲಯನ್ಸ್ ಎರಡೂ ಪ್ರತಿಸ್ಪರ್ಧಿಗಳಾಗಿದ್ದು, ಎರಡೂ ಕಂಪನಿಗಳು ದೇಶದಲ್ಲಿ ಉಪಗ್ರಹ ಆಧರಿತ ಇಂಟರ್‌ನೆಟ್ ಸೇವೆ ಒದಗಿಸುವ ಸಂಬಂಧ ಸ್ಟಾರ್‌ಲಿಂಕ್ ಜತೆಗೆ ಒಪ್ಪಂದ ಮಾಡಿಕೊಂಡಿವೆ. ಈ ಹಿಂದೆ ರಿಲಯನ್ಸ್‌ನ ಮುಕೇಶ್ ಅಂಬಾನಿ ಮತ್ತು ಎಲಾನ್ ಮಸ್ಕ್ ನಡುವೆ ಉಪಗ್ರಹ ತರಂಗಾಂತರ ಹಂಚಿಕೆ ಕುರಿತು ತಿಕ್ಕಾಟ ನಡೆದಿತ್ತು. ಇದೀಗ ಎರಡೂ ಕಂಪನಿಗಳು ಸ್ಪೇಸ್‌ಎಕ್ಸ್‌ನೊಂದಿಗೆ ಒಪ್ಪಂದ ಮಾಡಿಕೊಂಡಿವೆ. ಈ ಒಪ್ಪಂದದಿಂದ ಏರ್‌ಟೆಲ್ ಮತ್ತು ಜಿಯೋ ಕಂಪನಿಗಳಿಗೆ ಲಾಭವಾಗಿದೆ. ಅದಕ್ಕಿಂತಲೂ ಹೆಚ್ಚಿನ ಅನುಕೂಲ ಮಸ್ಕ್‌ಗೆ ಆಗಲಿದೆ. ಭಾರತದ ಶೇ 70ರಷ್ಟು ಮೊಬೈಲ್ ಬಳಕೆದಾರರ ಸಂಪರ್ಕ ಅವರಿಗೆ ಈ ಮೂಲಕ ಸಿಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆದರೆ, ಸ್ಟಾರ್‌ಲಿಂಕ್ ಇಂಟರ್‌ನೆಟ್ ಸೇವೆ ದುಬಾರಿಯಾಗಿದ್ದು, ಎಷ್ಟರಮಟ್ಟಿಗೆ ಇದು ಭಾರತದಲ್ಲಿ ಯಶಸ್ವಿಯಾಗಲಿದೆ ಎನ್ನುವ ಬಗ್ಗೆಯೂ ಚರ್ಚೆಯೂ ನಡೆಯುತ್ತಿದೆ.



ಎಲಾನ್ ಮಸ್ಕ್

ಸ್ಟಾರ್‌ಲಿಂಕ್ ಏನು, ಎತ್ತ...



7,086 ಭೂಮಿಯ ಕೆಳ ಕಕ್ಷೆಯಲ್ಲಿರುವ (ಎಲ್‌ಇಒ) ಸ್ಟಾರ್‌ಲಿಂಕ್ ಉಪಗ್ರಹಗಳು

7,052 ಕಾರ್ಯನಿರ್ವಹಿಸುತ್ತಿರುವ ಉಪಗ್ರಹಗಳ ಸಂಖ್ಯೆ

550 ಕಿ.ಮೀ ಸ್ಟಾರ್‌ಲಿಂಕ್ ಉಪಗ್ರಹಗಳು ಭೂಮಿಯಿಂದ ಇರುವ ದೂರ



50 ಲಕ್ಷ ಜಗತ್ತಿನೆಲ್ಲೆಡೆ ಸ್ಟಾರ್‌ಲಿಂಕ್ ಇಂಟರ್‌ನೆಟ್ ಸಂಪರ್ಕ ಪಡೆದವರು

25ರಿಂದ **220** ಎಂಬಿಪಿಎಸ್ ಸ್ಟಾರ್‌ಲಿಂಕ್ ಇಂಟರ್‌ನೆಟ್ ಸಂಪರ್ಕದ ಡೌನ್‌ಲೋಡ್ ವೇಗ

5ರಿಂದ **20** ಎಂಬಿಪಿಎಸ್ ಸ್ಟಾರ್‌ಲಿಂಕ್ ಇಂಟರ್‌ನೆಟ್ ಅಪ್‌ಲೋಡ್ ವೇಗ

125ಕ್ಕೂ ಹೆಚ್ಚು ಸ್ಟಾರ್‌ಲಿಂಕ್ ಇಂಟರ್‌ನೆಟ್ ಸೇವೆ ಲಭ್ಯವಿರುವ ರಾಷ್ಟ್ರಗಳು

₹10,434 (120 ಡಾಲರ್) ಅಮೆರಿಕದಲ್ಲಿ ಗೃಹಬಳಕೆ ಉದ್ದೇಶದ ಸ್ಟಾರ್‌ಲಿಂಕ್ ಇಂಟರ್‌ನೆಟ್‌ನ ಮಾಸಿಕ ಶುಲ್ಕ

₹30,345 (349 ಡಾಲರ್) ಅಮೆರಿಕದಲ್ಲಿ ಸ್ಟಾರ್‌ಲಿಂಕ್ ಇಂಟರ್‌ನೆಟ್ ಸಂಪರ್ಕ ಕಿಟ್ ಬೆಲೆ

₹4,000ದಿಂದ **₹5,000** ಭಾರತದಲ್ಲಿ ಸ್ಟಾರ್‌ಲಿಂಕ್ ಇಂಟರ್‌ನೆಟ್ ಸೇವೆಯ ತಿಂಗಳ ಶುಲ್ಕದ ಅಂದಾಜು

₹30,000 ಭಾರತದಲ್ಲಿ ಸ್ಟಾರ್‌ಲಿಂಕ್ ಇಂಟರ್‌ನೆಟ್ ಕಿಟ್‌ಗೆ ಇರಬಹುದಾದ ಅಂದಾಜು ಬೆಲೆ

ಕಾರ್ಯನಿರ್ವಹಣೆ ಹೇಗೆ?

ಸರಳವಾಗಿ ಹೇಳಬೇಕೆಂದರೆ ಡೈರೆಕ್ಟ್ ಟು ಹೋಮ್ (ಡಿಟಿಎಚ್) ಮಾದರಿಯಲ್ಲಿ ಸ್ಟಾರ್‌ಲಿಂಕ್ ಇಂಟರ್‌ನೆಟ್ ಕೆಲಸ ಮಾಡುತ್ತದೆ. ಭೂಮಿಯ ಕೆಳ ಕಕ್ಷೆಯಲ್ಲಿ ಸುತ್ತುತ್ತಿರುವ ಸ್ಟಾರ್‌ಲಿಂಕ್ ಉಪಗ್ರಹಗಳ ಗುಚ್ಛಗಳ ಮೂಲಕ ನೇರವಾಗಿ ಬಳಕೆದಾರರ ಮನೆಗೆ ಇಂಟರ್‌ನೆಟ್ ಸಿಗುತ್ತದೆ. ಇದಕ್ಕಾಗಿ ಬಳಕೆದಾರರು ಸ್ಟಾರ್‌ಲಿಂಕ್‌ನ ಆ್ಯಂಟೆನಾ, ರೌಟರ್ ಹೊಂದಿರಬೇಕು. ಸ್ಟಾರ್‌ಲಿಂಕ್ ಇಂಟರ್‌ನೆಟ್ ಸಂಪರ್ಕ ಪಡೆಯುವಾಗ ಕಂಪನಿಯು ಇದೆಲ್ಲವನ್ನೂ ಒಳಗೊಂಡ ಕಿಟ್ ಅನ್ನು ಒದಗಿಸುತ್ತದೆ. ಈ ಆ್ಯಂಟೆನಾ ಚಿಕ್ಕದಾಗಿದ್ದು, ಬೇಕಾದಲ್ಲಿಗೆ ಒಯ್ಯಬಹುದು. ಮನೆಗೆ ಇಂಟರ್‌ನೆಟ್ ಸಂಪರ್ಕ ಪಡೆದಿರುವವರು, ಈ ಆ್ಯಂಟೆನಾವನ್ನು ಆಕಾಶದೆಡೆಗೆ ಮುಖಮಾಡಿ ಮನೆಯ ಚಾವಣಿ ಅಥವಾ ಬೇರೆಕಡೆಗಳಲ್ಲಿ ಅಳವಡಿಸಬೇಕು. ಈ ಆ್ಯಂಟೆನಾ ಕೇಬಲ್ ಅನ್ನು ಮನೆಯಲ್ಲಿರುವ ವೈ-ಫೈ ರೌಟರ್‌ಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಇವು ಕಾರ್ಯಾಚರಿಸಲು ವಿದ್ಯುತ್ ಸಂಪರ್ಕವೂ ಇರಬೇಕು. ರೌಟರ್ ಮೂಲಕ ಮೊಬೈಲ್, ಕಂಪ್ಯೂಟರ್, ಟ್ಯಾಬ್ ಸೇರಿದಂತೆ ಇನ್ನಿತರ ಸಾಧನಗಳಿಗೆ ಇಂಟರ್‌ನೆಟ್ ಸಂಪರ್ಕ ಕಲ್ಪಿಸಬಹುದು.

ಪ್ರಯೋಜನ ಏನೇನು?

- 5ಜಿಯಷ್ಟು ಇಂಟರ್‌ನೆಟ್ ವೇಗ ಸ್ಟಾರ್‌ಲಿಂಕ್‌ನಲ್ಲಿ ಇಲ್ಲ. ಹಾಗಿದ್ದರೂ ಇದರ ವೇಗ ಕಡಿಮೆ ಏನಲ್ಲ
- ಸ್ಟಾರ್‌ಲಿಂಕ್ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆ ಆಗಿರುವುದರಿಂದ ಮೊಬೈಲ್ ಟವರ್‌ಗಳಿಲ್ಲದ ಕಡೆಗಳಲ್ಲಿ ಅಂದರೆ, ಮೂಲಸೌಕರ್ಯಗಳಿಲ್ಲದ ಕುಗ್ರಾಮಗಳಲ್ಲಿ ಕೂಡ ಇಂಟರ್‌ನೆಟ್ ಸೌಲಭ್ಯ ಹೊಂದಬಹುದು
- ಆ್ಯಂಟೆನಾ ಚಿಕ್ಕದಾಗಿರುವುದರಿಂದ ಸುಲಭವಾಗಿ ಒಂದೆಡೆಯಿಂದ ಇನ್ನೊಂದೆಡೆ ಹೊತ್ತೊಯ್ಯಬಹುದು
- ಭೂಕಂಪ, ಚಂಡಮಾರುತ ಸೇರಿದಂತೆ ನೈಸರ್ಗಿಕ ವಿಪತ್ತು ಸಂಭವಿಸಿದ ಸಂದರ್ಭಗಳಲ್ಲಿ ಕೂಡ ಬಳಸಬಹುದು. ಉಕ್ರೇನ್-ರಷ್ಯಾ ಯುದ್ಧ ಆರಂಭಗೊಂಡ ನಂತರ ರಷ್ಯಾವು ಉಕ್ರೇನ್‌ನಲ್ಲಿ ಇಂಟರ್‌ನೆಟ್ ಬಳಕೆಗೆ ತಡೆ ಒಡ್ಡಿತ್ತು. ಅದೇ ಸಂದರ್ಭದಲ್ಲಿ ಸ್ಟಾರ್‌ಲಿಂಕ್ ಸೇವೆ ಉಕ್ರೇನ್‌ನಲ್ಲಿ ಆರಂಭಗೊಂಡು, ತಡೆರಹಿತ ಇಂಟರ್‌ನೆಟ್ ಸೌಲಭ್ಯ ಉಕ್ರೇನ್‌ಗೆ ಸಿಗುವಂತಾಯಿತು
- ಸಮುದ್ರ, ದಟ್ಟ ಕಾನನ ಸೇರಿದಂತೆ ಸೌಕರ್ಯಗಳಿಲ್ಲದ ಪ್ರದೇಶಗಳಲ್ಲೂ ತುರ್ತು ಪರಿಸ್ಥಿತಿಯಲ್ಲಿ ಬಳಸಬಹುದು



ಸುಲಭವಾಗಿ ಹೊತ್ತೊಯ್ಯಬಹುದಾದ ಸ್ಟಾರ್‌ಲಿಂಕ್ ಆ್ಯಂಟೆನಾ ಚಿತ್ರ:ಸ್ಟಾರ್‌ಲಿಂಕ್ ವೆಬ್‌ಸೈಟ್

ಆಧಾರ: ಪಿಟಿಐ, ಬಿಬಿಸಿ, ಸ್ಟಾರ್‌ಲಿಂಕ್ ವೆಬ್‌ಸೈಟ್, ಸ್ಪೇಸ್.ಕಾಮ್

ದೇಶದ ಭದ್ರತೆ: ಕಳವಳ

ಸ್ಟಾರ್‌ಲಿಂಕ್‌ನ ಭಾರತ ಪ್ರವೇಶದ ಬಗ್ಗೆ ಕಳವಳವೂ ವ್ಯಕ್ತವಾಗಿದೆ.

ದೇಶದಲ್ಲಿ ಈ ಇಂಟರ್‌ನೆಟ್ ಸೇವೆ ಪಡೆದ ಬಳಕೆದಾರರ ಖಾಸಗಿತನ, ಮಾಹಿತಿ ಗೋಪ್ಯತೆ ರಕ್ಷಣೆಯ ವಿಷಯದಲ್ಲಿ ಸ್ಪಷ್ಟತೆ ಇಲ್ಲ. ಸದ್ಯ ಸ್ಟಾರ್‌ಲಿಂಕ್ ಅಮೆರಿಕದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಉಪಗ್ರಹಗಳನ್ನು ಮಸ್ಕ್ ಒಡೆತನದ ಕಂಪನಿಯೇ ನಿರ್ವಹಿಸುತ್ತದೆ. ಕಂಪನಿಯು ಸಂಗ್ರಹಿಸುವ ಬಳಕೆದಾರರ ಮಾಹಿತಿಯ ರಕ್ಷಣೆಗೆ ಅದು ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದು ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ವಾಣಿಜ್ಯ ಉದ್ದೇಶಕ್ಕೆ ಬಳಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಸ್ಟಾರ್‌ಲಿಂಕ್ ಸೇವೆಗಳ ಮೇಲೆ ಕೇಂದ್ರ ಸರ್ಕಾರ ಯಾವ ರೀತಿ ನಿಯಂತ್ರಣ ಹೊಂದಲಿದೆ ಎಂಬ ಬಗ್ಗೆಯೂ ಸ್ಪಷ್ಟವಾದ ಮಾಹಿತಿ ಇಲ್ಲ.

ವಿರೋಧ ಪಕ್ಷಗಳು ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಕೇಂದ್ರ ಸರ್ಕಾರವು ರಾಷ್ಟ್ರದ ಭದ್ರತೆಯೊಂದಿಗೆ ರಾಜಿ ಮಾಡಿಕೊಂಡು ಸ್ಟಾರ್‌ಲಿಂಕ್‌ಗೆ ಅವಕಾಶ ನೀಡಿದೆ ಎಂದು ಕಾಂಗ್ರೆಸ್, ಸಿಪಿಎಂ ಆರೋಪಿಸಿವೆ. ಸ್ಟಾರ್‌ಲಿಂಕ್ ಜತೆಗೆ ಜಿಯೋ ಮತ್ತು ಏರ್‌ಟೆಲ್ ಒಪ್ಪಂದ ಮಾಡಿಕೊಳ್ಳಲು ಪ್ರಧಾನಿ ಮೋದಿ ಅವರೇ ಕಾರಣ ಎಂದು ಆರೋಪಿಸಿರುವ ಕಾಂಗ್ರೆಸ್ ಮುಖಂಡ ಜೈರಾಂ ರಮೇಶ್, ಇದು ಎಲಾನ್ ಮಸ್ಕ್ ಮೂಲಕ ಡೊನಾಲ್ಡ್ ಟ್ರಂಪ್ ಅವರ ವಿಶ್ವಾಸ ಗಳಿಸಲು ಮೋದಿ ಅವರು ನಡೆಸಿದ ಪ್ರಯತ್ನ ಎಂದಿದ್ದಾರೆ.

‘ರಾಷ್ಟ್ರೀಯ ಭದ್ರತೆಗಾಗಿ ಇಂಟರ್‌ನೆಟ್ ಸಂಪರ್ಕ ಕಲ್ಪಿಸಬೇಕು ಅಥವಾ ಕಡಿತಗೊಳಿಸಬೇಕು ಎನ್ನುವ ಸಂದರ್ಭ ಬಂದರೆ, ಆ ಅಧಿಕಾರವು ಯಾರ ಕೈಯಲ್ಲಿರುತ್ತದೆ? ಸ್ಟಾರ್‌ಲಿಂಕ್ ಕೈಯಲ್ಲೋ ಅಥವಾ ಅದರ ಭಾರತೀಯ ಪಾಲುದಾರರ ಕೈಯಲ್ಲೋ’ ಎಂದು ಜೈರಾಂ ರಮೇಶ್ ಪ್ರಶ್ನಿಸಿದ್ದಾರೆ.

ಉಕ್ರೇನ್ ಸೇನೆಯ ಬೆನ್ನೆಲುಬಾಗಿರುವ ಸ್ಟಾರ್‌ಲಿಂಕ್ ಸಂಪರ್ಕವನ್ನು ಕಡಿತಗೊಳಿಸುವುದಾಗಿ ಎಲಾನ್ ಮಸ್ಕ್ ಇತ್ತೀಚೆಗೆ ಬೆದರಿಕೆ ಒಡ್ಡಿದ್ದರು. ಈ ದಿಸೆಯಲ್ಲಿ, ಭಾರತದಲ್ಲಿ ಸ್ಟಾರ್‌ಲಿಂಕ್ ಅನ್ನು ರಕ್ಷಣಾ ವಲಯವೂ ಸೇರಿದಂತೆ ಸರ್ಕಾರದ ಮಹತ್ವದ ವಲಯಗಳಲ್ಲಿ ಬಳಸಬೇಕೇ ಬೇಡವೇ ಎನ್ನುವ ಚರ್ಚೆಗಳು ಹುಟ್ಟಿಕೊಂಡಿವೆ.

ವಿಜ್ಞಾನಿಗಳ ಆಕ್ಷೇಪ

ಸ್ಟಾರ್‌ಲಿಂಕ್ ಇಂಟರ್‌ನೆಟ್ ಸೇವೆಗೆ ವಿವಿಧ ದೇಶಗಳ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳು ಆಕ್ಷೇಪ ವ್ಯಕ್ತಪಡಿಸುತ್ತಿವೆ. ಸ್ಪೇಸ್‌ಎಕ್ಸ್, ಸ್ಟಾರ್‌ಲಿಂಕ್ ಉಪಗ್ರಹಗಳ ಗುಚ್ಛಗಳನ್ನು ಭೂಮಿಯ ಕೆಳಕಕ್ಷೆಯಲ್ಲಿ ಇರಿಸಿರುವುದರಿಂದ ಇದು ಖಗೋಳವಿಜ್ಞಾನದ ಅಧ್ಯಯನಕ್ಕೆ ಅಡ್ಡಿ ಉಂಟುಪಡಿಸುತ್ತದೆ ಎಂಬುದು ಖಗೋಳ ವಿಜ್ಞಾನಿಗಳ ತಕರಾರು. ಭಾರಿ ಸಂಖ್ಯೆಯಲ್ಲಿ ಉಪಗ್ರಹಗಳು ಭೂ ಕಕ್ಷೆಯಲ್ಲಿ ಸುತ್ತುತ್ತಿರುವುದರಿಂದ ಬ್ರಹ್ಮಾಂಡದ ಮೇಲೆ ಕಣ್ಣಿಟ್ಟಿರುವ ವಿಜ್ಞಾನಿಗಳ ಅಧ್ಯಯನಕ್ಕೆ ಅಡಚಣೆಯಾಗುತ್ತಿದೆ. ಉಪಗ್ರಹಗಳು ಹೊರಸೂಸುವ ರೇಡಿಯೋ ತರಂಗಾಂತರಗಳು, ಅಂತರಿಕ್ಷದತ್ತ ನಿರಂತರವಾಗಿ ದೃಷ್ಟಿ ನೆಟ್ಟಿರುವ ರೇಡಿಯೋ ದೂರದರ್ಶಕಗಳ ವೀಕ್ಷಣೆಗೆ ತಡೆ ಒಡ್ಡುತ್ತಿವೆ. ಇದರಿಂದ ಮಹತ್ವದ ಮಾಹಿತಿಗಳನ್ನು ತಿಳಿಯುವುದಕ್ಕೆ ತೊಂದರೆಯಾಗುತ್ತದೆ ಎಂಬುದು ವಿಜ್ಞಾನಿಗಳ ಹೇಳಿಕೆ.

ಹೆಚ್ಚು ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸುವುದರಿಂದ ಇವು ವಿವಿಧ ರಾಷ್ಟ್ರಗಳ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳ ಗಗನನೌಕೆಗಳು, ಉಪಗ್ರಹಗಳಿಗೆ ಡಿಕ್ಕಿ ಹೊಡೆಯಬಹುದು ಎನ್ನುವುದು ವಿಜ್ಞಾನಿಗಳ ಮತ್ತೊಂದು ಆತಂಕ.

7,086 ಸ್ಟಾರ್‌ಲಿಂಕ್ ಉಪಗ್ರಹಗಳು ಈಗಾಗಲೇ ಭೂಮಿಯ ಕಕ್ಷೆಯಲ್ಲಿವೆ. ಈ ಸಂಖ್ಯೆಯನ್ನು 42 ಸಾವಿರಕ್ಕೆ ಹೆಚ್ಚಿಸಲು ಸ್ಪೇಸ್‌ಎಕ್ಸ್ ಯೋಜಿಸುತ್ತಿದೆ. ಅದರ ಪ್ರತಿಸ್ಪರ್ಧಿ ಕಂಪನಿ ಒನ್‌ವೆಬ್ ಸಾವಿರಕ್ಕೂ ಹೆಚ್ಚು ಉಪಗ್ರಹಗಳನ್ನು ಕಕ್ಷೆಗೆ ಬಿಟ್ಟಿದೆ. ಅಮೆರಿಕದ ಅಮೆಜಾನ್ ಕಂಪನಿಯೂ ತನ್ನದೇ ಆದ ಜಾಲವನ್ನು ಅಭಿವೃದ್ಧಿಪಡಿಸುತ್ತಿದ್ದು, ಮುಂದಿನ ವರ್ಷಗಳಲ್ಲಿ 3,000 ಉಪಗ್ರಹಗಳನ್ನು ಉಡಾವಣೆ ಮಾಡುವ ಯೋಜನೆ ಹಾಕಿಕೊಂಡಿದೆ. 2030ರ ವೇಳೆಗೆ ಭೂ ಕಕ್ಷೆಯಲ್ಲಿರುವ ಉಪಗ್ರಹಗಳ ಸಂಖ್ಯೆ 1 ಲಕ್ಷ ದಾಟುವ ಅಂದಾಜು ಇದೆ.

ಸಿನಿ ಬಿಟ್ಸ್



ತೆರೆ ಮೇಲೆ ಒಂದಾದ ಚಂದನ್- ನಿವೇದಿತಾ

ಸಂಗೀತ ನಿರ್ದೇಶಕ ಚಂದನ್ ಮತ್ತು ನಿವೇದಿತಾ ಗೌಡ ವಿಚ್ಛೇದನದ ಬಳಿಕ ತೆರೆಯ ಮೇಲೆ ಮತ್ತೆ ಒಂದಾಗಿದ್ದಾರೆ. ಪುನೀತ್ ಶ್ರೀನಿವಾಸ್ ನಿರ್ದೇಶನದ ‘ಮುದ್ದು ರಾಕ್ಷಸಿ’ ಚಿತ್ರೀಕರಣದಲ್ಲಿ ಇಬ್ಬರೂ ಒಟ್ಟಿಗೆ ಭಾಗಿಯಾಗಿದ್ದಾರೆ. ಇದರೊಂದಿಗೆ ಈ ಜೋಡಿಯ ಮದುವೆ ಬಳಿಕ ಪ್ರಾರಂಭಗೊಂಡಿದ್ದ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ.

ಸೈಕೋ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು.‘ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣವಷ್ಟೇ ಬಾಕಿ ಉಳಿದಿತ್ತು. ನಾಯಕ-ನಾಯಕಿ ಒಬ್ಬರನ್ನೊಬ್ಬರು ಅಪ್ಪಿಕೊಂಡು ಬೀಳ್ಕೊಡುವ ದೃಶ್ಯ ಚಿತ್ರೀಕರಿಸಲಾಯಿತು. ಆಗ ನಿವೇದಿತಾ ತುಸು ಹೆಚ್ಚು ಭಾವುಕರಾದರು. ಈ ಜೋಡಿ ವೈಯಕ್ತಿಕ ಜೀವನದಲ್ಲಿ ಜೊತೆಯಾಗಿದ್ದಾಗ ಒಪ್ಪಿಕೊಂಡಿದ್ದ ಚಿತ್ರವಿದು. ಬೆಂಗಳೂರು ಸುತ್ತಮುತ್ತ ಶೂಟಿಂಗ್ ನಡೆಸಲಾಗಿದೆ’ ಎಂದರು ನಿರ್ದೇಶಕರು.

ಮೊದಲು ಚಿತ್ರಕ್ಕೆ ‘ಕ್ಯಾಂಡಿ ಕ್ರಷ್’ ಎಂಬ ಶೀರ್ಷಿಕೆ ಇಡಲಾಗಿತ್ತು. ‘ಕ್ಯಾಂಡಿ ಕ್ರಷ್’ ಎಂಬ ಹೆಸರಿನ ಕಂಪನಿಯೊಂದು ಶೀರ್ಷಿಕೆ ಬದಲಿಸುವಂತೆ ನೋಟಿಸ್ ನೀಡಿದ ಬಳಿಕ ಚಿತ್ರ ತಂಡ ಶೀರ್ಷಿಕೆ ಬದಲಿಸಿತ್ತು.

ಶ್ರೀಚೌಡೇಶ್ವರಿ ಸಿನಿ ಕಂಬೈನ್ಸ್ ಮೂಲಕ ಮೋಹನ್ ಕುಮಾರ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಎಂ.ಎಸ್.ತ್ಯಾಗರಾಜ್ ಸಂಗೀತ ಸಂಯೋಜನೆ ಮಾಡಿದ್ದು, ಎ.ಕರುಣಾಕರ್ ಛಾಯಾಚಿತ್ರಗ್ರಹಣವಿದೆ.

ಅವನಿರಬೇಕಿತ್ತು ಎಂದ ಹೊಸಬರು

ಬಹುತೇಕ ಹೊಸಬರಿಂದಲೇ ಕೂಡಿರುವ ‘ಅವನಿರಬೇಕಿತ್ತು’ ಚಿತ್ರದ ‘ಓಹೋ..ಹೃದಯ’ ಎಂಬ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಅಶೋಕ್ ಸಾಮ್ರಾಟ್ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ರಾಜಸ್ಥಾನ, ಲಡಾಖ್, ಕೇರಳದಲ್ಲಿ ಹಾಡಿನ ಚಿತ್ರೀಕರಣ ಮಾಡಲಾಗಿದೆ. ಛಾಯಾಚಿತ್ರಗ್ರಾಹಕ ಪೃಥ್ವಿ ಮಾಲೂರು ಹಾಡನ್ನು ಸುಂದರವಾಗಿ ಚಿತ್ರೀಕರಿಸಿದ್ದಾರೆ. ಐಡೆಂಟಿಟಿ ಕುರಿತಾದ ವಿಭಿನ್ನ ಕಥೆಯನ್ನು ಹೊಂದಿರುವ ಚಿತ್ರವಿದು. ಚಿತ್ರದ ಎಲ್ಲ ಕೆಲಸಗಳು ಮುಗಿದಿದ್ದು ಏಪ್ರಿಲ್‌ನಲ್ಲಿ ತೆರೆಗೆ ಬರಲಿದೆ’ ಎಂದು ನಿರ್ದೇಶಕರು ಮಾಹಿತಿ ನೀಡಿದರು.

ಅನುರಾಧ ಭಟ್, ಅರ್ಫಾಜ್ ಉಳ್ಳಾಲ್ ಈ ಹಾಡಿಗೆ ಧ್ವನಿಯಾಗಿದ್ದಾರೆ. ಅರುಣ್ ಸಾಹಿತ್ಯವಿದ್ದು, ಲೋಕಿ ತಪಸ್ಯ ಸಂಗೀತ ನಿರ್ದೇಶನವಿದೆ. ಮುರಳಿ ಬಿಟಿ ಚಿತ್ರವನ್ನು ನಿರ್ಮಿಸಿದ್ದಾರೆ.

ಭರತ್ ಹಾಗೂ ಸೌಮ್ಯ ಜಾನ್ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ಪ್ರಶಾಂತ್ ಸಿದ್ದಿ, ಮಂಜುನಾಥ್, ಕಿರಣ್ ಹೆಗಡೆ ಮೊದಲಾದವರು ತಾರಾಬಳಗದಲ್ಲಿದ್ದಾರೆ. ದೇವರಾಜ್ ಪೂಜಾರಿ, ಪೃಥ್ವಿ ಮಾಲೂರ್ ಛಾಯಾಚಿತ್ರಗ್ರಹಣವಿದೆ.



ಸೌಮ್ಯ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಮನಸ್ಸು ಸ್ವಚ್ಛ ಮಾಡುವುದು ಹೇಗೆ?

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

153

ಮನಸ್ಸು ಯಾಕೆ ಹೊಲಸಾಗುತ್ತದೆ? ಇದನ್ನು ಹೇಗೆ ಸ್ವಚ್ಛ ಮಾಡಿಕೊಳ್ಳುವುದು? ದೇವರ ಪೂಜೆ ಮಾಡುತ್ತೇವೆ. ಸಂತರ ಮಾತು ಕೇಳುತ್ತೇವೆ. ಆದರೂ ಕೆಟ್ಟ ವಿಚಾರಗಳು ಮನಸ್ಸಿನಲ್ಲಿ ಬರುತ್ತವಲ್ಲ ಯಾಕೆ? ಸಂತರ ಮಾತು ಕೇಳುವಾಗ, ‘ಹೌದು ಹೀಗೆಲ್ಲ ಮಾಡಬಾರದು’ ಎಂದು ಅನಿಸುತ್ತದೆ. ಆದರೆ, ಮತ್ತೆ ಅದೇ ಹೊಲಸು ಯೋಚನೆಗಳು ಯಾಕೆ? ಇದು ಬಾವಿಯಲ್ಲಿ ಹಸಿರು ಪಾಚಿ ಬಂದ ಹಾಗೆ. ಒಂದು ಕಲ್ಲು ಒಗೆದರೆ ಪಾಚಿ ಆಚೆ ಈಚೆ ಹೋದ ಹಾಗೆ ಕಾಣುತ್ತದೆ. ಮತ್ತೆ ನಿಧಾನಕ್ಕೆ ಬಂದು ಸೇರುತ್ತದೆ. ಮನಸ್ಸು ಅಂದರೆ ಹಸಿರು ಪಾಚಿ ಇದ್ದ ಹಾಗೆ.

ರೈತರು ಶೇಂಗಾ ಬೀಜ ಹಾಕುವಾಗ ಸುಮ್ಮನೆ ಹಾಕುತ್ತಾರೇನು? ಭೂಮಿ ಹಸನು ಮಾಡಿಯೇ ಹಾಕುತ್ತಾರೆ. ಆದರೂ ಕಳೆ ಬರುತ್ತದೆ. ಕಳೆ ಎಲ್ಲಿಂದ ಬಂತು? ಬೀಜದ ಜೊತೆಗೇ ಅವೂ ಇದ್ದವು. ಹಾಗೆಯೇ ನಮ್ಮ ಮನಸ್ಸಿನಲ್ಲಿಯೂ ಕೆಟ್ಟದ್ದು ತುಂಬಿಕೊಂಡೇ ಇರುತ್ತವೆ. ಅವು ಹೊರಗೆ ಬರುತ್ತವೆ. ಅದಕ್ಕೆ ಬಸವಣ್ಣ, ‘ಕುದುರೆ ಏಸು ತೊಳೆದಡೇನು ಫಲ’ ಎಂದು ಕೇಳುತ್ತಾರೆ. ಮನಸ್ಸು ಎನ್ನುವುದು ಮಣ್ಣಿನ ಗೋಡೆ ಇದ್ದ ಹಾಗೆ. ಮಣ್ಣಿನ ಗೋಡೆಯನ್ನು ನೀವು ಎಷ್ಟು ಬಾರಿಯಾದರೂ ತೊಳೆಯಿರಿ. ಮಣ್ಣೇ ಬರುತ್ತದೆ. ಕಂಬಳಿಯಲ್ಲಿ ಕಣಕವಾಡಿದಂತೆ. ಇಂದ್ರಿಯ ಎಂಬುದು ಕಣಕದಂತೆ. ಇವು ಹಿಡಿದುಕೊಂಡು ಬಿಡುತ್ತವೆ. ಕೆಟ್ಟದ್ದು ಮಾಡಬೇಕು ಎಂಬ ಬಯಕೆ ನಮಗೆ ಇಲ್ಲ. ಆದರೂ ಮನಸ್ಸು ಯಾಕೆ ಕೆಟ್ಟದ್ದು ಮಾಡುತ್ತದೆ?

ತಂದೆ ತಾಯಿಯನ್ನು ಬಿಟ್ಟು ಬರುವುದು ಎಷ್ಟು ಕಷ್ಟ ಎಂದು ಹೆಣ್ಣುಮಕ್ಕಳಿಗೆ ಅರ್ಥ ಆದ ಹಾಗೆ ಯಾರಿಗೂ ಅರ್ಥವಾಗುವುದಿಲ್ಲ. ಆದರೂ ಗಂಡನ ಮನೆಗೆ ಬಂದಾಗ, ‘ನಿನ್ನ ಅವ್ವ ಅಪ್ಪನ ಬಿಟ್ಟು ಬಂದರಷ್ಟೇ ನಿನ್ನ ಜೊತೆಗೆ ಇರ್ತೇನೆ’ ಅಂತ ಹೇಳತೈತಲ ಮನಸ್ಸು ಯಾಕೆ? ಗೊತ್ತಿದ್ದರೂ ಹೇಳತೈತಿ. ಮೊಬೈಲ್ ನೋಡೋದರಿಂದ ಏನಾಗುತ್ತದೆ ಎನ್ನುವುದು ಗೊತ್ತಿಲ್ಲೇನು? ಆದರೂ ನೋಡುತ್ತೀವಿ. ಪುಸ್ತಕ ಹಿಡಿದರೆ ಏನಾಗುತ್ತದೆ ಎನ್ನುವುದು ಗೊತ್ತಿರುತ್ತದೆ. ಆದರೂ ಕೈ ಮೊಬೈಲನ್ನೇ ಹಿಡಿಯುತ್ತದೆ. ಆರೋಗ್ಯಕ್ಕೆ ಹಾನಿಕರ ಎಂದು ಸಿಗರೇಟ್ ಪ್ಯಾಕ್ ಮೇಲೆ ಬರೆದಿದ್ದಾರೆ. ಆದರೂ ಸೇದಬೇಕು ಅನಸತೈತಿ. ಮನಸ್ಸು ಬಹಳ ಚಂಚಲ. ಒಮ್ಮೆ ಅದು ಮಾಡಬೇಕು ಅನಸತೈತಿ. ಒಮ್ಮೆ ಇದನ್ನು ಮಾಡಬೇಕು ಅಂತ ಅನಸತೈತಿ. ಇದು ಮನದೋಷ. ಮನಸ್ಸಿನಲ್ಲಿ ಹೊಲಸು ಇದ್ದರೂ ಗೊತ್ತಾಗೋದಿಲ್ಲ. ಚಾಂಚಲ್ಯ ಇದ್ದರೂ ಗೊತ್ತಾಗೋದಿಲ್ಲ. ಹೊದಿಕೆ ಇದ್ದರೂ ಗೊತ್ತಾಗೋದಿಲ್ಲ. ಅದಕ್ಕೆ ಏನು ಮಾಡಬೇಕು?

ಮನಸ್ಸು ಸ್ವಚ್ಛಮಾಡಲು ಒಬ್ಬ ಗುರುವನ್ನು ಹಿಡಿದುಕೊಂಡು ಹೋಗಬೇಕು. ಹೊಲಸು ತುಂಬಿದ ಮನುಷ್ಯನ ಮನಸ್ಸನ್ನು ಸ್ವಚ್ಛ ಮಾಡಿ ಬಿಡುತ್ತಾನೆ ಗುರು. ಆಗ ದೇವರು ಕೂಡ ಮನುಷ್ಯನನ್ನು ಸ್ವೀಕರಿಸುತ್ತಾನೆ. ನೀವು ವೈದ್ಯರ ಬಳಿ ಹೋಗುತ್ತೀರಿ. ಅವರು ಮೊದಲು ಸ್ಕ್ಯಾನ್ ಮಾಡ್ತಾರೆ. ನಂತರ ಆಪರೇಷನ್ ಮಾಡುತ್ತಾರೆ. ಹಾಗೆಯೇ ಗುರು ಮೊದಲು ನಿಮ್ಮನ್ನು ಸ್ಕ್ಯಾನ್ ಮಾಡ್ತಾರೆ. ಶರಣರ ಮಾತು, ದಾಸರ ಮಾತುಗಳೇ ಪರಿಕರಗಳು. ಅವುಗಳನ್ನು ಬಳಸಿ ಆಪರೇಷನ್ ಮಾಡುತ್ತಾರೆ. ಇಲ್ಲಿ ಜ್ಞಾನದ ಮೂಲಕ ಸ್ಕ್ಯಾನ್ ಮಾಡಿ ಎಲ್ಲಿ ದೋಷ ಐತಿ ಅಂತ ಹುಡುಕಿ ಮನುಷ್ಯನನ್ನು ಆರೋಗ್ಯವಂತನನ್ನಾಗಿ ಮಾಡುವವನೇ ಗುರು. ಮನಸ್ಸು ಸ್ವಚ್ಛವಾಗಬೇಕು ಅಂದರೆ ಗುರುಗಳ ಜ್ಞಾನದಿಂದ ಮಾಡುವ ಸ್ಕ್ಯಾನ್ ಮತ್ತು ಆಪರೇಷನ್ ಅಗತ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮಾರ್ಚ್ 17, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣತೃತೀಯ ಗಂ. 19-34 ನಕ್ಷತ್ರ: ಚಿತ್ತಾ ಗಂ. 14-47 ಯೋಗ: ಧ್ರುವ ಗಂ. 15-45 ಕರಣ: ವಣಿಜ ಗಂ. 06-15, ಮೀನ ಮಾಸದ 03 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 4.

ರಾಹುಕಾಲ: ಬೆಳಿಗ್ಗೆ 07-30 – 09-00

ಸೂರ್ಯೋದಯ: 06-40 **ಸೂರ್ಯಾಸ್ತ:** 06-38

ಮುಸ್ಲಿಂ ದಿನಾಂಕ: 16 ರಂಜಾನ್

ಅದೃಷ್ಟ ಸಂಖ್ಯೆ: 6, 11

ಮೇಷ: ಕೇಶ ವಿನ್ಯಾಸಕಾರರು ಮತ್ತು ಬ್ಯೂಟಿ ಪಾರ್ಲರ್‌ನವರಿಗೆ ವೈಯಕ್ತಿಕ ಜೀವನದ ಬಗ್ಗೆ ಗಮನಹರಿಸಲು ಅವಕಾಶ ದೊರೆಯುತ್ತದೆ. ವೃತ್ತಿಯನ್ನು ಸವಾಲೆಂಬಂತೆ ಸ್ವೀಕರಿಸುವ ಸನ್ನಿವೇಶಗಳು ಎದುರಾಗುತ್ತವೆ.

ವೃಷಭ: ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳಿ. ಅನವಶ್ಯಕ ಚಿಂತೆ ಮಾಡುವುದರಿಂದ ಆರೋಗ್ಯದಲ್ಲಿ ಏರುಪೇರು ಕಂಡುಬರಲಿದೆ.

ಮಿಥುನ: ಮಕ್ಕಳಿಗೆ ಖರ್ಚು ವೆಚ್ಚಗಳ ಬಗ್ಗೆ ನಿಗಾ ವಹಿಸುವಂತೆ ತಿಳಿ ಹೇಳಿ. ಹಣ ಸಂಪಾದನೆಗಾಗಿ ಯಾವುದೇ ಅಡ್ಡ ಮಾರ್ಗವನ್ನು ಆರಿಸಿಕೊಳ್ಳಬೇಡಿ. ಆಸ್ತಿ ಸಂಬಂಧ ಮಾತುಕತೆ ನಡೆಯುವುದು.

ಕರ್ಕಾಟಕ: ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಮಾತೃ ಸಂಬಂಧಿಗಳ ಸಹಾಯದಿಂದ ಉತ್ತಮ ನೌಕರಿ ದೊರೆಯುವುದು.

ಸಿಂಹ: ನೂತನ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಿಬ್ಬಂದಿವರ್ಗ ಆನಂದದಿಂದ ಸಹಕರಿಸಲಿದ್ದಾರೆ. ವಕೀಲರಿಗೆ ಆದಾಯ ಗಳಿಕೆ ಆಗಲಿದೆ. ತಾಂತ್ರಿಕ ವಿದ್ಯಾರ್ಥಿಗಳಿಗೆ ಶುಭವಾಗುವುದು.

ಕನ್ಯಾ: ಇನ್ನೊಬ್ಬರಿಗೆ ಹಣವನ್ನು ಕೊಡುವ ಅಥವಾ ಸ್ವೀಕರಿಸುವ ವಿಚಾರದಲ್ಲಿ ಎಚ್ಚರಿಕೆಯಲ್ಲಿರಬೇಕಾಗುತ್ತದೆ. ಬ್ಯಾಂಕ್ ಅಧಿಕಾರಿಗಳಿಗೆ ವರ್ಗಾವಣೆ ಸಂಭವ. ದೃಢ ನಿರ್ಧಾರ ಕೈಗೊಳ್ಳಲು ಹಿಂಜರಿಕೆ ಬೇಡ.

ತುಲಾ: ಬೋಧನೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ನಿಮಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ. ಕುಟುಂಬ ವರ್ಗದಲ್ಲಿ ಸಣ್ಣಪುಟ್ಟ ವಿವಾದಗಳು ಉಂಟಾಗಬಹುದು. ಸಾರಿಗೆ ಉದ್ಯೋಗದವರಿಗೆ ಉತ್ತಮ ದಿನ.

ವೃಶ್ಚಿಕ: ಕಾರ್ಯವನ್ನು ಜಯಿಸುವ ಹಂಬಲದಲ್ಲಿ ಆರೋಗ್ಯವನ್ನು ಕಳೆದುಕೊಳ್ಳಬೇಡಿ. ದುರ್ಗಾಪರಮೇಶ್ವರಿಯ ಆರಾಧನೆಯಿಂದ ವೈಯಕ್ತಿಕ ವ್ಯವಹಾರಗಳಲ್ಲಿದ್ದ ಸಮಸ್ಯೆಗಳು ದೂರಾಗಲಿವೆ.

ಧನು: ವೃತ್ತಿ ಪರವಾಗಿ ಸ್ಥಳ ಬದಲಾವಣೆಯಾದರೆ ಕಷ್ಟವಾಗಬಹುದು ಎಂಬ ಶಂಕೆ ಬೇಡ. ಅಲ್ಲಿಯೂ ಬದುಕು ಹಸನಾಗಲಿದೆ. ಬರಬೇಕಾಗಿದ್ದ ಹಣಕ್ಕಾಗಿ ಹೆಚ್ಚು ಓಡಾಡಬೇಕಾಗುವುದು. ಕಾರ್ಮಿಕ ವರ್ಗದವರ ಬಗ್ಗೆ ಗಮನವಿರಲಿ.

ಮಕರ: ಬಹಳ ದಿನಗಳ ನಂತರ ಸಹೋದರನ ಆಗಮನದಿಂದ ಹೆಚ್ಚಿನ ಸಂಭ್ರಮವಿರುವುದು. ಮಂದಗತಿಯಲ್ಲಿರುವ ಕೆಲವು ಕೆಲಸಗಳನ್ನು ಶೀಘ್ರವಾಗಿ ಪೂರೈಸಲು ಸಿಬ್ಬಂದಿಗೆ ಒತ್ತಡ ಹೇರುವಿರಿ.

ಕುಂಭ: ಜಾಣ್ಮೆಯಿಂದ ಅವಕಾಶವನ್ನು ಬಳಸಿಕೊಂಡಲ್ಲಿ ಅಧಿಕಾರ ಪಡೆದು-ಕೊಳ್ಳುವುದು ಕಷ್ಟದ ಕೆಲಸವೇನಲ್ಲ. ಹಣಕಾಸಿನ ಸ್ಥಿತಿಯನ್ನು ಸುಧಾರಿಸಿ ಕೊಳ್ಳಲು ಸೂಕ್ತ ಕಾಲ . ಮನೆ ದೇವರಿಗೆ ಹರಕೆ ಸಲ್ಲಿಸುವ ಬಗ್ಗೆ ಯೋಚಿಸಿ.

ಮೀನ: ಕಾರ್ಯದೊತ್ತಡ ಜತೆಯಲ್ಲಿಯೂ ಮನೆಯ ವಿಚಾರಗಳತ್ತ ಗಮನಹರಿಸುವುದು ಮುಖ್ಯ. ಎಲ್ಲಾ ಭಾವನೆಗಳಿಗೆ ಸಕರಾತ್ಮಕ ಪ್ರತಿಕ್ರಿಯೆ ದೊರೆಯಲಿದೆ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

ಪದಬಂಧ 5984


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಎಲ್ಲ ಕಡೆಗಳಲ್ಲಿಯೂ ವದನವುಳ್ಳವನು (5)
4.ಇದು ನಿಸ್ಸಾರವಾದುದು (3)
5.ರಸ ಒಸರುವ ಜಿಹ್ವೆ (3)
7.ಪ್ರತ್ಯಯ ಸಹಿತವಾದ ಶಬ್ದ (2)
10.ಮನದಲ್ಲಿರುವ ಅಮಲು! (2)
11.ಬಾಣ ಹಿಡಿದಿರುವ ಶೈವ ಭಕ್ತ (3)
12.ಖರ್ಚು ಕಳೆದು ಉಳಿದುದು (2)
13.ಹಸುವಿನ ಮರಿ (2)
15.ವಸ್ತುಗಳನ್ನು ತೂಗುವ ಸಾಧನ (3)
18.ಉತ್ತರದ ಕಡೆಯವರ ಸ್ನಾನ (3)
19.ಮತ್ತೆ ಉದಯಿಸುವುದು (5)

ಮೇಲಿಂದ ಕೆಳಕ್ಕೆ

1.ಆನಂದ ಈ ರೀತಿ ಬಂದಿದೆ (3)
2.ಮರದ ಕೊಂಬೆ (3)
3.ಖಚರದಲ್ಲಿರುವ ಹೇಸರಗತ್ತೆ ಕಾಣುತ್ತಿದೆಯೆ? (2)
4.ಸತ್ತವರಿಗಾಗಿ ದುಃಖಿಸಿ ಅವರ ಗುಣಗಾನ ಮಾಡುವ ಹಾಡು (5)
6. ಮನುಷ್ಯರನ್ನು ತಿನ್ನುವ ಪ್ರಾಣಿ (5)
8.ಹತ್ತರ ಗುಂಪು (3)
9.ಕಲೆಸಿದ ಗೋಧಿ ಹಿಟ್ಟು (3)
14.ಜನರು ನೀಡಿದ ಕಾಣಿಕೆ ಉಲ್ಟಾ ಪಲ್ಟಾ ಆಗಿದೆ (3)
16.ಹಿಟ್ಟು ಉಲ್ಟಾ ಆಗಿದೆ (2)
17.ಸೂರ್ಯನ ಸಾರಥಿ (3)



5983ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಾಕು 3.ತುರುಗಲು 5.ಕಮಲ 7.ವನಸ್ಪತಿ 9.ಬಸದಿ 10.ಸವಾಲು 11.ಗರಿಮುರಿ 13.ಅರಸ 15.ಅಂಜುಗುಳಿ 16.ವಿಷ

ಮೇಲಿಂದ ಕೆಳಕ್ಕೆ: 2.ಕುಹಕ 3.ತುಮುಲ 4.ಗಡವ 6.ಮಸೀದಿ 8.ತಿಕ್ಕಲು 9.ಬಡಗ 10.ಸದರ 12.ರಿವಾಜು 13.ಅರಳಿ 14.ಸತ್ಕವಿ

ಸುಡೊಕು 6369

	2			5		8		
8			3		9		2	1
	4	3		1				7
	3	2				7		6
				7	2		9	
7	9				6			5
3	1		9		5		7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6368 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹445
12 ಕ್ಕೆ	₹60
ಮೈಸೂರು	
100ಕ್ಕೆ	₹445

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹344-655
ದ್ವಿತಳಿ (ಬಿ.ವಿ)	₹422-753

ಹೈಪರ್‌ಲೂಪ್ ಪರೀಕ್ಷಾ ಟ್ರ್ಯಾಕ್ ಸಚಿವ ವೈಷ್ಣವ್ ಪರಿಶೀಲನೆ



ಚೆನ್ನೈ (ಪಿಟಿಐ): ತಮಿಳುನಾಡಿನ ಐಐಟಿ-ಮದ್ರಾಸ್‌ನಿಂದ ಅಭಿವೃದ್ಧಿಪಡಿಸುತ್ತಿರುವ ಹೈಪರ್‌ಲೂಪ್ ಪರೀಕ್ಷಾ ಟ್ರ್ಯಾಕ್‌ಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭೇಟಿ ನೀಡಿ ಪರಿಶೀಲಿಸಿದ್ದಾರೆ.

'ಭಾರತೀಯ ರೈಲ್ವೆ ಇಲಾಖೆಯ ಮುಂದಾಳತ್ವದಡಿ ಐಐಟಿ-ಮದ್ರಾಸ್‌ನ ಥೈಯೂರ್ ಕ್ಯಾಂಪಸ್‌ನಲ್ಲಿ 410 ಮೀಟರ್ ಉದ್ದದ ಹೈಪರ್‌ಲೂಪ್ ನಿರ್ವಾತ ಕೊಳವೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಏಷ್ಯಾದ ಅತಿದೊಡ್ಡ ಟ್ರ್ಯಾಕ್ ಇದಾಗಿದೆ. ಶೀಘ್ರವೇ, ವಿಶ್ವದ ಅತಿ ಉದ್ದದ ಹೈಪರ್‌ಲೂಪ್ ಟ್ರ್ಯಾಕ್ ಕೂಡ ಆಗಲಿದೆ' ಎಂದು ಸಚಿವರು 'ಎಕ್ಸ್'ನಲ್ಲಿ ಭಾನುವಾರ ತಿಳಿಸಿದ್ದಾರೆ.

'ಸ್ವದೇಶಿ ಉಪಕರಣಗಳನ್ನು ಬಳಸಿ ಈ ಟ್ರ್ಯಾಕ್ ಅಭಿವೃದ್ಧಿಪಡಿಸಲಾಗುತ್ತಿದೆ. ಟ್ರ್ಯಾಕ್‌ನಲ್ಲಿ ಇಲ್ಲಿಯವರೆಗೆ ನಡೆದಿರುವ ಎಲ್ಲಾ ಪರೀಕ್ಷೆಗಳು ಯಶಸ್ವಿಯಾಗಿವೆ. ಶೀಘ್ರವೇ, ಭಾರತದಲ್ಲಿ ಹೈಪರ್‌ಲೂಪ್ ಸಾರಿಗೆ ಅನುಷ್ಠಾನಗೊಳ್ಳುವ ವಿಶ್ವಾಸವಿದೆ' ಎಂದು ಹೇಳಿದ್ದಾರೆ.

ಹಳಿಯನ್ನು ಆಧಾರವಾಗಿಟ್ಟುಕೊಂಡು ನಿರ್ವಾತ ಕೊಳವೆಗಳಿಂದ ನಿರ್ಮಿಸಿದ ಸಾರಿಗೆ ಮಾರ್ಗಕ್ಕೆ ಹೈಪರ್‌ಲೂಪ್ ಎಂದು ಕರೆಯಲಾಗುತ್ತದೆ. ಈ ಕೊಳವೆ ಮಾರ್ಗದಲ್ಲಿ ಪಾಡ್ಸ್ ರೂಪದಲ್ಲಿರುವ ಕ್ಯಾಬಿನ್‌ಗಳಲ್ಲಿ ಪ್ರಯಾಣಿಕರು ಕುಳಿತು ಗಂಟೆಗೆ 1 ಸಾವಿರ ಕಿ.ಮೀ. ವೇಗದಲ್ಲಿ ಪಯಣಿಸಬಹುದಾಗಿದೆ. ಹಡಗು, ರಸ್ತೆ ಸಾರಿಗೆ, ರೈಲು ಮತ್ತು ವಿಮಾನ ನಂತರದ ಐದನೇ ಮಾದರಿಯ ಸಂಚಾರ ಸಾಧನ ಎಂಬುದಾಗಿ ಇದನ್ನು ಬಣ್ಣಿಸಲಾಗುತ್ತಿದೆ.

2022ರ ಮೇ ತಿಂಗಳಿನಲ್ಲಿ ಕೇಂದ್ರ ರೈಲ್ವೆ ಸಚಿವಾಲಯವು ಸ್ವದೇಶಿ ಹೈಪರ್‌ಲೂಪ್ ಸಾರಿಗೆ ಸೇವೆ ಅಭಿವೃದ್ಧಿಗೆ ಅನುಮೋದನೆ ನೀಡಿತ್ತು. ಈ ಸಂಬಂಧ ಐಐಟಿ-ಮದ್ರಾಸ್‌ಗೆ ₹8.34 ಕೋಟಿ ಅನುದಾನ ನೀಡಿದೆ.

ಅಲ್ಪಾವಧಿ ಹೂಡಿಕೆ: ಯಾವುದು ಉತ್ತಮ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಅಲ್ಪಾವಧಿ ಹೂಡಿಕೆ ಅಂತ ಬಂದಾಗ ಹಲವು ದಶಕಗಳಿಂದ ದೇಶದಲ್ಲಿ ನಿಶ್ಚಿತ ಠೇವಣಿ (ಫಿಕ್ಸೆಡ್ ಡೆಪಾಸಿಟ್) ಅತ್ಯಂತ ಜನಪ್ರಿಯ ಹೂಡಿಕೆಯಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳು ಬ್ಯಾಂಕ್‌ನ ನಿಶ್ಚಿತ ಠೇವಣಿಗೆ ಪರ್ಯಾಯವಾಗಿ ರೂಪುಗೊಳ್ಳುತ್ತಿವೆ.

ನಿಶ್ಚಿತ ಠೇವಣಿಯಲ್ಲಿ ಇಲ್ಲದ ಹಲವು ಅನುಕೂಲಗಳು ಲಿಕ್ವಿಡ್ ಫಂಡ್‌ನಲ್ಲಿ ಸಿಗುತ್ತವೆ. ಬನ್ನಿ, ಈ ಫಂಡ್‌ಗಳು ನಿಶ್ಚಿತ ಠೇವಣಿಗಿಂತ ಹೂಡಿಕೆದಾರರಿಗೆ ಹೇಗೆ ಹೆಚ್ಚು ಲಾಭದಾಯಕ ಎಂಬ ಬಗ್ಗೆ ತಿಳಿಯೋಣ.

ಲಿಕ್ವಿಡ್ ಫಂಡ್ ಎಂದರೇನು?: ಕಡಿಮೆ ಅವಧಿಗೆ ಹೂಡಿಕೆ ಮಾಡುವ ಅವಕಾಶ ಕಲ್ಪಿಸುವ ಮ್ಯೂಚುವಲ್ ಫಂಡ್‌ಗಳನ್ನು ಲಿಕ್ವಿಡ್ ಮ್ಯೂಚುವಲ್ ಫಂಡ್ ಎಂದು ಕರೆಯಬಹುದು. ಡೆಟ್ ಫಂಡ್ ಮಾದರಿಯಲ್ಲಿರುವ ವಿವಿಧ ಮ್ಯೂಚುವಲ್ ಫಂಡ್‌ಗಳ ಪೈಕಿ ಲಿಕ್ವಿಡ್ ಫಂಡ್ ಪ್ರಮುಖವಾದುದು.

ಹೆಸರೇ ಹೇಳುವಂತೆ ಲಿಕ್ವಿಡ್ ಫಂಡ್‌ಗಳಲ್ಲಿ ಅಗತ್ಯ ಎನಿಸಿದಾಗ ಹೂಡಿಕೆ ಹಣವನ್ನು ವಾಪಸ್ ಪಡೆದುಕೊಳ್ಳುವುದು ಸುಲಭ. ದುಡ್ಡಿನ ಅಗತ್ಯ ಬಿದ್ದಾಗ ಲಿಕ್ವಿಡ್ ಫಂಡ್‌ಗಳಲ್ಲಿ ಹೂಡಿಕೆ ಮೊತ್ತವನ್ನು 24 ಗಂಟೆಯೊಳಗೆ ನಗದೀಕರಣ ಮಾಡಲು ಸಾಧ್ಯವಿದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ನಿಯಮದ ಪ್ರಕಾರ, ಲಿಕ್ವಿಡ್ ಫಂಡ್‌ಗಳು ಹೂಡಿಕೆದಾರರ ಹಣವನ್ನು ನಿಶ್ಚಿತ ಆದಾಯ ತಂದುಕೊಡುವ, 91 ದಿನಗಳಲ್ಲಿ ಮೆಚ್ಯೂರಿಟಿ ಹೊಂದುವಂತಹ ಸರ್ಕಾರಿ ಬಾಂಡ್‌ಗಳು, ಟ್ರೆಷರಿ ಬಿಲ್‌ಗಳು, ಕಮರ್ಷಿಯಲ್ ಪೇಪರ್‌ಗಳಲ್ಲಿ ತೊಡಗಿಸಬಹುದು. ಸಾಮಾನ್ಯವಾಗಿ 7 ದಿನಗಳಿಂದ 1 ವರ್ಷದ ಒಳಗಿನ ಹೂಡಿಕೆಗಳಿಗೆ ಈ ಫಂಡ್‌ಗಳು ಸರಿಹೊಂದುತ್ತವೆ.

ನಿಶ್ಚಿತ ಠೇವಣಿಗಿಂತ ಹೆಚ್ಚು ಲಾಭ: ಬ್ಯಾಂಕ್ ಉಳಿತಾಯ ಖಾತೆ ಮತ್ತು ಅಲ್ಪಾವಧಿ ನಿಶ್ಚಿತ ಠೇವಣಿಗಿಂತ ಕೊಂಚ ಹೆಚ್ಚು ಲಾಭಾಂಶ ಕೊಡುವ ಸಾಮರ್ಥ್ಯ ಲಿಕ್ವಿಡ್ ಫಂಡ್‌ಗಳಿಗೆ ಇದೆ. ನಿಶ್ಚಿತ ಠೇವಣಿಯಲ್ಲಿ ನಿರ್ದಿಷ್ಟ ಸಂದರ್ಭದಲ್ಲಿ ನಿಗದಿಯಾಗಿರುವ ಬಡ್ಡಿ ಗಳಿಕೆ ಹೂಡಿಕೆದಾರನಿಗೆ ಸಿಗುತ್ತದೆ. ಆದರೆ, ಲಿಕ್ವಿಡ್ ಫಂಡ್‌ಗಳು ಸರ್ಕಾರಿ ಬಾಂಡ್‌ಗಳು, ಟ್ರೆಷರಿ ಬಿಲ್‌ಗಳು, ಕಮರ್ಷಿಯಲ್ ಪೇಪರ್‌ಗಳಲ್ಲಿ ಹೂಡಿಕೆ ಮಾಡುವುದರಿಂದ ಗಳಿಕೆಯ ಸಾಧ್ಯತೆಯು ಕೊಂಚ ಹೆಚ್ಚಿರುತ್ತದೆ. ಆದರೆ, ನಿಮಗೆ ಗೊತ್ತಿರಲಿ ಲಿಕ್ವಿಡ್ ಮ್ಯೂಚುವಲ್ ಫಂಡ್‌ಗಳಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಇರುವಷ್ಟು ಮಾರ್ಕೆಟ್ ರಿಸ್ಕ್ ಇಲ್ಲದಿದ್ದರೂ ಒಂದಷ್ಟು ರಿಸ್ಕ್ ಇದ್ದೇ ಇರುತ್ತದೆ.

ನಗದೀಕರಣ ಸುಲಭ: ಬ್ಯಾಂಕ್‌ನ ನಿಶ್ಚಿತ ಠೇವಣಿಗಳಿಗೆ ಲಾಕಿನ್ ಅವಧಿ (ಲಾಕಿನ್ ಪೀರಿಯಡ್) ಇರುತ್ತದೆ. ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಠೇವಣಿ ಇಟ್ಟಿರುವ ಹಣ ಬಿಡಿಸಿಕೊಂಡರೆ ಒಂದಷ್ಟು ದಂಡ ಪಾವತಿಸಬೇಕಾಗುತ್ತದೆ. ಆದರೆ, ಲಿಕ್ವಿಡ್ ಫಂಡ್‌ಗಳಲ್ಲಿ ಇಂತಹ ಸಮಸ್ಯೆ ಇಲ್ಲ. ಹೂಡಿಕೆ ಮೊತ್ತವನ್ನು ಅಗತ್ಯ ಎನಿಸಿದಾಗ 24 ಗಂಟೆಯ ಒಳಗಾಗಿ ವಾಪಸ್ ಪಡೆದುಕೊಳ್ಳಬಹುದು. ಹಾಗಾಗಿ, ನಗದೀಕರಣದ ವಿಷಯದಲ್ಲಿ ನಿಶ್ಚಿತ ಠೇವಣಿಗಿಂತ ಲಿಕ್ವಿಡ್ ಫಂಡ್ ಉತ್ತಮ.

ತೆರಿಗೆ ಅನುಕೂಲ: ತೆರಿಗೆ ಅನುಕೂಲ ಅಂತ ಬಂದಾಗ ಲಿಕ್ವಿಡ್ ಫಂಡ್‌ಗಳು ನಿಶ್ಚಿತ ಠೇವಣಿಗಿಂತ ಹೆಚ್ಚಿನ ಅನುಕೂಲ ಒದಗಿಸು ತ್ತವೆ. ಅದರಲ್ಲೂ ಹೆಚ್ಚು ತೆರಿಗೆ ಪಾವತಿಸುತ್ತಿರು ವವರಿಗೆ ನಿಶ್ಚಿತ ಠೇವಣಿಗಿಂತ ಲಿಕ್ವಿಡ್ ಫಂಡ್‌ನಿಂದಲೇ ಹೆಚ್ಚು ಲಾಭ. ಈ ಫಂಡ್‌ಗಳಲ್ಲಿ ಹೂಡಿಕೆ ಮೇಲೆ ಬರುವ ಲಾಭಕ್ಕೆ ಮಾತ್ರ ನಿರ್ದಿಷ್ಟ ವ್ಯಕ್ತಿ ತನ್ನ ಆದಾಯ ತೆರಿಗೆ ಸ್ಲ್ಯಾಬ್ ಪ್ರಕಾರ ತೆರಿಗೆ ಪಾವತಿಸಬೇಕಾಗುತ್ತದೆ. ಆದರೆ, ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿದಾಗ ಹೂಡಿಕೆಯ ಅಸಲಿನ ಮೊತ್ತ ಮತ್ತು ಬಡ್ಡಿ ಗಳಿಕೆ ಒಳಗೊಂಡಂತೆ ನಿರ್ದಿಷ್ಟ ವ್ಯಕ್ತಿ ತನ್ನ ಆದಾಯ ತೆರಿಗೆ ಸ್ಲ್ಯಾಬ್ ಪ್ರಕಾರ ತೆರಿಗೆ ಕಟ್ಟಬೇಕಾಗುತ್ತದೆ.

ತುರ್ತು ನಿಧಿಯಂತೆ ಕೆಲಸ: ನಿಶ್ಚಿತ ಠೇವಣಿಯಲ್ಲಿ ಹಣ ಇಟ್ಟಾಗ ಲಾಕಿನ್ ಅವಧಿ ಮುಗಿಯುವ ತನಕ ನಗದೀಕರಣ ಮಾಡಿಕೊಂಡರೆ ದಂಡ ಪಾವತಿಸಬೇಕಾಗುತ್ತದೆ. ಹಾಗಾಗಿ, ಅಗತ್ಯ ಎನಿಸಿದಾಗ ಹಣ ವಾಪಸ್ ತೆಗೆದುಕೊಳ್ಳುವುದು ಕಷ್ಟ. ಆದರೆ, ಲಿಕ್ವಿಡ್ ಫಂಡ್‌ನಲ್ಲಿ ಅಗತ್ಯ ಎನಿಸಿದಾಗ ಕೂಡಲೇ ಹಣ ವಾಪಸ್ ಪಡೆಯಬಹುದು. ಅಂದರೆ ತುರ್ತು ಅಗತ್ಯಗಳಿಗೆ ಬೇಕಾದ ದುಡ್ಡನ್ನು ಇಟ್ಟುಕೊಳ್ಳಲು ಈ ಫಂಡ್ ಹೆಚ್ಚು ಸೂಕ್ತ.

ಕಿವಿಮಾತು: ನಿಶ್ಚಿತ ಠೇವಣಿಗೆ ಹೋಲಿಸಿದರೆ ಲಿಕ್ವಿಡ್ ಫಂಡ್‌ಗಳಲ್ಲಿ ಹೆಚ್ಚು ಗಳಿಕೆ ಸಾಧ್ಯತೆ, ತೆರಿಗೆ ಅನುಕೂಲ ಮತ್ತು ಸುಲಭ ನಗದೀಕರಣದ ಅನುಕೂಲಗಳಿವೆ. ಈ ಫಂಡ್‌ಗಳಲ್ಲಿ ಹೂಡಿಕೆ ಮಾಡಿದಾಗ ಸಿಗುವ ಅನುಕೂಲಗಳ ಬಗ್ಗೆ ಮೇಲೆ ನೀಡಿರುವ ಮಾಹಿತಿಯು ನಿಮ್ಮ ಹೂಡಿಕೆಗಳನ್ನು ಅಲ್ಪಾವಧಿಗೆ ಎಲ್ಲಿ ತೊಡಗಿಸಬೇಕು ಎನ್ನುವ ತೀರ್ಮಾನ ಮಾಡಲು ನೆರವಿಗೆ ಬರುತ್ತದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಅನಿಶ್ಚಿತ ವಾತಾವರಣ ಮುಂದುವರಿಕೆ



ಮಾರ್ಚ್ 13ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಕುಸಿತ ದಾಖಲಿಸಿವೆ. 73,828 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.69ರಷ್ಟು ಇಳಿಕೆ ಕಂಡಿದೆ. 22,397 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.65ರಷ್ಟು ತಗ್ಗಿದೆ.

ಇನ್ನು ನಿಫ್ಟಿ ಮಿಡ್‌ಕ್ಯಾಪ್ ಸೂಚ್ಯಂಕ ಶೇ 2.48ರಷ್ಟು ಇಳಿಕೆ ಕಂಡಿದ್ದರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 3.27ರಷ್ಟು ಇಳಿಕೆ ದಾಖಲಿಸಿದೆ. ಆರ್ಥಿಕ ಹಿಂಜರಿತದ ಭಯ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಸಮರ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ ಸೇರಿ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿವೆ.

ವಾರದ ಲೆಕ್ಕಾಚಾರದಲ್ಲಿ ವಲಯವಾರು ಪ್ರಗತಿ ನೋಡಿದಾಗ ನಿಫ್ಟಿ ರಿಯಲ್ ಎಸ್ಟೇಟ್ ಶೇ 1.83, ಮಾಧ್ಯಮ ಶೇ 1.5, ಆಟೊ ಶೇ 1.1, ಲೋಹ ಶೇ 0.87, ಮಾಹಿತಿ ತಂತ್ರಜ್ಞಾನ ಶೇ 0.52, ಅನಿಲ ಮತ್ತು ತೈಲ ಶೇ 0.43, ಫಾರ್ಮಾ ಶೇ 0.18, ಎನರ್ಜಿ ಶೇ 0.17, ಫೈನಾನ್ಸ್ ಶೇ 0.16, ಎಫ್‌ಎಂಸಿಜಿ ಶೇ 0.15ರಷ್ಟು ಕುಸಿದಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಮತ್ತು ಬ್ಯಾಂಕ್ ಸೂಚ್ಯಂಕಗಳು ಕ್ರಮವಾಗಿ ಶೇ 0.43 ಮತ್ತು 0.01ರಷ್ಟು ಗಳಿಸಿಕೊಂಡಿವೆ.

ಇಳಿಕೆ-ಗಳಿಕೆ: ವಾರದ ಅವಧಿಯಲ್ಲಿ ನಿಫ್ಟಿಯಲ್ಲಿ ಇಂಡಸ್ ಇಂಡ್ ಬ್ಯಾಂಕ್ ಶೇ 30.79, ಇನ್ಫೊಸಿಸ್ ಶೇ 7.82, ವಿಪ್ರೊ ಶೇ 7.84, ಟೆಕ್ ಮಹೀಂದ್ರ ಶೇ 4.61, ಟೈಟನ್ ಕಂಪನಿ ಶೇ 3.83, ಶ್ರೀರಾಮ್ ಫೈನಾನ್ಸ್ ಶೇ 3.79, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 3.79, ಹೀರೊ ಮೋಟೊಕಾರ್ಪ್ ಶೇ 3.28, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 3.14, ಒಎನ್‌ಜಿಸಿ ಶೇ 3.05, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 3.03 ಮತ್ತು ಅಪೊಲೊ ಹಾಸ್ಪಿಟಲ್ಸ್ ಶೇ 2.84ರಷ್ಟು ಕುಸಿದಿವೆ.

ಸನ್ ಫಾರ್ಮಾ ಶೇ 4.26, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 3.3, ರಿಲಯನ್ಸ್ ಶೇ 3.04, ಬಿಇಎಲ್ ಶೇ 2.68, ಐಸಿಐಸಿಐ ಬ್ಯಾಂಕ್ ಶೇ 2.61, ಟಾಟಾ ಮೋಟರ್ಸ್ ಶೇ 2.45, ಐಟಿಸಿ ಶೇ 1.5, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 0.95, ಬ್ರಿಟಾನಿಯಾ ಶೇ 0.74, ಪವರ್ ಗ್ರಿಡ್ ಕಾರ್ಪೊರೇಷನ್ ಶೇ 0.43, ಬಜಾಜ್ ಆಟೊ ಶೇ 0.43 ಮತ್ತು ಎಚ್‌ಡಿಎಫ್‌ಸಿ ಲೈಫ್ ಶೇ 0.41ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಟ್ರಂಪ್ ಅವರ ಸುಂಕ ಸಮರದ ಪರಿಣಾಮ ಈ ವಾರವೂ ಷೇರುಪೇಟೆಯಲ್ಲಿ ಅನಿಶ್ಚಿತ ವಾತಾವರಣ ಮುಂದುವರಿಯುವ ಸಾಧ್ಯತೆಯಿದೆ. ಮಾರ್ಚ್ 18 ಮತ್ತು 19ರಂದು ಅಮೆರಿಕದ ಫೆಡರಲ್ ರಿಸರ್ವ್‌ನ ಹಣಕಾಸು ಸಮಿತಿ ಸಭೆ ನಡೆಯಲಿದೆ. ಬಡ್ಡಿದರ ನಿಗದಿ ಬಗ್ಗೆ ಸಭೆಯಲ್ಲಿ ತೆಗೆದುಕೊಳ್ಳಲಿರುವ ತೀರ್ಮಾನವು ಜಾಗತಿಕವಾಗಿ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಲಿದೆ. ಉಳಿದಂತೆ ಅಮೆರಿಕ ಮತ್ತು ಚೀನಾದ ಚಿಲ್ಲರೆ ಮಾರಾಟದ ಅಂಕಿ-ಅಂಶ ಮತ್ತು ಕೈಗಾರಿಕೆ ಉತ್ಪಾದನೆ ದತ್ತಾಂಶಗಳತ್ತ ಹೂಡಿಕೆದಾರರು ಚಿತ್ತ ಹರಿಸಿದ್ದಾರೆ.

ಸುಧಾ ಓದಿರಿ

ಯೆಮನ್ ಮೇಲೆ ಅಮೆರಿಕ ವೈಮಾನಿಕ ದಾಳಿ: 31 ಸಾವು

ವೆಸ್ಟ್ ಪಾಮ್ ಬೀಚ್ (ಅಮೆರಿಕ) (ಎಪಿ): ಯೆಮನ್ ಮೇಲೆ ಅಮೆರಿಕ ನಡೆಸಿದ ವೈಮಾನಿಕ ದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿ 31 ಜನರು ಮೃತಪಟ್ಟಿದ್ದಾರೆ. ಹತರಾದವರಲ್ಲಿ 18 ಮಂದಿ ನಾಗರಿಕರು ಸೇರಿದ್ದಾರೆ ಎಂದು ಹೌತಿ ಬಂಡುಕೋರರ ಸರ್ಕಾರದ ಆರೋಗ್ಯ ಸಚಿವಾಲಯ ಹೇಳಿದೆ.

ಅಮೆರಿಕದ ಅಧಿಕಾರಿಯೊಬ್ಬರ ಪ್ರಕಾರ, ಟ್ರಂಪ್ ಅವರ ಎರಡನೇ ಅವಧಿಯ ಆಡಳಿತದಲ್ಲಿ ಹೌತಿಗಳ ಮೇಲೆ ನಡೆದ ಮೊದಲ ದಾಳಿ ಇದಾಗಿದೆ.

ಹೌತಿಯ ಭದ್ರಕೋಟೆ ಸಾದಾ, ರಾಜಧಾನಿ ಸನಾದಲ್ಲಿ ಶನಿವಾರ ಸಂಜೆ ಮತ್ತು ಹೋದೆದಾ, ವಾಯದಾ ಹಾಗೂ ಮಾರಿಬ್ ಪ್ರಾಂತ್ಯಗಳ ಮೇಲೆ ಭಾನುವಾರ ನಸುಕಿನಲ್ಲಿ ವಾಯುದಾಳಿ ಆಗಿದೆ. ಸುಮಾರು 101 ಮಂದಿ ಗಾಯಗೊಂಡಿದ್ದಾರೆ ಎಂದು ಸಚಿವಾಲಯದ ವಕ್ತಾರ ಅನೀಸ್ ಅಲ್ ಅಸ್‌ಬಾಹಿ ಭಾನುವಾರ ತಿಳಿಸಿದ್ದಾರೆ.

ಇರಾನ್ ಬೆಂಬಲಿತ ಹೌತಿ ಬಂಡುಕೋರರು ಪ್ರಮುಖ ಜಲ ಮಾರ್ಗಗಳಲ್ಲಿ ಹಡಗುಗಳ ಮೇಲಿನ ದಾಳಿಯನ್ನು ಸಂಪೂರ್ಣ ನಿಲ್ಲಿಸುವವರೆಗೂ ಭೀಕರ ವೈಮಾನಿಕ ದಾಳಿ ನಡೆಸಲು ನಿರ್ದೇಶಿಸಲಾಗಿದೆ. ಯೆಮನ್‌ನಲ್ಲಿ ಹೌತಿ ಹಿಡಿತದ ಪ್ರದೇಶಗಳ ಮೇಲೆ ಸರಣಿ ವೈಮಾನಿಕ ದಾಳಿಗೂ ಆದೇಶಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ನಮ್ಮ ಧೈರ್ಯಶಾಲಿ ಯೋಧರು ಅಮೆರಿಕದ ಹಡಗುಗಳು, ವೈಮಾನಿಕ ಮತ್ತು ನೌಕಾ ಸ್ವತ್ತುಗಳ ರಕ್ಷಣೆಗೆ ಹಾಗೂ ಸಾಗರಯಾನದ ಸ್ವಾತಂತ್ರ್ಯವನ್ನು ಪುನರ್‌ಸ್ಥಾಪಿಸಲು ಭಯೋತ್ಪಾದಕರ ನೆಲೆಗಳು ಮತ್ತು ಅವರ ನಾಯಕರು ಹಾಗೂ ಅವರ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳ ಮೇಲೆ ವೈಮಾನಿಕ ದಾಳಿಗಳನ್ನು ನಡೆಸುತ್ತಿದ್ದಾರೆ' ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ತೊಗರಿ ಖರೀದಿ: ನೋಂದಣಿ ಪ್ರಕ್ರಿಯೆ ವಿಸ್ತರಣೆಗೆ ರೈತರ ಮನವಿ

ಉಲ್ಲೇಖವಾಗದ ಪ್ರೋತ್ಸಾಹಧನ

• ಬಸವರಾಜ್ ಸಂಪಳ್ಳಿ/ ಇಮಾಮ್‌ಹುಸೇನ್ ಗೂಡುನವರ



ಅಥಣಿ ತಾಲ್ಲೂಕಿನ ಕನ್ನಾಳ ಪಿಕೆಪಿಎಸ್‌ನಲ್ಲಿ ರೈತರಿಂದ ತೊಗರಿ ಖರೀದಿಸಲಾಯಿತು

ವಿಜಯಪುರ/ ಬೆಳಗಾವಿ: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ತೆರೆದಿರುವ ಕೇಂದ್ರಗಳಲ್ಲಿ ರೈತರಿಗೆ ನೀಡುತ್ತಿರುವ ರಸೀದಿಯಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿದ ದರವಷ್ಟೇ ಇದೆಯೇ ಹೊರತು, ರಾಜ್ಯ ಸರ್ಕಾರ ಘೋಷಿಸಿದ್ದ ಪ್ರೋತ್ಸಾಹಧನದ ಬಗ್ಗೆ ಉಲ್ಲೇಖವಿಲ್ಲ.

ಕೇಂದ್ರ ಸರ್ಕಾರ ಪ್ರತಿ ಕ್ವಿಂಟಲ್‌ಗೆ ₹7,550 ದರ ನಿಗದಿಪಡಿಸಿದೆ. ಮುಕ್ತ ಮಾರುಕಟ್ಟೆಯಲ್ಲೇ ಇದಕ್ಕಿಂತ ಹೆಚ್ಚಿನ ದರವಿದ್ದ ಕಾರಣ ರೈತರು ಖರೀದಿ ಕೇಂದ್ರಗಳತ್ತ ಸುಳಿದಿರಲಿಲ್ಲ. ಈ ಮಧ್ಯೆ, ರಾಜ್ಯ ಸರ್ಕಾರವು ಪ್ರತಿ ಕ್ವಿಂಟಲ್‌ಗೆ ₹450 ಪ್ರೋತ್ಸಾಹಧನ ಘೋಷಿಸಿತು. ಇದಾದ ನಂತರ ಕ್ವಿಂಟಲ್‌ಗೆ ₹8 ಸಾವಿರ ಸಿಗುತ್ತದೆ ಎಂಬ ಆಸೆಯಿಂದ ರೈತರು ಉತ್ಸಾಹದಿಂದ ನೋಂದಣಿ ಮಾಡಿಸುತ್ತಿದ್ದಾರೆ. ಏಪ್ರಿಲ್ 2ರ ವರೆಗೆ ಖರೀದಿ ಪ್ರಕ್ರಿಯೆ ನಡೆಯಲಿದೆ.

ಈವರೆಗೆ ನೋಂದಣಿ ಮಾಡಿಕೊಂಡವರ ಪೈಕಿ ವಿಜಯಪುರ ಜಿಲ್ಲೆಯಲ್ಲಿ 10,070 ರೈತರು 1,59,685 ಕ್ವಿಂಟಲ್ ಮತ್ತು ಬೆಳಗಾವಿಯಲ್ಲಿ 964 ರೈತರು 12,953 ಕ್ವಿಂಟಲ್ ತೊಗರಿ ಮಾರಾಟ ಮಾಡಿದ್ದಾರೆ. ಆದರೆ, ತೊಗರಿ ಖರೀದಿ ಬಳಿಕ ನೀಡುವ ರಸೀದಿಯಲ್ಲಿ ರಾಜ್ಯ ಸರ್ಕಾರದ ಪ್ರೋತ್ಸಾಹಧನ ದಾಖಲಾಗುತ್ತಿಲ್ಲ.

ಸಿಗುತ್ತದೆಯೋ ಇಲ್ಲವೋ?: 'ನಾನು 22 ಕ್ವಿಂಟಲ್ ತೊಗರಿ ಬೆಳೆದಿದ್ದೇನೆ. ಕ್ವಿಂಟಲ್‌ಗೆ ₹8 ಸಾವಿರ ಸಿಗುವ ನಿರೀಕ್ಷೆಯಲ್ಲಿ ನಮ್ಮೂರಿನ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡಿದ್ದೇನೆ. ಆದರೆ, ಖರೀದಿ ರಸೀದಿಯಲ್ಲಿ ಕೇಂದ್ರ ನಿಗದಿಪಡಿಸಿದ ₹7,550 ದರವಷ್ಟೇ ಇದೆ. ರಾಜ್ಯ ಸರ್ಕಾರದ ಪ್ರೋತ್ಸಾಹಧನವನ್ನು ನಮೂದಿಸಿಲ್ಲ. ಪ್ರೋತ್ಸಾಹ ಧನ ಸಿಗುವುದೋ ಅಥವಾ ಇಲ್ಲವೋ ಎಂಬುದು ತಿಳಿಯದಾಗಿದೆ' ಎಂದು ಅಥಣಿ ತಾಲ್ಲೂಕಿನ ಕನ್ನಾಳದ ರೈತ ಬಸವಲಿಂಗ ಹಿರೇಮಠ ತಿಳಿಸಿದರು.

ಅಲ್ಲದೆ, ಖರೀದಿ ಕೇಂದ್ರಗಳಲ್ಲಿ ತೊಗರಿ ಮಾರಲು ನೋಂದಣಿಗೆ ನಿಗದಿಪಡಿಸಿದ್ದ ಅವಧಿಯು ಸೋಮವಾರಕ್ಕೆ (ಮಾರ್ಚ್ 17) ಮುಕ್ತಾಯವಾಗಲಿದೆ.

> ರಸೀದಿಯಲ್ಲಿ ಪ್ರೋತ್ಸಾಹಧನ ಉಲ್ಲೇಖವಾಗದ ಬಗ್ಗೆ ರೈತರು ಆತಂಕಪಡಬೇಕಿಲ್ಲ. ಬಿಲ್ ತಯಾರಾಗುವಾಗ ನಮೂದಾಗಿಲ್ಲ. ಸರಿಪಡಿಸಲು ಕ್ರಮಕೈಗೊಳ್ಳಲಾಗಿದೆ
>
> **ಶಿವಾನಂದ ಗೋಟೆ** ಉಪ ನಿರ್ದೇಶಕ, ಎಪಿಎಂಸಿ, ವಿಜಯಪುರ

ಆದರೆ, ತಾಂತ್ರಿಕ ಸಮಸ್ಯೆಯಿಂದ ಹಲವು ರೈತರಿಗೆ ಇನ್ನೂ ನೋಂದಣಿ ಮಾಡಿಸಲು ಆಗಿಲ್ಲ. ಒಂದೇ ಸರ್ವೆ ನಂಬರ್‌ನಲ್ಲಿ ಒಂದಕ್ಕಿಂತ ಹೆಚ್ಚು ರೈತರಿದ್ದರೆ ಎಲ್ಲರಿಗೂ ನೋಂದಣಿ ಮಾಡಲಾಗಿಲ್ಲ. ಹಾಗಾಗಿ, ನೋಂದಣಿಯನ್ನು ಮಾರ್ಚ್ 31ರ ವರೆಗೆ ವಿಸ್ತರಿಸಬೇಕು ಎಂಬುದು ರೈತರ ಒತ್ತಾಯ. 'ರೈತರು ರಸೀದಿಯಲ್ಲಿ ಪ್ರೋತ್ಸಾಹಧನ ಮೊತ್ತ ದಾಖಲಿಸದಿರುವ ಬಗ್ಗೆ ತಕರಾರು ತೆಗೆಯುತ್ತಿದ್ದಾರೆ. ಈ ವಿಷಯವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ' ಎಂದು ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಥಣಿ ಶಾಖೆಯ ವ್ಯವಸ್ಥಾಪಕ ಹನುಮಂತ ಗಳವೆ ತಿಳಿಸಿದರು.

ಪುಟಿನ್ ಷರತ್ತು: ಕದನ ವಿರಾಮಕ್ಕೆ ಭಂಗ

ಕೀವ್ (ಎಪಿ): ಕದನ ವಿರಾಮಕ್ಕೆ ಪುಟಿನ್ ಷರತ್ತುಗಳನ್ನು ವಿಧಿಸಿದ ನಂತರ, ರಷ್ಯಾ ಮತ್ತು ಉಕ್ರೇನ್ ಸೇನಾ ಪಡೆಗಳು ಶನಿವಾರ ರಾತ್ರಿಯಿಡೀ ಪರಸ್ಪರರ ನೆಲಗಳ ಮೇಲೆ ಭಾರಿ ವೈಮಾನಿಕ ದಾಳಿ ನಡೆಸಿವೆ. ಪ್ರಮುಖ ನೆಲೆಗಳನ್ನು ಗುರಿಯಾಗಿಸಿಕೊಂಡು ಪರಸ್ಪರರು ಪ್ರಯೋಗಿಸಿದ್ದ 100ಕ್ಕೂ ಹೆಚ್ಚು ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಉಭಯ ಸೇನಾಪಡೆಗಳೂ ಹೇಳಿಕೊಂಡಿವೆ.

30 ದಿನಗಳ ಕದನ ವಿರಾಮಕ್ಕೆ ಅಮೆರಿಕ ಮುಂದಿಟ್ಟಿರುವ ಪ್ರಸ್ತಾವ ಕುರಿತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಅಮೆರಿಕ ರಾಯಭಾರಿ ಸ್ಟೀವ್ ವಿಟ್ಕಾಫ್ ಅವರು ಭೇಟಿಯಾಗಿ ಚರ್ಚಿಸಿದ 24 ತಾಸುಗಳಲ್ಲಿ ಭಾರಿ ವೈಮಾನಿಕ ದಾಳಿ ನಡೆದಿದೆ.

ರಷ್ಯಾ ಪಡೆಗಳು ರಾತ್ರಿಯಿಡೀ 178 ಡ್ರೋನ್‌ಗಳು ಮತ್ತು ಎರಡು ಗುರಿ ನಿರ್ದೇಶಿತ ಕ್ಷಿಪಣಿಗಳನ್ನು ಹಾರಿಸಿವೆ. 130 ಡ್ರೋನ್‌ಗಳನ್ನು ಹೊಡೆದುರುಳಿಸಲಾಯಿತು. ಇನ್ನು 38 ಡ್ರೋನ್‌ಗಳು ಗುರಿಮುಟ್ಟಲು ವಿಫಲವಾಗಿವೆ ಎಂದು ಉಕ್ರೇನ್ ಸೇನೆ ಹೇಳಿದೆ.

ನಿಪ್ರೊಪೆಟ್ರೋವ್‌ಸ್ಕ್ ಮತ್ತು ಒಡೆಸಾ ಪ್ರದೇಶಗಳಲ್ಲಿ ಇಂಧನ ಮೂಲಸೌಕರ್ಯಗಳ ಮೇಲೆ ಡ್ರೋನ್‌ಗಳು ಮತ್ತು ಕ್ಷಿಪಣಿಗಳ ದಾಳಿಯಾಗಿದ್ದು, ಗಂಭೀರ ಹಾನಿಯಾಗಿದೆ ಎಂದು ಉಕ್ರೇನ್ ಖಾಸಗಿ ಇಂಧನ ಕಂಪನಿ ಡಿಟಿಇಕೆ ಹೇಳಿದೆ.

> ಕುರ್ಸ್ಕ್ ಪ್ರದೇಶದಲ್ಲಿ ನಮ್ಮ ಪಡೆಗಳ ಕಾರ್ಯಾಚರಣೆ ಮುಂದುವರಿದಿದೆ. ನಮ್ಮ ಪಡೆಗಳನ್ನು ರಷ್ಯಾ ಸೇನೆ ಸುತ್ತುವರಿದಿಲ್ಲ. ರಷ್ಯಾ ಮತ್ತು ಉತ್ತರ ಕೊರಿಯಾ ಪಡೆಗಳಿಗೆ ಪ್ರತಿರೋಧ ತೋರುತ್ತಿವೆ
>
> **ವೊಲೊಡಿಮಿರ್ ಝೆಲೆನ್‌ಸ್ಕಿ,** ಉಕ್ರೇನ್ ಅಧ್ಯಕ್ಷ

ಉಕ್ರೇನ್ ಹಾರಿಸಿದ ಡ್ರೋನ್‌ಗಳನ್ನು ವೋಲ್ಗೊಗ್ರಾಡ್ ಪ್ರದೇಶದಲ್ಲಿ ಹೊಡೆದುರುಳಿಸಲಾಗಿದೆ. ಕ್ರಾಸ್ನೋರ್‌ಮಿಸ್ಕಿ ನಗರದಲ್ಲಿ, ಲುಕೋಯಿಲ್ ತೈಲ ಸಂಸ್ಕರಣಾಗಾರದ ಹತ್ತಿರವೇ ಡ್ರೋನ್ ಅವಶೇಷಗಳು ಬಿದ್ದು ಬೆಂಕಿ ಹೊತ್ತಿತ್ತು ಎಂದು ರಷ್ಯಾ ಸರ್ಕಾರ ಹೇಳಿದೆ. ಯಾವುದೇ ಸಾವು-ನೋವು ಸಂಭವಿಸಿಲ್ಲ, ಹತ್ತಿರದ ವಿಮಾನ ನಿಲ್ದಾಣಗಳಲ್ಲಿ ವಿಮಾನಗಳ ಹಾರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

'ಕದನ ವಿರಾಮವನ್ನು ತಾತ್ವಿಕವಾಗಿ ಬೆಂಬಲಿಸುತ್ತೇವೆ. ಅದನ್ನು ಒಪ್ಪಿಕೊಳ್ಳುವ ಮೊದಲು ಹಲವು ವಿಷಯಗಳನ್ನು ಸ್ಪಷ್ಟಪಡಿಸಬೇಕು' ಎಂದು ಪುಟಿನ್ ಹೇಳಿದ್ದರು. ಉಕ್ರೇನ್ ಕದನ ವಿರಾಮ ಪ್ರಸ್ತಾವವನ್ನು ಈಗಾಗಲೇ ಅನುಮೋದಿಸಿದೆ.

ಆಂಧ್ರಪ್ರದೇಶದ ಬೆಳೆಗಾರರಿಗೆ ಎಂಐಎಸ್ ವರದಾನ

ಮೆಣಸಿನಕಾಯಿ ಬೆಲೆ ಚೇತರಿಕೆ

ವಿಜಯವಾಡ (ಪಿಟಿಐ): ಆಂಧ್ರಪ್ರದೇಶದಲ್ಲಿ ಜಾರಿಗೊಂಡಿರುವ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಿಂದ (ಎಂಐಎಸ್) ಒಣಮೆಣಸಿನಕಾಯಿ ಬೆಲೆಯು ಚೇತರಿಕೆ ಕಂಡಿದೆ. ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯಾಗಿದ್ದು, ಬೆಳೆಗಾರರಿಗೆ ವರದಾನವಾಗಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಕ್ವಿಂಟಲ್‌ಗೆ ₹27 ಸಾವಿರ ಇದ್ದ ದರವು ₹7 ಸಾವಿರಕ್ಕೆ ಕುಸಿದಿತ್ತು.



ಬೆಲೆ ಕುಸಿತದಿಂದ ರಾಯಲಸೀಮೆ, ಗುಂಟೂರು ಮತ್ತು ಪಲ್ನಾಡು ಭಾಗದ ಸಾವಿರಾರು ಹೆಕ್ಟೇರ್‌ನಲ್ಲಿ ಮೆಣಸಿನಕಾಯಿ ಬೆಳೆದಿದ್ದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು.

ರೈತರ ಹಿತದೃಷ್ಟಿಯಿಂದ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಬೆಲೆ ಕೊರತೆ ಪಾವತಿ ಸೌಲಭ್ಯ ಕಲ್ಪಿಸುವಂತೆ ಆಂಧ್ರಪ್ರದೇಶದ ಸರ್ಕಾರವು, ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಜಂಟಿಯಾಗಿ ಫೆಬ್ರುವರಿ 25ರಂದು ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಒಣಮೆಣಸಿನಕಾಯಿ ಖರೀದಿ ಪ್ರಕ್ರಿಯೆ ಆರಂಭಿಸಲಾಗಿದೆ.

ಪ್ರತಿ ಕ್ವಿಂಟಲ್‌ಗೆ ₹11,781 ಕನಿಷ್ಠ ಮಧ್ಯಸ್ಥಿಕೆ ಬೆಲೆ ನಿಗದಿಪಡಿಸಲಾಗಿದೆ. ರಾಜ್ಯದ ಒಟ್ಟು ಉತ್ಪಾದನೆ ಪೈಕಿ ಶೇ 25ರಷ್ಟು ಒಣಮೆಣಸಿನಕಾಯಿ ಖರೀದಿಗೆ ಕೇಂದ್ರವು ಒಪ್ಪಿದೆ.

ಎಷ್ಟು ಬೆಲೆ ಏರಿಕೆ?: ಸರ್ಕಾರ ಖರೀದಿ ಆರಂಭಿಸಿದ ಬೆನ್ನಲ್ಲೇ ಮುಕ್ತ ಮಾರುಕಟ್ಟೆಯಲ್ಲಿ ಬೆಲೆಯು ಶೇ 15ರಿಂದ ಶೇ 20ರಷ್ಟು ಹೆಚ್ಚಳವಾಗಿದೆ. ಪ್ರತಿ ಕ್ವಿಂಟಲ್‌ಗೆ ₹3 ಸಾವಿರದವರೆಗೂ ಏರಿಕೆಯಾಗಿದೆ. ಕೆಲವು ತಳಿಗಳನ್ನು ಕ್ವಿಂಟಲ್‌ಗೆ ₹14 ಸಾವಿರ ದರದಲ್ಲಿ ವ್ಯಾಪಾರಿಗಳು ಖರೀದಿಸುತ್ತಿದ್ದಾರೆ ಎಂದು ಸರ್ಕಾರದ ಅಂಕಿಅಂಶಗಳು ತಿಳಿಸಿವೆ.

ಫೆಬ್ರುವರಿ 11ರಂದು ಮುಕ್ತ ಮಾರುಕಟ್ಟೆಯಲ್ಲಿ ಒಣಮೆಣಸಿನಕಾಯಿ 334 ತಳಿ ಮತ್ತು ನಂ. 5 ತಳಿಯ ದರವು ಕ್ವಿಂಟಲ್‌ಗೆ ₹11,500 ಇತ್ತು. ಎಂಐಎಸ್ ಅಡಿ ಖರೀದಿ ಆರಂಭಗೊಂಡ ಬಳಿಕ ಈ ತಳಿಗಳ ಬೆಲೆಯು ಕ್ವಿಂಟಲ್‌ಗೆ ಕ್ರಮವಾಗಿ ₹12,500 ಮತ್ತು ₹13 ಸಾವಿರ ಆಗಿದೆ. 314 ಹೆಸರಿನ ತಳಿಯ ಬೆಲೆಯು ₹13 ಸಾವಿರದಿಂದ ₹13,900ಕ್ಕೆ ತಲುಪಿದೆ. ತೇಜ ತಳಿಯ ಮೆಣಸಿನಕಾಯಿ ಬೆಲೆಯು ₹14 ಸಾವಿರಕ್ಕೆ ಮುಟ್ಟಿದೆ.

ರೈತರು, ಕೃಷಿ ತಜ್ಞರು ಮತ್ತು ವ್ಯಾಪಾರಿಗಳೊಟ್ಟಿಗೆ ಚರ್ಚಿಸಿದ ಬಳಿಕವೇ ಸರ್ಕಾರವು ಈ ಯೋಜನೆಯನ್ನು ಜಾರಿಗೊಳಿಸಿದೆ. ಇದು ಜಾರಿಗೊಂಡ ಬಳಿಕ ಮಾರುಕಟ್ಟೆಯಲ್ಲಿ ಬೆಲೆ ಸ್ಥಿರತೆ ಕಾಣುತ್ತಿದೆ ಎಂದು ಮೂಲಗಳು ತಿಳಿಸಿವೆ.

ನೈಟ್ ಕ್ಲಬ್‌ನಲ್ಲಿ ಬೆಂಕಿ ಅವಘಡ: 59 ಸಾವು

ಸ್ಕೋಪ್ಯೆ(ನಾರ್ತ್ ಮೆಸಿಡೋನಿಯಾ) (ಎಪಿ): ಉತ್ತರ ಮೆಸಿಡೋನಿಯಾದ ಪೂರ್ವ ಪಟ್ಟಣ ಕೊಕಾನಿಯದ ನೈಟ್‌ಕ್ಲಬ್‌ನಲ್ಲಿ ಭಾನುವಾರ ನಸುಕಿನಲ್ಲಿ ಸಂಭವಿಸಿದ ಭಾರಿ ಬೆಂಕಿ ಅವಘಡದಲ್ಲಿ 59 ಜನರು ಮೃತಪಟ್ಟಿದ್ದು, 100ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

ಪಲ್ಸ್ ನೈಟ್‌ಕ್ಲಬ್‌ನಲ್ಲಿ ಪಾಪ್ ಸಂಗೀತ ಕಛೇರಿ ನಡೆಯುತ್ತಿತ್ತು. ನಸುಕಿನ 2.35ರ ಸುಮಾರಿಗೆ ಬಾಣಬಿರುಸುಗಳಿಂದ ಕ್ಲಬ್ ಛಾವಣಿಗೆ ಬೆಂಕಿ ಹೊತ್ತಿಕೊಂಡು, ಈ ಅವಘಡ ಸಂಭವಿಸಿದೆ ಎಂದು ಗೃಹ ಸಚಿವ ಪಾಂಚೆ ತೋಷ್ಕೊವ್‌ಸ್ಕಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹಲವು ಜನರಿಗೆ ಸುಟ್ಟ ಗಾಯಗಳಾಗಿವೆ. 118 ಜನರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಆರೋಗ್ಯ ಸಚಿವ ಅರ್ಬೆನ್ ತಾರವಾರಿ ಹೇಳಿದ್ದಾರೆ.

ಅಮೆರಿಕ: ಚಂಡಮಾರುತಕ್ಕೆ 32 ಬಲಿ

ಒಕ್ಲಹಾಮಾ ಸಿಟಿ (ಅಮೆರಿಕ) (ಎಪಿ): ಅಮೆರಿಕದ ಹಲವು ರಾಜ್ಯಗಳಲ್ಲಿ ಕಳೆದ ಎರಡು ದಿನಗಳಲ್ಲಿ ಬೀಸಿದ ಚಂಡಮಾರುತವು ಹಾನಿ ಉಂಟುಮಾಡಿದ್ದು, 32 ಮಂದಿ ಬಲಿಯಾಗಿದ್ದಾರೆ.

ಶುಕ್ರವಾರ ಬೀಸಿದ ಗಾಳಿಯ ರಭಸಕ್ಕೆ ಶೆರ್ಮನ್ ಕೌಂಟಿಯ ಹೆದ್ದಾರಿಯಲ್ಲಿ ಹಲವು ವಾಹನಗಳು ಪಲ್ಟಿಯಾಗಿ ಎಂಟು ಮಂದಿ ಮೃತಪಟ್ಟಿದ್ದಾರೆ. ಟ್ರೇಲರ್ ಟ್ರಕ್‌ಗಳೂ ಒಳಗೊಂಡಂತೆ ಸುಮಾರು 50 ವಾಹನಗಳು ಮಗುಚಿ ಬಿದ್ದಿರುವುದಾಗಿ ಕನ್ಸಾಸ್ ಹೈವೇ ಗಸ್ತು ತಂಡ ತಿಳಿಸಿದೆ.

ಮಿಸ್ಸೋರಿಯಲ್ಲಿ ಅತಿಹೆಚ್ಚು ಪ್ರಾಣ ಹಾನಿ ಸಂಭವಿಸಿದ್ದು, 12 ಮಂದಿ ಮೃತಪಟ್ಟಿದ್ದಾರೆ. ಇಲ್ಲಿ ನೂರಾರು ಮನೆಗಳು ಉರುಳಿವೆ.

ಮಿಸಿಸಿಪ್ಪಿ ರಾಜ್ಯದ ಮೂರು ಕೌಂಟಿಗಳಲ್ಲಿ ಆರು ಸಾವು ವರದಿಯಾಗಿವೆ. ಕೆಲವು ರಾಜ್ಯಗಳಲ್ಲಿ ದೂಳಿನ ಬಿರುಗಾಳಿ ಬೀಸಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ಹವಾಮಾನ ವೈಪರೀತ್ಯವು ಸುಮಾರು 10 ಕೋಟಿಗೂ ಹೆಚ್ಚು ಜನರು ವಾಸಿಸುವ ಪ್ರದೇಶಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಮುನ್ಸೂಚನೆ ನೀಡಲಾಗಿದೆ. ಕೆನಡಾದ ಗಡಿಯಿಂದ ಟೆಕ್ಸಾಸ್‌ವರೆಗೆ ಗಂಟೆಗೆ 130 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಪಾದಯಾತ್ರೆ ಆರಂಭಿಸಿದ ಕನ್ಹಯ್ಯ

ಪ್ರಜಾವಾಣಿ ವಾರ್ತೆ



ಕನ್ಹಯ್ಯ

ಪಟ್ನಾ: ಕಾಂಗ್ರೆಸ್ ಯುವನಾಯಕ ಕನ್ಹಯ್ಯ ಕುಮಾರ್ ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯಿಂದ ಭಾನುವಾರ ಪಾದಯಾತ್ರೆ ಆರಂಭಿಸಿದ್ದಾರೆ.

'ಪಲಾಯನ್ ರೋಕೊ, ನೌಕರಿ ದೋ' (ವಲಸೆ ತಡೆಯಿರಿ, ಉದ್ಯೋಗ ನೀಡಿ) ಎಂಬ ಹೆಸರಿನಲ್ಲಿ, ಚಂಪಾರಣ್ ಭಿತಿಹರ್ವ ಆಶ್ರಮದಿಂದ ಆರಂಭಗೊಂಡಿರುವ ಪಾದಯಾತ್ರೆ ಏ. 15ರಂದು ಪಟ್ನಾದಲ್ಲಿ ಮುಕ್ತಾಯಗೊಳ್ಳಲಿದೆ.

1917ರಲ್ಲಿ ಗಾಂಧೀಜಿ ಅವರು ಚಂಪಾರಣ್ ಸತ್ಯಾಗ್ರಹ ಆರಂಭಿಸಿದ ಸ್ಥಳದಿಂದಲೇ ಕನ್ಹಯ್ಯ ಪಾದಯಾತ್ರೆ ಆರಂಭಿಸಿದ್ದಾರೆ. ಇದರಲ್ಲಿ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಭಾಗವಹಿಸುವ ಸಾಧ್ಯತೆಗಳಿವೆ.

'ನಿಮ್ಮ ಪ್ರೀತಿ ಪಾತ್ರರಿಗೆ ನೀವು ಬರೆಯುವ ಪ್ರೇಮ ಪತ್ರಗಳು ಸೋರಿಕೆ ಆಗುವುದಿಲ್ಲ. ಆದರೆ ನಿತೀಶ್ ಆಡಳಿತದಲ್ಲಿ ಎಲ್ಲ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗುತ್ತವೆ. ಇದರಿಂದ ನೇಮಕಾತಿ ವಿಳಂಬವಾಗುತ್ತಿದೆ ಮತ್ತು ಯುವಕರು ಖಿನ್ನತೆಗೆ ಒಳಗಾಗಿ ವಲಸೆ ಹೋಗುವುದು ಹೆಚ್ಚಾಗುತ್ತಿದೆ' ಎಂದು ಕನ್ಹಯ್ಯ ಕುಮಾರ್ ಆರೋಪಿಸಿದರು.

ಬಿಹಾರದಲ್ಲಿ ಈ ವರ್ಷ ವಿಧಾನಸಭಾ ಚುನಾವಣೆ ನಡೆಯಲಿದ್ದು, ಆರ್‌ಜೆಡಿಯೊಂದಿಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆ ಇದೆ.

ಪಾಡ್‌ಕಾಸ್ಟ್: ಗುಜರಾತ್ ಗಲಭೆ, ಆರ್‌ಎಸ್‌ಎಸ್ ಜತೆ ನಂಟು ಕುರಿತು ಮಾತು

'ಭಾರಿ ಸಿದ್ಧತೆಯೊಂದಿಗೆ ಟ್ರಂಪ್ ಹೆಜ್ಜೆ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಎರಡನೇ ಅವಧಿಗೆ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಡೊನಾಲ್ಡ್ ಟ್ರಂಪ್ ಅವರಲ್ಲಿ ಭಾರಿ ಸಿದ್ಧತೆ ಕಾಣುತ್ತಿದೆ. ತಮ್ಮ ಗುರಿ ಸಾಧನೆಗೆ ಅಗತ್ಯವಿರುವ ನೀಲನಕ್ಷೆ, ಸ್ಪಷ್ಟತೆಯೊಂದಿಗೆ ಮುಂದಡಿ ಇಡುತ್ತಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.

'ನನ್ನ ಮತ್ತು ಟ್ರಂಪ್ ನಡುವಿನ ಸ್ನೇಹಕ್ಕೆ ಪರಸ್ಪರರಲ್ಲಿನ ನಂಬಿಕೆಯೇ ಆಧಾರ. ರಾಷ್ಟ್ರದ ಹಿತಾಸಕ್ತಿಗಳೇ ಎಲ್ಲಕ್ಕಿಂತ ಮಿಗಿಲು ಎಂಬುದರಲ್ಲಿಯೇ ನಮ್ಮಿಬ್ಬರಿಗೆ ವಿಶ್ವಾಸ' ಎಂದೂ ಹೇಳಿದ್ದಾರೆ.

ಕೃತಕ ಬುದ್ಧಿಮತ್ತೆ (ಎ.ಐ) ಸಂಶೋಧಕ ಹಾಗೂ ವಿಜ್ಞಾನಿ ಲೆಕ್ಸ್ ಫ್ರಿಡ್ಮನ್ ಅವರ ಪಾಡ್‌ಕಾಸ್ಟ್‌ಗೆ ನೀಡಿರುವ ಸಂದರ್ಶನದಲ್ಲಿ ಅವರು ಹಲವು ವಿಷಯಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

'ಟ್ರಂಪ್ ಧೈರ್ಯವಂತ ಹಾಗೂ ಅಮೆರಿಕದ ಒಳಿತಿಗಾಗಿ ಹಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಅವರೊಂದಿಗೆ ಬಲಿಷ್ಠ ತಂಡ ಇದೆ. ಅವರ ಮುನ್ನೋಟಗಳನ್ನು ಅನುಷ್ಠಾನಗೊಳಿಸುವ ಸಾಮರ್ಥ್ಯ ಈ ತಂಡ ಹೊಂದಿದೆ' ಎಂದು ಮೋದಿ ಹೇಳಿದ್ದಾರೆ.

ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ರಾಷ್ಟ್ರೀಯ ಗುಪ್ತಚರ ಸಂಸ್ಥೆ ನಿರ್ದೇಶಕಿ ತುಳಸಿ ಗಬಾರ್ಡ್, ಉದ್ಯಮಿ ಎಲಾನ್ ಮಸ್ಕ್ ಹಾಗೂ ವಿವೇಕ್ ರಾಮಸ್ವಾಮಿ ಅವರೊಂದಿಗಿನ ಭೇಟಿಯನ್ನು ಕೂಡ ಅವರು ಪ್ರಸ್ತಾಪಿಸಿದ್ದಾರೆ.

ಪ್ರಧಾನಿ ಮೋದಿ ಹೇಳಿದ್ದು...

ಗುಜರಾತ್ ಗಲಭೆಗಳು

- ಗುಜರಾತ್‌ನಲ್ಲಿ 2002ರಲ್ಲಿ ಸಂಭವಿಸಿದ ಗೋಧ್ರೋತ್ತರ ಗಲಭೆಗಳ ಕುರಿತು ನನ್ನ ರಾಜಕೀಯ ವಿರೋಧಿಗಳು ಸುಳ್ಳು ಸಂಕಥನ ಸೃಷ್ಟಿಸಿ, ವ್ಯಾಪಕವಾಗಿ ಹಬ್ಬಿಸಿದ್ದರು. ನನ್ನ ತೇಜೋವಧೆ ಮಾಡುವ ಉದ್ದೇಶದಿಂದ ಅವರು ಹೀಗೆ ಮಾಡಿದ್ದರು
- ಗುಜರಾತ್‌ನಲ್ಲಿ ಸಂಭವಿಸಿದ್ದ ದೊಡ್ಡ ಪ್ರಮಾಣದ ಗಲಭೆಗಳವು ಎಂಬ ಗ್ರಹಿಕೆ ಕೂಡ ತಪ್ಪು ಮಾಹಿತಿ ಪ್ರಚುರಪಡಿಸುವ ಯತ್ನವಾಗಿತ್ತು
- 2002ಕ್ಕೂ ಮೊದಲು ಗುಜರಾತ್‌ನಲ್ಲಿ 250ಕ್ಕೂ ಹೆಚ್ಚು ಗಲಭೆಗಳು ಸಂಭವಿಸಿದ್ದವು. ಕೋಮು ಹಿಂಸಾಚಾರ ಮೇಲಿಂದ ಮೇಲೆ ಸಂಭವಿಸುತ್ತಿದ್ದವು. ಆದರೆ, 2002ರ ನಂತರ ರಾಜ್ಯದಲ್ಲಿ ಇಂತಹ ಒಂದೇ ಒಂದು ಗಲಭೆ ಸಂಭವಿಸಿಲ್ಲ

ಆರ್‌ಎಸ್‌ಎಸ್ ಜೊತೆ ನಂಟು

- ರಾಷ್ಟ್ರೀಯ ಸ್ವಯಂ ಸೇವಕ ಸಂಘದೊಂದಿಗೆ (ಆರ್‌ಎಸ್‌ಎಸ್) ನನಗೆ ಆಳ ನಂಟಿದೆ. ಬದುಕಿನ ಉದ್ದೇಶ ಹಾಗೂ ನಿಸ್ವಾರ್ಥ ಸೇವೆಯಂತಹ ಮೌಲ್ಯಗಳನ್ನು ಆರ್‌ಎಸ್‌ಎಸ್ ನನಗೆ ಕಲಿಸಿಕೊಟ್ಟಿದೆ
- ಸಣ್ಣ ವಯಸ್ಸಿನಲ್ಲಿಯೇ ನಾನು ಆರ್‌ಎಸ್‌ಎಸ್ ಶಾಖೆಗಳಿಗೆ ಹೋಗುತ್ತಿದ್ದೆ. ಅಲ್ಲಿ ಹಾಡುತ್ತಿದ್ದ ದೇಶಭಕ್ತಿ ಗೀತೆಗಳು ನನ್ನ ಮೇಲೆ ಅಗಾಧ ಪ್ರಭಾವ ಬೀರಿದ್ದವು
- ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಆರ್‌ಎಸ್‌ಎಸ್ ಅದ್ಭುತ ಸೇವೆ ಮಾಡುತ್ತಿದೆ
- 'ಜಗತ್ತಿನ ಕಾರ್ಮಿಕರೇ ಒಂದಾಗಿ' ಎಂದು ಎಡಪಂಥೀಯ ಸಂಘಟನೆಗಳು ಹೇಳಿದರೆ, 'ಕಾರ್ಮಿಕರೇ, ಜಗತ್ತನ್ನು ಒಂದುಗೂಡಿಸಿ' ಎಂಬುದು ಆರ್‌ಎಸ್‌ಎಸ್‌ನ ಧ್ಯೇಯವಾಕ್ಯ

'ಮಹಾತ್ಮ ಗಾಂಧಿ ಮಹಾನ್ ನಾಯಕ'

- ಮಹಾತ್ಮ ಗಾಂಧೀಜಿಗೆ ಜನರ ಶಕ್ತಿಯ ಅರಿವಿತ್ತು. ಅವರು, ಸ್ವಾತಂತ್ರ್ಯ ಸಂಗ್ರಾಮವನ್ನು ಜನಾಂದೋಲನವಾಗಿ ಪರಿವರ್ತಿಸಿದರು
- ಗಾಂಧೀಜಿ 20ನೇ ಶತಮಾನದ ದೊಡ್ಡ ನಾಯಕರು ಮಾತ್ರವಲ್ಲ, ಬರುವ ಶತಮಾನಗಳ ನಾಯಕರೂ ಆಗಿದ್ದಾರೆ
- ಜನರ ಪಾಲ್ಗೊಳ್ಳುವಿಕೆಗೆ ಅವರು ಒತ್ತು ನೀಡುತ್ತಿದ್ದರು. ಹೀಗಾಗಿ ಅವರು ಕೈಗೊಂಡ ಯಾವುದೇ ಕಾರ್ಯಕ್ರಮವಾದರೂ ಭಾರಿ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡಲು ಶ್ರಮಿಸುತ್ತಿದ್ದರು.

ಪಾಕ್ ಜೊತೆ ಸಂಬಂಧ

- ಪಾಕಿಸ್ತಾನ ಜೊತೆಗಿನ ಸಂಬಂಧ ಸುಧಾರಿಸಿ, ಶಾಂತಿ ಸ್ಥಾಪನೆಗೆ ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾಗಿವೆ. ಪ್ರತಿ ಬಾರಿಯೂ ಭಾರತಕ್ಕೆ ಪಾಕಿಸ್ತಾನ ವಂಚನೆ ಮಾಡಿದೆ, ಹಗೆತನ ಸಾಧಿಸಿದೆ
- ಸಂಕಷ್ಟ, ಅಶಾಂತಿ ಹಾಗೂ ನಿರಂತರ ಭಯೋತ್ಪಾದಕ ಕೃತ್ಯಗಳಿಂದ ಪಾಕಿಸ್ತಾನದ ಜನತೆ ಕೂಡ ರೋಸಿ ಹೋಗಿದ್ದು, ಅವರು ಕೂಡ ದೇಶದಲ್ಲಿ ಶಾಂತಿ ನೆಲಸುವುದನ್ನು ಬಯಸುತ್ತಿರಬಹುದು

'ಚೀನಾ ಜತೆಗಿನ ಸ್ಪರ್ಧೆ ಸಂಘರ್ಷವಾಗಬಾರದು'

- ಭಾರತ ಮತ್ತು ಚೀನಾ ನಡುವೆ ಭಿನ್ನಾಭಿಪ್ರಾಯಗಳಿರುವುದು ಸಹಜ. ಎರಡು ನೆರೆ ರಾಷ್ಟ್ರಗಳ ಹಿತಾಸಕ್ತಿಗಳ ರಕ್ಷಣೆ ಮತ್ತು ಜಾಗತಿಕ ಸ್ಥಿರತೆ ದೃಷ್ಟಿಯಿಂದ ಉಭಯ ದೇಶಗಳ ನಡುವೆ ಗಟ್ಟಿಯಾದ ಸಹಕಾರ ಇದೆ
- ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ, ಸಂಘರ್ಷಕ್ಕೆ ಮೊದಲು ಇದ್ದ ಸ್ಥಿತಿ ನಿರ್ಮಾಣಕ್ಕೆ ಎರಡೂ ದೇಶಗಳು ಶ್ರಮಿಸುತ್ತಿವೆ

'ಚುನಾವಣಾ ಆಯೋಗ ಕಾರ್ಯವೈಖರಿ ಅದ್ಭುತ'

- ಭಾರತದ ಚುನಾವಣಾ ಆಯೋಗ ಸ್ವತಂತ್ರವಾಗಿ ಹಾಗೂ ತಟಸ್ಥ ಧೋರಣೆಯೊಂದಿಗೆ ಕಾರ್ಯ ನಿರ್ವಹಿಸುತ್ತದೆ
- ವಿಶ್ವದ ದೊಡ್ಡ ಪ್ರಜಾಪ್ರಭುತ್ವದ ಚುನಾವಣೆಗಳನ್ನು ನಿರ್ವಹಿಸುವ ಆಯೋಗದ ಕಾರ್ಯವೈಖರಿ ಕುರಿತು ವಿಶ್ವ ಸಮುದಾಯ ಅಧ್ಯಯನ ಮಾಡುವುದು ಅಗತ್ಯ



ಪಾಡ್‌ಕಾಸ್ಟ್‌ಗಾಗಿ ಸಂದರ್ಶನದಲ್ಲಿ ಪಾಲ್ಗೊಳ್ಳಲು ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಲೆಕ್ಸ್ ಫ್ರಿಡ್ಮನ್ ಭಾನುವಾರ ಸ್ವಾಗತಿಸಿದರು —ಪಿಟಿಐ ಚಿತ್ರ

ಎಲ್‌ಇಟಿ ಕಮಾಂಡರ್ ಹತ್ಯೆ

ನವದೆಹಲಿ (ಪಿಟಿಐ): ಭಾರತಕ್ಕೆ ಬೇಕಾಗಿದ್ದ ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಯ ಕಮಾಂಡರ್‌ನನ್ನು ಪಾಕಿಸ್ತಾನದಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

ಎಲ್‌ಇಟಿಯ ಉನ್ನತ ಕಮಾಂಡರ್ ಆಗಿದ್ದ ಜಿಯಾ–ಉರ್– ರೆಹಮಾನ್ ಅಲಿಯಾಸ್ ನದೀಮ್‌ನನ್ನು ಶನಿವಾರ ಸಂಜೆ ಪಾಕಿಸ್ತಾನದ ಪಂಜಾಬ್‌ನ ಝೇಲಮ್ ಪ್ರದೇಶದಲ್ಲಿ ಹತ್ಯೆ ಮಾಡಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಜಮ್ಮು– ಕಾಶ್ಮೀರದಲ್ಲಿ ನಡೆದ ಹಲವಾರು ಭಯೋತ್ಪಾದಕ ದಾಳಿಗಳಲ್ಲಿ ಈತನ ಕೈವಾಡವಿತ್ತು.

ಬಂದೂಕುಧಾರಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ರೆಹಮಾನ್‌ನ ಭದ್ರತಾ ಸಿಬ್ಬಂದಿಯೂ ಹತ್ಯೆಯಾಗಿದ್ದಾರೆ.

ಎಲ್‌ಇಟಿ ಸಂಸ್ಥಾಪಕ ಹಾಗೂ ಮುಂಬೈ ಮೇಲೆ ನಡೆಸಿದ ಭಯೋತ್ಪಾದಕ ದಾಳಿಯ ಸಂಚುಕೋರ ಹಫೀಜ್ ಸಯೀದ್‌ನ ನಿಕಟವರ್ತಿಗಳಲ್ಲಿ ಈತನೂ ಒಬ್ಬನಾಗಿದ್ದ ಎನ್ನಲಾಗಿದೆ.

ಜಮ್ಮು– ಕಾಶ್ಮೀರದ ಪೂಂಛ್, ರಜೌರಿ ಭಾಗಗಳಲ್ಲಿ ಭಯೋತ್ಪಾದನಾ ಚಟುವಟಿಕೆ ನಡೆಸಲು ತಂತ್ರ ರೂಪಿಸುತ್ತಿದ್ದ ಈತ, ಎಲ್‌ಇಟಿಯ ಚಟುವಟಿಕೆಗಳನ್ನು ಈ ಪ್ರದೇಶದಲ್ಲಿ ವಿಸ್ತರಿಸಿದ್ದ.

ಉತ್ತರಾಖಂಡ ಸಚಿವ ಅಗರವಾಲ್ ರಾಜೀನಾಮೆ

ಡೆಹ್ರಾಡೂನ್ (ಉತ್ತರಾಖಂಡ)(ಪಿಟಿಐ): ಉತ್ತರಾಖಂಡದ ಪರ್ವತ ಪ್ರದೇಶಗಳ ಕುರಿತು ತಾವು ನೀಡಿದ್ದ ಹೇಳಿಕೆ ವಿವಾದದ ಸ್ವರೂಪ ಪಡೆದು ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ಹಣಕಾಸು ಸಚಿವ ಪ್ರೇಮಚಂದ್ ಅಗರವಾಲ್ ತಮ್ಮ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದ್ದಾರೆ.

ಮುಖ್ಯಮಂತ್ರಿ ಪುಷ್ಕರ ಸಿಂಗ್ ಧಾಮಿ ಅವರ ಗೃಹ ಕಚೇರಿಗೆ ತೆರಳಿ, ಅಗರವಾಲ್ ಅವರು ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಫೆಬ್ರುವರಿಯಲ್ಲಿ ನಡೆದ ಬಜೆಟ್ ಅಧಿವೇಶನದಲ್ಲಿ ಮಾತನಾಡುವ ವೇಳೆ, ಕಾಂಗ್ರೆಸ್ ಶಾಸಕ ಮದನ್ ಬಿಷ್ಟ್ ಅವರು ಸಚಿವ ಅಗರವಾಲ್ ವಿರುದ್ಧ ಟೀಕೆ ಮಾಡಿದ್ದರು.

ಬಿಷ್ಟ್ ಮಾತಿಗೆ ಆಕ್ರೋಶಗೊಂಡು ಪ್ರತಿಕ್ರಿಯೆ ನೀಡಿದ್ದ ಅಗರವಾಲ್, 'ಪರ್ವತ ಪ್ರದೇಶಗಳ ಜನರಿಗಾಗಿ ಉತ್ತರಾಖಂಡ ರಾಜ್ಯ ರಚಿಸಲಾಗಿದೆಯೇ? ಮುಂದೊಂದು ದಿನ ಪರ್ವತ ಪ್ರದೇಶ ಹಾಗೂ ಬಯಲು ಸೀಮೆ ಎಂಬುದಾಗಿ ಈ ರಾಜ್ಯ ಇಬ್ಭಾಗವಾಗುವುದನ್ನು ನೋಡುವುದಕ್ಕಾಗಿ ನಾನು ಹೋರಾಟ ನಡೆಸಿಲ್ಲ' ಎಂದಿದ್ದರು.

ಈ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಅದರಲ್ಲೂ, ರಾಜ್ಯದ ಪರ್ವತ ಪ್ರದೇಶಗಳ ಜನರು ಅಗರವಾಲ್ ವಿರುದ್ಧ ಪ್ರತಿಭಟನೆ ನಡೆಸಿದ್ದರು.

ನಂತರ, ಅಗರವಾಲ್ ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ್ದರು. ಪಕ್ಷದ ರಾಜ್ಯ ಘಟಕ ಕೂಡ ಅಗರವಾಲ್ ಅವರಿಗೆ ಎಚ್ಚರಿಕೆ ನೀಡಿತ್ತಲ್ಲದೇ, ಸಂಯಮ ಕಾಯ್ದುಕೊಳ್ಳುವಂತೆ ಸೂಚಿಸಿತ್ತು.

₹75 ಕೋಟಿ ಮೌಲ್ಯದ ಡ್ರಗ್ಸ್ ವಶ

ಒಂದನೇ ಪುಟದಿಂದ...

'ಮಾರ್ಚ್ 14ರಂದು ಅವರು ಬೆಂಗಳೂರಿಗೆ ಬರುತ್ತಿರುವುದು ಗೊತ್ತಾಯಿತು. ವಿಮಾನ ನಿಲ್ದಾಣದಿಂದ ಹೊರಬಂದ ಅವರನ್ನು ಹಿಂಬಾಲಿಸಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಹತ್ತಿರದ ನೀಲಾದ್ರಿ ನಗರ ಎಂಬಲ್ಲಿ ವಶಕ್ಕೆ ಪಡೆದೆವು. ಅವರು ಎರಡು ಟ್ರಾಲಿ ಟ್ರಾವೆಲ್ ಬ್ಯಾಗ್‌ನಲ್ಲಿ ಸಾಗಿಸಿದ್ದ 37.878 ಕೆ.ಜಿ ಎಂಡಿಎಂಎ, ನಾಲ್ಕು ಮೊಬೈಲ್ ಫೋನುಗಳು, ಎರಡು ಪಾಸ್ ಪೋರ್ಟ್, ₹18,460 ನಗದು ಮತ್ತಿತರ ಸೊತ್ತು ವಶಪಡಿಸಿಕೊಂಡಿದ್ದೇವೆ' ಎಂದು ಮಾಹಿತಿ ನೀಡಿದರು.

'ಆರೋಪಿಗಳು ರಾತ್ರಿ ವೇಳೆ ವಿಮಾನದಲ್ಲಿ ಬಂದು ಬಾಡಿಗೆ ಟ್ಯಾಕ್ಸಿಯಲ್ಲಿ ಪ್ರಯಾಣಿಸಿ ಬೆಂಗಳೂರು ನಗರದ ಕೆ.ಆರ್. ಪುರ, ಹೊಸಕೋಟೆ ಮೊದಲಾದ ಕಡೆ, ಪೆಡ್ಲರ್‌ಗಳಾದ ನೈಜೀರಿಯನ್ ಪ್ರಜೆಗಳಿಗೆ ಎಂಡಿಎಂಎ ಪೂರೈಸುತ್ತಿದ್ದರು. 24 ಗಂಟೆಯ ಒಳಗೆ ಅವರು ದೆಹಲಿಗೆ ಮರಳುತ್ತಿದ್ದರು. ಅವರಿಬ್ಬರೂ ಬಳಸುತ್ತಿದ್ದ ಪಾಸ್‌ಪೋರ್ಟ್ ನಕಲಿ. ಅವರು ಯಾವೆಲ್ಲ ಸ್ಥಳೀಯ ಪೆಡ್ಲರ್‌ಗಳಿಗೆ ಮಾದಕ ಪದಾರ್ಥ ಪೂರೈಸುತ್ತಿದ್ದಾರೆ ಎಂಬುದನ್ನು ಪತ್ತೆಹಚ್ಚಲು ಯತ್ನಿಸಿದ್ದೆವು. ಆದರೆ ಫಲ ಸಿಕ್ಕಿಲ್ಲ' ಎಂದರು.

'ವಿಮಾನ ನಿಲ್ದಾಣದಲ್ಲಿ ಭದ್ರತಾ ತಪಾಸಣೆಯ ವೇಳೆ ಸಿಕ್ಕಿ ಬೀಳದೆ ಹೇಗೆ ತಪ್ಪಿಸಿಕೊಳ್ಳುತ್ತಿದ್ದರು ಎಂಬ ಬಗ್ಗೆ ಹಾಗೂ ಪ್ರತಿ ಬಾರಿ ಬೆಂಗಳೂರಿಗೆ ಬಂದಾಗ ಎಷ್ಟು ಮಾದಕ ಪದಾರ್ಥ ತಂದಿದ್ದರು. ಅದನ್ನು ಯಾರಿಗೆ ಮಾರಾಟ ಮಾಡಿದ್ದರು ಎಂಬ ಬಗ್ಗೆ ಇನ್ನಷ್ಟೇ ತಿಳಿಯಬೇಕಿದೆ' ಎಂದರು.

ಸಿಸಿಬಿ ಎಸಿಪಿ ಮನೋಜ್ ನಾಯ್ಕ್ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್ ರಫೀಕ್ ಕೆ.ಎಂ., ಪಿಎಸ್‌ಐ ಸುದೀಪ್ ಎಂ.ವಿ, ಶರಣಪ್ಪ ಭಂಡಾರಿ, ನರೇಂದ್ರ, ಎಎಸ್‌ಐ ಮೋಹನ್ ಕೆ.ವಿ., ರಾಮಪೂಜಾರಿ, ಶೀನಪ್ಪ, ಸುಜನ್ ಶೆಟ್ಟಿ ಮತ್ತು ಸಿಬ್ಬಂದಿ ಉತ್ತಮ ಕೆಲಸ ಮಾಡಿದ್ದಾರೆ ಎಂದು ಕಮಿಷನರ್ ಮೆಚ್ಚುಗೆ ಸೂಚಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿಸಿಪಿ (ಕಾನೂನು ಸುವ್ಯವಸ್ಥೆ) ಸಿದ್ಧಾರ್ಥ ಗೋಯಲ್, ಡಿಸಿಪಿ (ಅಪರಾಧ) ಕೆ.ರವಿಶಂಕರ್, ಸಿಸಿಬಿ ಎಸಿಪಿ ಮನೋಜ್ ನಾಯ್ಕ್ ಭಾಗವಹಿಸಿದ್ದರು.



ಆರೋಪಿಗಳಿಂದ ವಶಪಡಿಸಿಕೊಂಡ ಎಂಡಿಎಂಎ ಜೊತೆ ಎಸಿಪಿ ಮನೋಜ್ ನಾಯಕ್, ಡಿಸಿಪಿ ಸಿದ್ಧಾರ್ಥ ಗೋಯಲ್, ಕಮಿಷನರ್ ಅನುಪಮ್ ಅಗ್ರವಾಲ್, ಡಿಸಿಪಿ ಕೆ.ರವಿಶಂಕರ್, ಸಿಸಿಬಿ ಇನ್‌ಸ್ಪೆಕ್ಟರ್ ರಫೀಕ್ ಕೆ.ಎಂ. ಮತ್ತು ಪೊಲೀಸ್ ಸಿಬ್ಬಂದಿ

ನೂತನ ವಲಸೆ ಮಸೂದೆ ರೂಪಿಸಿದ ಕೇಂದ್ರ

ಕೇಂದ್ರ ಸರ್ಕಾರವು 'ವಲಸೆ ಮತ್ತು ವಿದೇಶಿಯರ ಮಸೂದೆ, 2025' ಮಸೂದೆ ಅನ್ನು ಸಿದ್ಧಪಡಿಸಿದೆ. 1920ರ 'ಪಾಸ್‌ಪೋರ್ಟ್ (ಭಾರತಕ್ಕೆ ಪ್ರವೇಶ) ಕಾಯ್ದೆ', 1939ರ 'ವಿದೇಶಿಯರ ನೋಂದಣಿ ಕಾಯ್ದೆ', 1946ರ 'ವಿದೇಶಿಯರ ಕಾಯ್ದೆ' ಮತ್ತು 2000ರ 'ವಲಸೆ (ಸಂಚಾರ ಸಾಧನ) ಕಾಯ್ದೆ'ಗಳ ಬದಲಿಗೆ ಈ ಮಸೂದೆಯನ್ನು ಕೇಂದ್ರ ರೂಪಿಸಿದೆ. 'ನಾಲ್ಕೂ ಕಾಯ್ದೆಗಳಲ್ಲಿ ಇರುವ ಅಂಶಗಳನ್ನು ಈ ಮಸೂದೆ ಒಳಗೊಂಡಿದೆ. ನಿಯಮಗಳನ್ನು ಸರಳಗೊಳಿಸಲಾಗಿದೆ' ಎಂದು ಸರ್ಕಾರ ಹೇಳಿದೆ. ಕೆಲವು ನಿಯಮಗಳಲ್ಲಿ 'ನಿರ್ದಿಷ್ಟ ವರ್ಗದ ವಿದೇಶಿಯರು' ಎಂಬ ಹೊಸ ವ್ಯಾಖ್ಯಾನವನ್ನು ಮಸೂದೆಯಲ್ಲಿ ಮಾಡಲಾಗಿದೆ. ಶಿಕ್ಷೆ ಮತ್ತು ದಂಡದ ಪ್ರಮಾಣವನ್ನು ಹೆಚ್ಚಿಸಲಾಗಿದೆ.

ಕೆಲವು ಮುಖ್ಯಾಂಶಗಳು

ಸೆಕ್ಷನ್ 5: ವಲಸೆ ಬ್ಯೂರೊ ಸ್ಥಾಪನೆ

ಸೆಕ್ಷನ್ 7: ನಿರ್ದಿಷ್ಟ ವರ್ಗದ ವಿದೇಶಿಯರು ಭಾರತವನ್ನು ಪ್ರವೇಶಿಸದಂತೆ ತಡೆಯುವ ಅಥವಾ ಅಂಥವರ ಪ್ರವೇಶವನ್ನು ನಿಷೇಧಿಸುವ ಆದೇಶವನ್ನು ಕೇಂದ್ರ ಸರ್ಕಾರ ಹೊರಡಿಸಬಹುದು. ಇಂಥ ವಿದೇಶಿಯರು ಯಾವಾಗ ಭಾರತವನ್ನು ಬಿಟ್ಟು ಹೊರಡಬೇಕು ಎಂಬುದನ್ನು ಸರ್ಕಾರವೇ ನಿರ್ಧರಿಸಲಿದೆ.

- ನಿರ್ದಿಷ್ಟ ವರ್ಗದ ವಿದೇಶಿಯರಿಗೆ ಕೆಲವು ನಿರ್ದಿಷ್ಟ ಸಮಯದಲ್ಲಿ ಕೆಲವು ನಿರ್ದಿಷ್ಟ ಸೂಚನೆಗಳನ್ನು ಕೇಂದ್ರ ನೀಡಬಹುದು. ಇಂಥವರು ಸರ್ಕಾರವು ಕೇಳಿದ ವಿವರಗಳನ್ನು ನೀಡಬೇಕಾಗುತ್ತದೆ. ಅಗತ್ಯ ಬಿದ್ದರೆ ವಿಚಾರಣೆಗೆ ಒಳಗಾಗಬೇಕಾಗುತ್ತದೆ. ನಿರ್ದಿಷ್ಟ ಸ್ಥಳದಲ್ಲಿಯೇ ವಾಸ ಮಾಡುವಂತೆ ಸರ್ಕಾರ ಸೂಚಿಸಬಹುದು. ಅವರ ಸಂಚಾರಕ್ಕೂ ನಿರ್ಬಂಧ ಹೇರಬಹುದು.
- ಇವರು ತಮ್ಮ ಬಯೋಮೆಟ್ರಿಕ್ ವಿವರಗಳು, ಛಾಯಾಚಿತ್ರ, ಕೈಬರಹ ಮತ್ತು ಸಹಿಯ ಮಾದರಿಯನ್ನು ನೀಡಬೇಕಾಗುತ್ತದೆ. ಅಧಿಕಾರಿಗಳು ಬಯಸಿದರೆ ವೈದ್ಯಕೀಯ ಪರೀಕ್ಷೆಗೂ ಒಳಗಾಗಬೇಕಾಗುತ್ತದೆ. ಸರ್ಕಾರ ಸೂಚಿದರೆ, ನಿರ್ದಿಷ್ಟ ಜನರೊಂದಿಗೆ ಮಾತುಕತೆ ಅಥವಾ ಅವರೊಂದಿಗೆ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸುವಂತಿಲ್ಲ

ಸೆಕ್ಷನ್ 8,9,10: ವಿದೇಶಿಯರು ತಂಗಿರುವ ಸ್ಥಳಗಳ ಮಾಲೀಕರು ಅವರ ಕುರಿತು ಸರ್ಕಾರಕ್ಕೆ ಮಾಹಿತಿ ನೀಡುವುದು ಕಡ್ಡಾಯ. ವಿಶ್ವವಿದ್ಯಾಲಯಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು ಕೂಡ ವಿದೇಶಿಯರ ಮಾಹಿತಿಯನ್ನು ನೀಡಬೇಕು

ಶಿಕ್ಷೆ ಪ್ರಮಾಣ

ಸೆಕ್ಷನ್ 21: ನಕಲಿ ದಾಖಲೆಗಳ ಮೂಲಕ ವಿದೇಶಿಯರು ಭಾರತವನ್ನು ಪ್ರವೇಶಿಸಿದರೆ ಐದು ವರ್ಷ ಜೈಲು ಅಥವಾ ₹5 ಲಕ್ಷಗಳವರೆಗೆ ದಂಡ

ಸೆಕ್ಷನ್ 22: ಭಾರತವನ್ನು ಪ್ರವೇಶಿಸಲು, ಇಲ್ಲಿಯೇ ಉಳಿದುಕೊಳ್ಳಲು ಅಥವಾ ಭಾರತದಿಂದ ಹೊರಹೋಗಲು ನಕಲಿ ಪಾಸ್‌ಪೋರ್ಟ್, ವೀಸಾವನ್ನು ಬಳಸಿದರೆ ಮತ್ತು ಈ ಅಕ್ರಮಕ್ಕಾಗಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿದರೆ, ಅಂಥವರಿಗೆ ಕನಿಷ್ಠ 2 ವರ್ಷದಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ. ಇಲ್ಲವೇ ₹1 ಲಕ್ಷದಿಂದ ₹10 ಲಕ್ಷದವರೆಗೆ ದಂಡ

ಸೆಕ್ಷನ್ 28: ಈ ಕಾಯ್ದೆಯಲ್ಲಿ ಹೇಳಲಾಗಿರುವ ನಿಯಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಅಥವಾ ತಮ್ಮ ಅಧಿಕಾರಿಗಳಿಗೆ ಸೂಚಿಸಬಹುದು

ಕಲುಷಿತ ನೀರು ಕುಡಿದು ಮೃತಪಟ್ಟ ಶಂಕೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಕುರುಬರಹಳ್ಳಿಯಲ್ಲಿ ಸಿದ್ದಪ್ಪ (80) ಎಂಬುವರು ಅನಾರೋಗ್ಯದಿಂದ ಸಾವಿಗೀಡಾಗಿದ್ದು ಕಲುಷಿತ ನೀರು ಕುಡಿದು ಮೃತಪಟ್ಟಿದ್ದಾರೆ ಎನ್ನುವ ಶಂಕೆ ವ್ಯಕ್ತವಾಗಿದೆ. ನೀರಿನ ಮಾದರಿಯನ್ನು ಪರೀಕ್ಷೆಗಾಗಿ ಆರೋಗ್ಯ ಇಲಾಖೆಯು ಪ್ರಯೋಗಾಲಯಕ್ಕೆ ಕಳುಹಿಸಿದೆ.

ಗ್ರಾಮದ ಐದಾರು ಮಂದಿಯಲ್ಲಿ ವಾಂತಿ, ಭೇದಿ ಕಾಣಿಸಿಕೊಂಡಿದೆ. ಪಕ್ಕದ ಚಿಕ್ಕಪೈಲಗುರ್ಕಿ ಗ್ರಾಮದಲ್ಲಿಯೂ 20ಕ್ಕೂ ಹೆಚ್ಚು ಮಂದಿಗೆ ವಾಂತಿ, ಭೇದಿಯಾಗಿದೆ. ಆರೋಗ್ಯ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ದಕ್ಷಿಣ ಪಿನಾಕಿನಿ ಜಲ ವಿವಾದ ನಾಳೆ ಸಮಾಲೋಚನಾ ಸಭೆ

ನವದೆಹಲಿ: ಕರ್ನಾಟಕ ಮತ್ತು ತಮಿಳುನಾಡು ನಡುವಿನ ದಕ್ಷಿಣ ಪಿನಾಕಿನಿ (ಪೆನ್ನಾರ್) ನದಿ ನೀರು ಹಂಚಿಕೆ ವಿವಾದ ಬಗೆಹರಿಸಲು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರು ಮಂಗಳವಾರ (ಮಾ.18) ಇಲ್ಲಿ ಸಮಾಲೋಚನಾ ಸಮಿತಿ ಸಭೆಯನ್ನು ನಡೆಸಲಿದ್ದಾರೆ.

ಈ ಸಭೆಯಲ್ಲಿ ಜಲಸಂಪನ್ಮೂಲ ಖಾತೆಯನ್ನೂ ಹೊಂದಿರುವ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ. ತಮಿಳುನಾಡು, ಪುದುಚೇರಿ ಮತ್ತು ಆಂಧ್ರ ಪ್ರದೇಶದಿಂದಲೂ ಆಯಾ ರಾಜ್ಯಗಳ ಜಲಸಂಪನ್ಮೂಲ ಸಚಿವರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

2024ರ ಜನವರಿಯಲ್ಲಿ, ಕರ್ನಾಟಕದ ಕೋರಿಕೆಯ ಮೇರೆಗೆ ಹೊಸ ಸಮಾಲೋಚನಾ ಸಮಿತಿ ರಚಿಸುವಂತೆ ಸುಪ್ರೀಂ ಕೋರ್ಟ್ ಜಲಶಕ್ತಿ ಸಚಿವಾಲಯಕ್ಕೆ ನಿರ್ದೇಶನ ನೀಡಿತ್ತು. ತಮಿಳುನಾಡು ಮತ್ತು ಕರ್ನಾಟಕದ ನಡುವೆ ಮಧ್ಯಸ್ಥಿಕೆ ವಹಿಸಲು ಮತ್ತು ಪರಿಹಾರ ಕಂಡುಕೊಳ್ಳಲು ಅಂತರ ರಾಜ್ಯ ನದಿ ನೀರು ವಿವಾದಗಳ ಕಾಯ್ದೆ, 1956ರ ಸೆಕ್ಷನ್ 4ರ ಅಡಿಯಲ್ಲಿ ಈ ಸಮಿತಿ ರಚಿಸಲಾಗಿದೆ.

ವಿದ್ಯಾರ್ಥಿ ಸಾವು, 29 ಮಕ್ಕಳು ಅಸ್ವಸ್ಥ

ಒಂದನೇ ಪುಟದಿಂದ...

ಕಠಿಣ ಕ್ರಮಕ್ಕೆ ಸಿಎಂ ಸೂಚನೆ: 'ವಿಷಾಹಾರ ಸೇವಿಸಿ ವಿದ್ಯಾರ್ಥಿಯೊಬ್ಬ ಮೃತಪಟ್ಟು ಹಲವು ಮಕ್ಕಳು ತೀವ್ರ ಅಸ್ವಸ್ಥಗೊಂಡ ವಿಚಾರ ತಿಳಿದು ನೋವಾಯಿತು. ಘಟನೆ ನನ್ನ ಗಮನಕ್ಕೆ ಬಂದ ಕೂಡಲೇ ಮಂಡ್ಯ ಡಿ.ಸಿ ಜೊತೆ ಮಾತನಾಡಿ ಮಕ್ಕಳಿಗೆ ಸೂಕ್ತ ಚಿಕಿತ್ಸೆಯ ವ್ಯವಸ್ಥೆ ಮಾಡುವಂತೆ ಹಾಗೂ ಘಟನೆಗೆ ಕಾರಣರಾದವರ ಮೇಲೆ ಕಠಿಣ ಕ್ರಮ ಜರುಗಿಸುವಂತೆ ಸೂಚಿಸಿದ್ದೆ. ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿ ತನಿಖೆ ಮುಂದುವರಿಸಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ 'ಎಕ್ಸ್' ಮಾಡಿದ್ದಾರೆ.

'ಈ ದುರ್ಘಟನೆಯಲ್ಲಿ ಮಡಿದ ಬಾಲಕನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲಾಗುವುದು. ಬೇರೆಡೆ ತಯಾರಿಸಿದ ಆಹಾರ ಸೇವಿಸುವ ಮುನ್ನ ಅದರಲ್ಲೂ ಚಿಕ್ಕ ಮಕ್ಕಳಿಗೆ ನೀಡುವ ಮುನ್ನ ಹೆಚ್ಚು ಜಾಗ್ರತೆ ವಹಿಸಬೇಕು. ಅಜಾಗರೂಕತೆಗೆ ಅಮೂಲ್ಯ ಜೀವಗಳು ಬಲಿಯಾಗದಿರಲಿ' ಎಂದು ಹೇಳಿದ್ದಾರೆ.

ಎಚ್‌ಡಿಕೆ ಸೂಚನೆ: 'ಕಲುಷಿತ ಆಹಾರ ಸೇವಿಸಿ ವಿದ್ಯಾರ್ಥಿ ಮೃತಪಟ್ಟಿರುವುದು ಅತ್ಯಂತ ದುರದೃಷ್ಟಕರ. ಇದರಿಂದ ನನಗೆ ಬಹಳ ನೋವುಂಟಾಗಿದೆ. ಇಂಥ ಘಟನೆಗಳು ಮರುಕಳಿಸದಿರಲಿ' ಎಂದು ಮಂಡ್ಯದ ಸಂಸದರೂ ಆಗಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ 'ಎಕ್ಸ್' ಮಾಡಿದ್ದಾರೆ.

'ಘಟನೆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು, ವಿದ್ಯಾರ್ಥಿಗಳಿಗೆ ಉತ್ತಮ ಚಿಕಿತ್ಸೆ ಕೊಡಿಸುವಂತೆ ಸೂಚಿಸಿದ್ದೇನೆ. ಬೇಸಿಗೆ ಕಾಲವಾದ್ದರಿಂದ ವಿದ್ಯಾರ್ಥಿಗಳಿಗೆ ನೀಡಲಾಗುವ ಆಹಾರ, ಕುಡಿಯುವ ನೀರಿನ ಬಗ್ಗೆ ಇನ್ನೂ ಹೆಚ್ಚಿನ ನಿಗಾ ವಹಿಸುವಂತೆ ಸೂಚಿಸಿದ್ದೇನೆ' ಎಂದು ತಿಳಿಸಿದ್ದಾರೆ.

ಮೂವರ ಬಂಧನ

ಮಳವಳ್ಳಿ ಬಿಇಒ ವಿ.ಈ. ಉಮಾ ನೀಡಿದ ದೂರಿನ ಮೇರೆಗೆ ಹೋಟೆಲ್ ಮಾಲೀಕ ಸಿದ್ದರಾಜು, ಪುಷ್ಪೇಂದ್ರ ಕುಮಾರ್, ಗೋಕುಲ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಲಂಕೇಶ್, ವಿದ್ಯಾಸಂಸ್ಥೆ ಅಧ್ಯಕ್ಷ ಜಗದೀಶ್, ನೌಕರ ಅಭಿಷೇಕ್ ಹಾಗೂ ಮದನ್, ಸಮುದಾಯ ಭವನದ ಕೃಷ್ಣ ಸೇರಿದಂತೆ ಆರು ಮಂದಿ ವಿರುದ್ಧ ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಿದ್ದರಾಜು, ಲಂಕೇಶ್, ಅಭಿಷೇಕ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.



ಮಳವಳ್ಳಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಭಾನುವಾರ ಭೇಟಿ ನೀಡಿ ಅಸ್ವಸ್ಥಗೊಂಡ ಮಕ್ಕಳ ಆರೋಗ್ಯ ವಿಚಾರಿಸಿದರು

ಉದ್ಯಮಿಯ 40 ಸಂಬಂಧಿಕರೂ ಅಸ್ವಸ್ಥ

ಹೋಳಿ ಹಬ್ಬದ ಸಂದರ್ಭದಲ್ಲಿ ಊಟ ಸೇವಿಸಿದ್ದ ಪುಷ್ಪೇಂದ್ರ ಕುಮಾರ್ ಅವರ ಸಂಬಂಧಿಕರು ಸೇರಿದಂತೆ 40ಕ್ಕೂ ಅಧಿಕ ಮಂದಿ ಸಹ ಅಸ್ವಸ್ಥರಾಗಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಖಾಸಗಿ ಆಸ್ಪತ್ರೆ ಮತ್ತು ಕೆ.ಎಂ.ದೊಡ್ಡಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮಾಂತರ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

'ಪೋಷಕರ ಆರೈಕೆ ಮಾಡದಿದ್ದರೆ ಆಸ್ತಿ ದಕ್ಕದು'

ಒಂದನೇ ಪುಟದಿಂದ...

ಆಸ್ತಿಯನ್ನು ತಮ್ಮ ಹೆಸರಿಗೆ ಬರೆಯಿಸಿಕೊಂಡ ಮಕ್ಕಳು ತಮ್ಮ ಪೋಷಕರನ್ನು ಚಿಕಿತ್ಸೆ ನೆಪದಲ್ಲಿ ಬಿಟ್ಟು ಹೋಗುತ್ತಿದ್ದಾರೆ. ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲೇ 150ಕ್ಕೂ ಹೆಚ್ಚು ಹಿರಿಯ ನಾಗರಿಕರನ್ನು ಮಕ್ಕಳು ತೊರೆದ ಪ್ರಕರಣಗಳು ನಡೆದಿವೆ. ಇತರ ವೈದ್ಯಕೀಯ ಸಂಸ್ಥೆಗಳಲ್ಲಿ ಇಂತಹ 100ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ವಿವಿಧ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗಳ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರ ಜೊತೆ ಸಭೆ ನಡೆಸಿ ಮಾಹಿತಿ ಪಡೆದುಕೊಂಡ ಸಚಿವರು, ಜನ್ಮ ನೀಡಿದ ತಂದೆ-ತಾಯಂದಿರನ್ನೇ ಅನಾಥರನ್ನಾಗಿ ಮಾಡುತ್ತಿರುವ ಮಕ್ಕಳ ಅಮಾನವೀಯ ಕೃತ್ಯಗಳಿಗೆ ತಡೆ ಹಾಕಬೇಕು ಎಂದು ಸೂಚಿಸಿದ್ದಾರೆ.

'ನೋಡಿಕೊಳ್ಳಲು ಆಗದೆ ಮಕ್ಕಳು ನಮ್ಮನ್ನು ತೊರೆದಿದ್ದಾರೆ. ಕೆಲವರು ಆರ್ಥಿಕ ಸಂಕಷ್ಟಗಳಿಂದ ಬಿಟ್ಟು ಹೋಗಿದ್ದಾರೆ. ಆಸ್ತಿಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡ ನಂತರ ತಮ್ಮ ಪೋಷಕರನ್ನು ಮಕ್ಕಳು ಆಸ್ಪತ್ರೆಗೆ ಸೇರಿಸಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಊಟ, ವಸತಿ, ಆಶ್ರಯ ಉಚಿತವಾಗಿ ಸಿಗುತ್ತದೆ ಎಂಬ ಕಾರಣಕ್ಕೆ ನಮ್ಮನ್ನು ಇಲ್ಲಿ ಬಿಟ್ಟುಹೋಗಿದ್ದಾರೆ ಎಂದು ಪರಿತ್ಯಕ್ತ ಪೋಷಕರು ಹೇಳಿಕೊಂಡಿದ್ದಾರೆ. ಇಂಥ ಕೆಲವು ಹಿರಿಯ ನಾಗರಿಕರಿಗೆ ಬೆಳಗಾವಿ ಮತ್ತು ಸುತ್ತಮುತ್ತಲಿನ ವೃದ್ಧಾಶ್ರಮಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ. ಇನ್ನೂ ಅನೇಕರು ಆಸ್ಪತ್ರೆಗಳಲ್ಲಿಯೇ ಇದ್ದಾರೆ' ಎಂದು ಬಿಐಎಂಎಸ್ ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದ್ದಾರೆ.

'ಹಿರಿಯ ನಾಗರಿಕರ ಕಾಯ್ದೆಯಡಿ ಕ್ರಮ'

'ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ– 2007ರ ಅಡಿಯಲ್ಲಿ ಉಪ ವಿಭಾಗಾಧಿಕಾರಿಗಳು ಕ್ರಮ ಕೈಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ವೈದ್ಯಕೀಯ ಸಂಸ್ಥೆಗಳ ನಿರ್ದೇಶಕರು ದೂರು ಸಲ್ಲಿಸಬೇಕು' ಎಂದು ಎಲ್ಲ ಅಧಿಕಾರಿಗಳಿಗೆ ಸಚಿವ ಶರಣಪ್ರಕಾಶ್ ಪಾಟೀಲ ಸೂಚನೆ ನೀಡಿದ್ದಾರೆ.

'ಈ ಕಾನೂನಿನ ಬಗ್ಗೆ ಅನೇಕರಿಗೆ ಮಾಹಿತಿ ಇಲ್ಲ. ಹಿರಿಯ ನಾಗರಿಕರಿಗೆ ಮಕ್ಕಳು ಅಥವಾ ಸಂಬಂಧಿಕರು ಆರ್ಥಿಕ ಮತ್ತು ವೈದ್ಯಕೀಯ ಬೆಂಬಲ ನೀಡಬೇಕೆಂಬ ನಿಯಮವಿದೆ. ನಿಯಮ ಉಲ್ಲಂಘಿಸಿದರೆ ತಮ್ಮ ಮಕ್ಕಳ ಪರವಾಗಿ ಮಾಡಿದ ಆಸ್ತಿ ವರ್ಗಾವಣೆಯನ್ನು ರದ್ದುಗೊಳಿಸುವ ಕಾನೂನುಬದ್ಧ ಹಕ್ಕನ್ನು ಪೋಷಕರು ಹೊಂದಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಮಕ್ಕಳು ಆನುವಂಶಿಕವಾಗಿ ಆಸ್ತಿಯನ್ನು ಪಡೆದ ನಂತರ ಹೆತ್ತವರನ್ನು ನಿರ್ಲಕ್ಷಿಸಿದರೆ ಅಥವಾ ತ್ಯಜಿಸಿದರೆ, ವಿಲ್ ಅಥವಾ ಆಸ್ತಿ ವರ್ಗಾವಣೆಯನ್ನು ರದ್ದುಗೊಳಿಸಲು ಮತ್ತು ವಯಸ್ಸಾದ ಪೋಷಕರಿಗೆ ಮಾಲೀಕತ್ವವನ್ನು ಮರು ಪಡೆಯಲು ಈ ಕಾಯ್ದೆಯ ಸೆಕ್ಷನ್ 23ರ ಅಡಿ ಅವಕಾಶ ಕಲ್ಪಿಸಲಾಗಿದೆ' ಎಂದೂ ಅವರು ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಲೋಕಪಾಲ ಆದೇಶ: 'ಸುಪ್ರೀಂ' ವಿಚಾರಣೆ ನಾಳೆ

ನವದೆಹಲಿ (ಪಿಟಿಐ): ಹೈಕೋರ್ಟ್ ನ್ಯಾಯಮೂರ್ತಿ ವಿರುದ್ಧ ದೂರು ಸ್ವೀಕರಿಸುವ ಬಗ್ಗೆ ಲೋಕಪಾಲ ಹೊರಡಿಸಿದ್ದ ಆದೇಶಕ್ಕೆ ತಡೆ ನೀಡಿದ್ದ ಸುಪ್ರೀಂ ಕೋರ್ಟ್ ಈ ಪ್ರಕರಣದ ವಿಚಾರಣೆಯನ್ನು ಮಾ.18ರಂದು ನಡೆಸಲಿದೆ.

ಈ ಬಗ್ಗೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿರುವ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಸೂರ್ಯಕಾಂತ್ ಮತ್ತು ಅಭಯ್ ಎಸ್. ಓಕಾ ಅವರ ಪೀಠವು ವಿಚಾರಣೆ ನಡೆಸಲಿದೆ. ದೂರು ಸ್ವೀಕರಿಸುವ ಬಗ್ಗೆ ಲೋಕಪಾಲವು ಜ.27ರಂದು ಆದೇಶ ಹೊರಡಿಸಿತ್ತು.

'ಇದು ಬಹಳ ಚಿಂತೆಗೀಡು ಮಾಡುವಂಥದ್ದು' ಎಂದು ಅಭಿಪ್ರಾಯ ಪಟ್ಟಿದ್ದ ಸುಪ್ರೀಂ ಕೋರ್ಟ್ ಫೆ.20ರಂದು ಆದೇಶಕ್ಕೆ ತಡೆ ನೀಡಿತ್ತು. ಈ ಬಗ್ಗೆ ಪ್ರತಿಕ್ರಿಯಿಸುವಂತೆ ಹೈಕೋರ್ಟ್ ನ್ಯಾಯಮೂರ್ತಿ ವಿರುದ್ಧ ದೂರು ನೀಡಿದ್ದ ವ್ಯಕ್ತಿ, ಕೇಂದ್ರ ಸರ್ಕಾರ ಹಾಗೂ ಲೋಕಪಾಲ ರಿಜಿಸ್ಟ್ರಾರ್‌ಗೆ ಕೋರಿತ್ತು.

ಆಸ್ಪತ್ರೆಯಿಂದ ರೆಹಮಾನ್ ಮನೆಗೆ



ರೆಹಮಾನ್

ಚೆನ್ನೈ (ಪಿಟಿಐ): ನಿರ್ಜಲೀಕರಣದಿಂದ ಬಳಲಿದ ಕಾರಣ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರು ಮನೆಗೆ ಮರಳಿದರು.

'ಅವರನ್ನು ಭಾನುವಾರ ಮುಂಜಾನೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರು ತಪಾಸಣೆ ನಡೆಸಿ ಚಿಕಿತ್ಸೆ ಬಳಿಕ ಮನೆಗೆ ಕಳಿಸಿಕೊಟ್ಟರು. ಇದೀಗ ಚೆನ್ನಾಗಿದ್ದಾರೆ' ಎಂದು ಅವರ ಮ್ಯಾನೇಜರ್ ಸೆಂಥಿಲ್ ವೇಲನ್ ತಿಳಿಸಿದ್ದಾರೆ.

ರೆಹಮಾನ್ ಎದೆ ನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂಬ ವರದಿಗಳನ್ನು ಅಲ್ಲಗಳೆದಿರುವ ಅವರ ಸಹೋದರಿ ಎ.ಆರ್. ರೈಹಾನಾ, ನಿರ್ಜಲೀಕರಣ ಹಾಗೂ ಗ್ಯಾಸ್ಟ್ರಿಕ್ ಸಮಸ್ಯೆಯಿಂದಾಗಿ ಆಸ್ಪತ್ರೆಗೆ ಹೋಗಿದ್ದರು ಎಂದಿದ್ದಾರೆ.

ರೋಗಿಗಳ ರಕ್ಷಣೆ

ಗ್ವಾಲಿಯರ್ (ಮಧ್ಯಪ್ರದೇಶ) (ಪಿಟಿಐ): ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಭಾನುವಾರ ನಸುಕಿನಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, 190ಕ್ಕೂ ಹೆಚ್ಚು ರೋಗಿಗಳನ್ನು ರಕ್ಷಿಸಲಾಗಿದೆ.

ಗಜರಾ ರಾಜಾ ವೈದ್ಯಕೀಯ ಕಾಲೇಜಿನ ಕಮಲಾ ರಾಜಾ ಆಸ್ಪತ್ರೆಯ ಸ್ತ್ರೀರೋಗ ವಿಭಾಗದ ತೀವ್ರ ನಿಗಾ ಘಟಕದ (ಐಸಿಯು) ಹವಾನಿಯಂತ್ರಕದಲ್ಲಿ (ಎಸಿ) ನಸುಕಿನ 1 ಗಂಟೆ ಸುಮಾರಿನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು ಎಂದು ಜಿಲ್ಲಾಧಿಕಾರಿ ರುಚಿಕಾ ಚೌಹಾಣ್ ತಿಳಿಸಿದ್ದಾರೆ.

ಸುನಿತಾ, ಬುಚ್ ಭೂಮಿಗೆ ವಾಪಸ್ ಸನ್ನಿಹಿತ

ಐಎಸ್‌ಎಸ್ ತಲುಪಿದ ಗಗನನೌಕೆ

ಕೇಪ್ ಕೆನವೆರಲ್ (ಅಮೆರಿಕ) (ಎಪಿ/ಎಎಫ್‌ಪಿ): ಗಗನಯಾನಿಗಳಾದ ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಅವರನ್ನು ಭೂಮಿಗೆ ಕರೆತರಲಿರುವ ಗಗನನೌಕೆಯು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು (ಐಎಸ್‌ಎಸ್) ಭಾನುವಾರ ತಲುಪಿದೆ.

ಇದರಿಂದ ಕಳೆದ 9 ತಿಂಗಳಿನಿಂದ ಐಎಸ್‌ಎಸ್‌ನಲ್ಲಿ ಸಿಲುಕಿಕೊಂಡಿರುವ ಸುನಿತಾ ಹಾಗೂ ಬುಚ್ ಅವರು ಭೂಮಿಗೆ ವಾಪಸಾಗುವುದು ಸನ್ನಿಹಿತವಾಗಿದೆ.

ಸ್ಪೇಸ್‌ಎಕ್ಸ್‌ನ 'ಫಾಲ್ಕನ್ 9' ರಾಕೆಟ್ ಮೂಲಕ ಕೆನಡಿ ಸ್ಪೇಸ್ ಸೆಂಟರ್‌ನಿಂದ ಸ್ಥಳೀಯ ಕಾಲಮಾನ ಶುಕ್ರವಾರ ರಾತ್ರಿ 7.03ಕ್ಕೆ ನಭಕ್ಕೆ ಚಿಮ್ಮಿದ್ದ 'ಡ್ರ್ಯಾಗನ್' ಹೆಸರಿನ ಗಗನನೌಕೆಯನ್ನು ಭಾನುವಾರ ಬೆಳಿಗ್ಗೆ ಐಎಸ್‌ಐಎಸ್‌ಗೆ ಡಾಕಿಂಗ್ (ಜೋಡಣೆ) ಮಾಡಲಾಯಿತು.

ಡ್ರ್ಯಾಗನ್ ಗಗನನೌಕೆಯಲ್ಲಿ ತೆರಳಿದ ನಾಲ್ವರು ಗಗನಯಾನಿಗಳು ಒಬ್ಬೊಬ್ಬರಾಗಿ ಐಎಸ್‌ಎಸ್ ಪ್ರವೇಶಿಸಿದರು. ಸುನಿತಾ ಸೇರಿದಂತೆ ಅಲ್ಲಿದ್ದ ಗಗನಯಾನಿಗಳು ಸ್ವಾಗತಿಸಿದರು.

'ಈ ದಿನ ನಿಜಕ್ಕೂ ಅದ್ಭುತವಾದುದು. ನಮ್ಮ ಸ್ನೇಹಿತರು ಬಂದಿರುವುದನ್ನು ನೋಡಲು ತುಂಬಾ ಸಂತಸ ಆಗುತ್ತಿದೆ' ಎಂದು ಸುನಿತಾ ಪ್ರತಿಕ್ರಿಯಿಸಿದ್ದಾರೆ. ಐಎಸ್‌ಎಸ್‌ನಲ್ಲಿರುವ ಎಲ್ಲ 11 ಗಗನಯಾನಿಗಳು ಜತೆಯಾಗಿ ಫೋಟೊಗೆ ಪೋಸ್ ನೀಡಿದರು.

ಸುನಿತಾ ಮತ್ತು ವಿಲ್ಮೋರ್ ಅಲ್ಲದೆ ಐಎಸ್‌ಎಸ್‌ನಲ್ಲಿರುವ ನಿಕ್ ಹೇಗ್ ಮತ್ತು ಅಲೆಕ್ಸಾಂಡರ್ ಗೋರ್ಬನೊವ್ ಅವರೂ ಭೂಮಿಗೆ ಮರಳಲಿದ್ದಾರೆ. ನಾಲ್ವರನ್ನು ಹೊತ್ತ ಗಗನನೌಕೆಯು ಫ್ಲಾರಿಡಾದ ಕಡಲ ತೀರಕ್ಕೆ ಬುಧವಾರ ಬಂದಿಳಿಯುವ ಸಾಧ್ಯತೆಯಿದೆ.

ಬೋಯಿಂಗ್ ಸಂಸ್ಥೆಯ ಸ್ಟಾರ್‌ಲೈನರ್ ಗಗನನೌಕೆಯಲ್ಲಿ ಕಳೆದ ವರ್ಷ ಜೂನ್ 5ರಂದು ಐಎಸ್‌ಎಸ್‌ಗೆ ತೆರಳಿದ್ದ ಸುನಿತಾ ಹಾಗೂ ವಿಲ್ಮೋರ್, 8 ದಿನಗಳ ನಂತರ ಭೂಮಿಗೆ ಮರಳಬೇಕಿತ್ತು. ಆದರೆ, ಗಗನನೌಕೆಯಲ್ಲಿ ತಾಂತ್ರಿಕ ದೋಷ ಕಂಡುಬಂದ ಕಾರಣ ಅವರಿಗೆ ಮರಳಲು ಸಾಧ್ಯವಾಗಿಲ್ಲ.



ಐಎಸ್‌ಎಸ್ ತಲುಪಿದ ಗಗನಯಾನಿಗಳ ಜತೆ ಸುನಿತಾ ವಿಲಿಯಮ್ಸ್ (ಮಧ್ಯದಲ್ಲಿ) ಸಂತಸ ಹಂಚಿಕೊಂಡ ಕ್ಷಣ ಪಿಟಿಐ ಚಿತ್ರ

ನಿರಂತರ ಶೋಧ

ನಾಗರ್‌ಕರ್ನೂಲ್ (ತೆಲಂಗಾಣ) (ಪಿಟಿಐ): ಜಿಲ್ಲೆಯಲ್ಲಿ ನಿರ್ಮಾಣ ಹಂತದ ಶ್ರೀಶೈಲಂ ಎಡದಂಡೆ ಕಾಲುವೆ ಕುಸಿದು, ಅವಶೇಷಗಳ ಅಡಿ ಸಿಲುಕಿರುವ ಏಳು ಮಂದಿಯ ಪತ್ತೆಗೆ ಶೋಧ ಕಾರ್ಯ ನಿರಂತರವಾಗಿ ಸಾಗಿದೆ.

ರಕ್ಷಣಾ ತಂಡಗಳ ಇನ್ನಷ್ಟು ಸದಸ್ಯರು ಅಗತ್ಯ ಸಲಕರಣೆಗಳೊಂದಿಗೆ ಸುರಂಗದೊಳಗೆ ತೆರಳಿರುವುದರಿಂದ ಶೋಧ ಕಾರ್ಯ ಭಾನುವಾರ ವೇಗ ಪಡೆಯಿತು.

ಹೈಡ್ರಾಲಿಕ್ ಚಾಲಿತ ರೊಬಾಟ್ ಅನ್ನು ಕಾರ್ಯಾಚರಣೆಗೆ ಬಳಸಿರುವುದರಿಂದ ಮಣ್ಣು ಹಾಗೂ ಇತರ ಅವಶೇಷಗಳನ್ನು ತೆರವುಗೊಳಿಸುವ ಪ್ರಕ್ರಿಯೆಗೆ ಇನ್ನಷ್ಟು ವೇಗ ಲಭಿಸಿದೆ.

ಫೆ. 22ರಂದು ಸುರಂಗ ಭಾಗಶಃ ಕುಸಿದ ಪರಿಣಾಮ 8 ಮಂದಿ ಒಳಗೆ ಸಿಲುಕಿದ್ದರು. ಅದರಲ್ಲಿ ಗುರುಪ್ರೀತ್ ಸಿಂಗ್ ಎಂಬವರ ಮೃತದೇಹ ಮಾರ್ಚ್ 9ರಂದು ಪತ್ತೆಯಾಗಿತ್ತು. ಸೇನೆ, ಎನ್‌ಡಿಆರ್‌ಎಫ್, ಎಚ್‌ಆರ್‌ಡಿಡಿ ಮತ್ತು ಸಿಂಗರೇನಿ ಕಾಲಿಯರೀಸ್ ಸಂಸ್ಥೆಯ ತಂಡಗಳು ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿವೆ.

ದೇಶಿ ಕ್ರಿಕೆಟ್‌ನ ಎಲ್ಲ ಮಾದರಿಗಳಲ್ಲಿ ಯಶಸ್ಸು ಗಳಿಸಿದ ಬೆಂಗಳೂರಿನ ಆಟಗಾರ

ಐಪಿಎಲ್: ಮಿಂಚುವತ್ತ ಕರುಣ್ ಚಿತ್ತ


ಕರುಣ್ ನಾಯರ್

ನವದೆಹಲಿ (ಪಿಟಿಐ): ಈ ಸಲದ ದೇಶಿ ಕ್ರಿಕೆಟ್ ಋತುವಿನ ಎಲ್ಲ ಮಾದರಿಗಳ ಟೂರ್ನಿಯಲ್ಲಿಯೂ ರನ್‌ಗಳ ರಾಶಿ ಪೇರಿಸಿದ ಕರುಣ್ ನಾಯರ್ ಈಗ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಮಿಂಚಲು ಸಿದ್ಧರಾಗಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಸ್ಥಾನ ಪಡೆದಿರುವ ಕರ್ನಾಟಕದ ಕರುಣ್ ದೇಶಿ ಕ್ರಿಕೆಟ್‌ನಲ್ಲಿ ವಿದರ್ಭ ತಂಡವನ್ನು ಪ್ರತಿನಿಧಿಸಿದ್ದರು. ಅಮೋಘ ಲಯದಲ್ಲಿರುವ ಅವರು ಕ್ಯಾಪಿಟಲ್ಸ್ ತಂಡದ ಬ್ಯಾಟಿಂಗ್ ವಿಭಾಗಕ್ಕೆ ಶಕ್ತಿಯಾಗುವ ಭರವಸೆ ಮೂಡಿಸಿದ್ದಾರೆ.

ಅವರು ಈಚೆಗೆ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ (ಏಕದಿನ ಮಾದರಿ) 9ಪಂದ್ಯಗಳಿಂದ 779 ರನ್ ಪೇರಿಸಿದ್ದರು. ಅದರಲ್ಲಿ ಒಂದು ಅರ್ಧಶತಕ ಮತ್ತು ಐದು ಶತಕಗಳು ಸೇರಿದ್ದವು. ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿಯೂ ಅವರು 860-863 ರನ್ ಗಳಿಸಿದ್ದರು. ಅದರಲ್ಲೂ ಫೈನಲ್‌ನಲ್ಲಿ ಕೇರಳ ವಿರುದ್ಧ ಎರಡನೇ ಇನಿಂಗ್ಸ್‌ನಲ್ಲಿ ಅಜೇಯ ಶತಕ ದಾಖಲಿಸಿದ್ದರು. 57.33ರ ಸರಾಸರಿಯಲ್ಲಿ ಅವರು ರನ್ ಗಳಿಸಿದ್ದಾರೆ.

‘ಬಹಳ ಕಾಲದಿಂದ ಕ್ರಿಕೆಟ್ ಆಡುತ್ತಿದ್ದೇನೆ. ಈ ಅವಧಿಯಲ್ಲಿ ವೃತ್ತಿ ಜೀವನದಲ್ಲಿ ಏರಿಳಿತಗಳನ್ನು ಕಂಡಿದ್ದೇನೆ. ಕುಸಿದಾಗ ಪುಟಿದೇಳುವುದನ್ನು ಕಲಿಯುವುದೇ ಈ ಹಾದಿಯಲ್ಲಿ ಮಹತ್ವದ್ದಾಗುತ್ತದೆ. ಅಲ್ಲದೇ ಉನ್ನತ ಸಾಧನೆ ಮಾಡಿದಾಗಲೂ ಸಮಚಿತ್ತದಿಂದ ಇರುವುದು ಕೂಡ ಮುಖ್ಯ’ ಎಂದು ಕರುಣ್ ಸುದ್ದಿಗಾರರಿಗೆ ಹೇಳಿದರು.

‘ಆ ದಿನಗಳು ನಿಜಕ್ಕೂ ಬಹಳ ಕಷ್ಟದ್ದಾಗಿದ್ದವು. ಆದರೆ ಸಾಧಿಸಬೇಕೆಂಬ ಹಸಿವು ಮತ್ತು ಕೆಲವರು ತುಂಬಿದ ಆತ್ಮವಿಶ್ವಾಸವು ನೆರವಾಯಿತು. ಈ ಹಂತಕ್ಕೆ ಬಂದೆ ಈಗ ನನ್ನ ಮುಂದಿರುವುದು ಒಂದೇ ಗುರಿ. ಚೆನ್ನಾಗಿ ಸಿದ್ಧತೆ ಮಾಡಿಕೊಳ್ಳಬೇಕು. ಐಪಿಎಲ್‌ನಲ್ಲಿ ಆಡುವ ಪ್ರತಿ ಪಂದ್ಯದಲ್ಲಿಯೂ ತಂಡಕ್ಕೆ ಉತ್ತಮ ಕಾಣಿಕೆ ನೀಡಬೇಕು ಎಂಬುದಷ್ಟೇ. ನಾನೀಗ ನಿರಾಳವಾಗಿದ್ದೇನೆ ಮತ್ತು ಆತ್ಮವಿಶ್ವಾಸದೊಂದಿಗೆ ಐಪಿಎಲ್‌ಗೆ ಪ್ರವೇಶಿಸುತ್ತಿರುವೆ. ನನಗೆ ಸಾಧ್ಯವಿರುವುದೆಲ್ಲವನ್ನೂ ಮಾಡುವೆ ’ ಎಂದು ಕರುಣ್ ಹೇಳಿದರು.

ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬಿಡ್‌ನಲ್ಲಿ ₹ 50 ಲಕ್ಷ ನೀಡಿ ಖರೀದಿಸಿತ್ತು.

‘ಡೆಲ್ಲಿ ತಂಡಕ್ಕೆ ಮರಳಿದ್ದು ಅತೀವ ಸಂತಸವಾಗಿದೆ. ತಂಡದಲ್ಲಿರುವ ಎಲ್ಲರೊಂದಿಗೆ ಆಡುವ ಅವಕಾಶ ಲಭಿಸಿದೆ. ಪ್ರಕ್ರಿಯೆಯಲ್ಲಿ ನನಗೆ ವಿಶ್ವಾಸವಿದೆ. ಅದನ್ನು ಸರಿಯಾಗಿ ಪಾಲಿಸಿದರೆ ಗುರಿ ಮುಟ್ಟುವುದು ಸುಲಭ’ ಎಂದರು.

ತಮ್ಮ ತಂಡದ ಹೊಸ ನಾಯಕ ಅಕ್ಷರ್ ಪಟೇಲ್ ಕುರಿತು ಪ್ರತಿಕ್ರಿಯಿಸಿದ ಕರುಣ್, ‘ಆಟದ ಎಲ್ಲ ಸೂಕ್ಷ್ಮಗಳನ್ನು ಅರಿತಿರುವ ನಾಯಕ ಅವರಾಗಿದ್ದಾರೆ. ಭವಿಷ್ಯದಲ್ಲಿ ಉತ್ತಮ ನಾಯಕನಾಗಿಯೇ ಅವರು ಗುರುತಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದಾರೆ. ಅವರು ಬಹುಮುಖ ಪ್ರತಿಭೆಯ ಆಟಗಾರ’ ಎಂದರು.

‘ಕೆ.ಎಲ್. ರಾಹುಲ್ ಅವರ ಜೊತೆಗೂಡಿ ಆಡಲು ಉತ್ಸುಕನಾಗಿದ್ದೇನೆ. ನಾನು ಮತ್ತು ರಾಹುಲ್ ಮೊದಲಿನಿಂದಲೂ ಜೊತೆಯಾಗಿ ಆಡಿದ್ದೇವೆ. ಅವರು ಐಪಿಎಲ್‌ನ ಕಳೆದ ಕೆಲವು ಆವೃತ್ತಿಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಅವರ ಜೊತೆಗೂಡಿ ಆಡಲು ಸಂತಸವಾಗುತ್ತಿದೆ’ ಎಂದು ಕರುಣ್ ಹೇಳಿದರು. ಕರುಣ್ ಮತ್ತು ರಾಹುಲ್ ಕರ್ನಾಟಕ ಹಾಗೂ ಭಾರತ ತಂಡದಲ್ಲಿ ಜೊತೆ ಆಡಿದ್ದವರು.

‘ಈ ಬಾರಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ತನ್ನ ಮೊದಲ ಐಪಿಎಲ್ ಟ್ರೋಫಿ ಜಯಿಸಲಿದೆ’ ಎಂದೂ ಕರುಣ್ ವಿಶ್ವಾಸ ವ್ಯಕ್ತಪಡಿಸಿದರು.

ಕ್ಯಾಪಿಟಲ್ಸ್ ತಂಡವು 2020ರಲ್ಲಿ ರನ್ನರ್ಸ್ ಅಪ್ ಆಗಿದ್ದು ಇದುವರೆಗಿನ ಶ್ರೇಷ್ಠ ಸಾಧನೆ ಆಗಿದೆ.

ಇಂಡಿಯಾ ಮಾಸ್ಟರ್ಸ್‌ಗೆ ಕಿರೀಟ

ಐಎಂಎಲ್ ಫೈನಲ್: ವಿನಯ ಉತ್ತಮ ಬೌಲಿಂಗ್; ಅಂಬಟಿ ಅರ್ಧಶತಕ


ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್ ಗೆದ್ದ ಸಂಭ್ರಮದಲ್ಲಿ ಭಾರತೀಯ ಆಟಗಾರರು ಚಿತ್ರ: ಎಕ್ಸ್

ರಾಯಪುರ (ಪಿಟಿಐ): ದಿಗ್ಗಜ ಸಚಿನ್ ತೆಂಡೂಲ್ಕರ್ ನಾಯಕತ್ವದ ಇಂಡಿಯಾ ಮಾಸ್ಟರ್ಸ್ ತಂಡವು ಚೊಚ್ಚಲ ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಟಿ20 ಲೀಗ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು.

ಇಲ್ಲಿಯ ಶಹೀದ್ ವೀರನಾರಾಯಣ ಸಿಂಗ್ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಇಂಡಿಯಾ 6 ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ಮಾಸ್ಟರ್ಸ್ ವಿರುದ್ಧ ಜಯಿಸಿತು.

ಟಾಸ್ ಗೆದ್ದ ವಿಂಡೀಸ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ‘ದಾವಣಗೆರೆ ಎಕ್ಸ್‌ಪ್ರೆಸ್’ ಆರ್. ವಿನಯಕುಮಾರ್ (26ಕ್ಕೆ3) ಅವರ ಶಿಸ್ತಿನ ದಾಳಿಯಿಂದಾಗಿ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 148 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಡ್ವೇನ್ ಸ್ಮಿತ್ (45; 35ಎ, 4X6, 6X2) ಮತ್ತು ಅರ್ಧಶತಕ ಗಳಿಸಿದ ಲೆಂಡ್ಲ್ ಸಿಮನ್ಸ್ (57; 41ಎ, 4X5, 6X1) ಅವರು ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಪ್ಪಿಸಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡದ ಆರಂಭಿಕ ಬ್ಯಾಟರ್ ಅಂಬಟಿ ರಾಯುಡು (74; 50ಎ, 4X9, 6X3) ಅರ್ಧಶತಕ ಹೊಡೆದರು. ಇದರಿಂದಾಗಿ ತಂಡವು 17.1 ಓವರ್‌ಗಳಲ್ಲಿ 4ಕ್ಕೆ149 ರನ್ ಗಳಿಸಿತು. ನಾಯಕ ಸಚಿನ್ 18 ಎಸೆತಗಳಲ್ಲಿ 25 ರನ್ ಗಳಿಸಿದರು. 2 ಬೌಂಡರಿ, 1 ಸಿಕ್ಸರ್ ಬಾರಿಸಿದರು.

ಬೆಂಗಳೂರಿನ ಸ್ಟುವರ್ಟ್ ಬಿನ್ನಿ ಅವರು ಕೊನೆಯಲ್ಲಿ ಅಬ್ಬರಿಸಿದರು. 2 ಅಮೋಘ ಸಿಕ್ಸರ್ ಹೊಡೆದ ಅವರು ಕೇವಲ 8 ಎಸೆತಗಳಲ್ಲಿ 15 ರನ್ ಗಳಿಸಿದರು. ತಂಡವನ್ನು ಗೆಲುವಿನ ದಡ ಸೇರಿಸಿದರು.

ವಿನಯ್ ಮಿಂಚು: ವಿಂಡೀಸ್ ತಂಡದ ಬ್ಯಾಟಿಂಗ್ ಪಡೆಯು ವಿನಯ್ ದಾಳಿಗೆ ಕುಸಿಯಿತು. ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ವಿನಯ್ ಎಸೆತವನ್ನು ಹೊಡೆಯುವ ಯತ್ನದಲ್ಲಿ ಲಾರಾ ಅವರು ಪವನ್ ನೇಗಿಗೆ ಕ್ಯಾಚಿತ್ತರು. ಇದರಿಂದಾಗಿ ಜೊತೆಯಾಟ ಮುರಿಯಿತು.

ನದೀಂ, ನೇಗಿ ಮತ್ತು ಸ್ಟುವರ್ಟ್ ಬಿನ್ನಿ ಕೂಡ ಉತ್ತಮ ಬೌಲಿಂಗ್ ಮಾಡಿದರು. ಇದೆಲ್ಲದರ ನಡುವೆಯೂ ಸಿಮನ್ಸ್ ಮಿಂಚಿದರು. ಅರ್ಧಶತಕ ಹೊಡೆದರು. ವಿನಯ್ ಬೌಲಿಂಗ್‌ನಲ್ಲಿ ಸಿಮನ್ಸ್ ಕ್ಲೀನ್‌ಬೌಲ್ಡ್ ಆದರು. ಆ್ಯಷ್ಲೆ ನರ್ಸ್ ವಿಕೆಟ್ ಕೂಡ ವಿನಯ್ ಪಾಲಾಯಿತು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್ ಮಾಸ್ಟರ್ಸ್: 20 ಓವರ್‌ಗಳಲ್ಲಿ 7ಕ್ಕೆ 148 (ಡ್ವೇನ್ ಸ್ಮಿತ್ 45, ಲೆಂಡ್ಲ್ ಸಿಮನ್ಸ್ 57, ದಿನೇಶ್ ರಾಮದೀನ್ ಔಟಾಗದೇ 12, ಆರ್. ವಿನಯಕುಮಾರ್ 26ಕ್ಕೆ3, ಶಾಬಾಜ್ ನದೀಂ 12ಕ್ಕೆ2, ಪವನ್ ನೇಗಿ 30ಕ್ಕೆ1, ಸ್ಟುವರ್ಟ್ ಬಿನ್ನಿ 11ಕ್ಕೆ1) **ಇಂಡಿಯಾ ಮಾಸ್ಟರ್ಸ್:** 17.1 ಓವರ್‌ಗಳಲ್ಲಿ 4ಕ್ಕೆ149 (ಅಂಬಟಿ ರಾಯುಡು 74, ಸಚಿನ್ ತೆಂಡೂಲ್ಕರ್ 25, ಗುರುಕೀರತ್ ಸಿಂಗ್ ಮಾನ್ 14, ಯುವರಾಜ್ ಸಿಂಗ್ ಅಜೇಯ 13, ಆಷ್ಲೆ ನರ್ಸ್ 22ಕ್ಕೆ2) **ಫಲಿತಾಂಶ:** ಇಂಡಿಯಾ ಮಾಸ್ಟರ್ಸ್‌ಗೆ 6 ವಿಕೆಟ್ ಜಯ.

ಇಂಡಿಯನ್ ವೆಲ್ಸ್ ಓಪನ್: ಮೆಡ್ವೆಡೆವ್‌ಗೆ ರೂನ್ ಆಘಾತ

ಅಲ್ಕರಾಜ್‌ಗೆ ಆಘಾತ: ಫೈನಲ್‌ಗೆ ಜಾಕ್


ಬ್ರಿಟನ್‌ನ ಜಾಕ್ ಡ್ರೇಪರ್ ಆಟದ ವೈಖರಿ ಎಎಫ್‌ಪಿ ಚಿತ್ರ

ಇಂಡಿಯನ್ ವೆಲ್ಸ್ (ಎಪಿ): ಬ್ರಿಟನ್‌ನ ಯುವತಾರೆ ಜಾಕ್ ಡ್ರೇಪರ್ ಅವರು ಇಂಡಿಯನ್ ವೆಲ್ಸ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರಿಗೆ ಆಘಾತ ನೀಡಿ ಫೈನಲ್ ಪ್ರವೇಶಿಸಿದರು.

ಸೋಮವಾರ ನಡೆಯುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 13ನೇ ಶ್ರೇಯಾಂಕದ ಡ್ರೇಪರ್ ಅವರು ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಅವರನ್ನು ಎದುರಿಸಲಿದ್ದಾರೆ. 12ನೇ ಶ್ರೇಯಾಂಕದ ರೂನ್ ಕಳೆದ ಎರಡು ಆವೃತ್ತಿಗಳ ರನ್ನರ್ ಅಪ್ ಡೇನಿಯಲ್ ಮೆಡ್ವೆಡೆವ್ ಅವರನ್ನು ಹಿಮ್ಮೆಟ್ಟಿಸಿ ಫೈನಲ್ ತಲುಪಿದರು.

ಭಾನುವಾರ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ 23 ವರ್ಷ ವಯಸ್ಸಿನ ಡ್ರೇಪರ್ 6-1, 0-6, 6-4ರ ಮೂರು ಸೆಟ್‌ಗಳ ಹಣಾಹಣಿಯಲ್ಲಿ ನಾಲ್ಕು ಗ್ರ್ಯಾನ್‌ಸ್ಲಾಮ್ ಕಿರೀಟಗಳ ಒಡೆಯ ಅಲ್ಕರಾಜ್ ಅವರನ್ನು ಸೋಲಿಸಿದರು.

ಕ್ಯಾಲಿಫೋರ್ನಿಯಾ ಮರುಭೂಮಿಯಲ್ಲಿ ಎಟಿಪಿ ಮಾಸ್ಟರ್ಸ್ 1000 ಶ್ರೇಣಿಯ ಟೂರ್ನಿಯಲ್ಲಿ ಅಲ್ಕರಾಜ್ ಅವರ 16 ಪಂದ್ಯಗಳ ಗೆಲುವಿನ ಓಟಕ್ಕೆ ಡ್ರೇಪರ್ ತಡೆಯೊಡ್ಡಿದರು. ಈ ಗೆಲುವಿನೊಂದಿಗೆ ಬ್ರಿಟಿಷ್ ಆಟಗಾರ ಸೋಮವಾರ ಪ್ರಕಟವಾಗಲಿರುವ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಇದೇ ಮೊದಲ ಬಾರಿಗೆ ಅಗ್ರ 10ರಲ್ಲಿ ಸ್ಥಾನ ಪಡೆಯುವುದು ಖಚಿತವಾಗಿದೆ.

ಹ್ಯಾಟ್ರಿಕ್ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದ 21 ವರ್ಷ ವಯಸ್ಸಿನ ಅಲ್ಕರಾಜ್‌ಗೆ ನಿರಾಸೆಯಾಯಿತು. ಈ ಸಾಧನೆ ಮಾಡಿದ್ದರೆ ಯಾವುದೇ ಎಟಿಪಿ ಟೂರ್‌ಗಳಲ್ಲಿ ಸತತ ಮೂರು ಪ್ರಶಸ್ತಿ ಗೆದ್ದ ವಿಶ್ವದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಹಿರಿಮೆ ಅವರದಾಗುತ್ತಿತ್ತು.

ಜೊತೆಗೆ ಟೆನಿಸ್ ದಿಗ್ಗಜರಾದ ರೋಜರ್ ಫೆಡರರ್ ಮತ್ತು ನೊವಾಕ್ ಜೊಕೊವಿಚ್ ನಂತರ ಇಲ್ಲಿ ಹ್ಯಾಟ್ರಿಕ್ ಪ್ರಶಸ್ತಿ ಗೆಲ್ಲುವ ಅವಕಾಶವನ್ನು ಅಲ್ಕರಾಜ್ ಕಳೆದುಕೊಂಡರು. ಅವರು ಫೆಬ್ರುವರಿಯಲ್ಲಿ ರೋಟರ್‌ಡ್ಯಾಮ್‌ನಲ್ಲಿ 17 ನೇ ಎಟಿಪಿ ಟೂರ್ ಪ್ರಶಸ್ತಿ ಗೆದ್ದಿದ್ದರು.

ಡೆನ್ಮಾರ್ಕ್‌ನ 21 ವರ್ಷ ವಯಸ್ಸಿನ ರೂನ್ 7-6, 6-4ರ ನೇರ ಸೆಟ್‌ಗಳಿಂದ 29 ವರ್ಷ ವಯಸ್ಸಿನ ಮೆಡ್ವೆಡೆವ್ ಅವರನ್ನು ಮಣಿಸಿದರು. ಈ ಮೂಲಕ ರಷ್ಯಾದ ಆಟಗಾರನ ವಿರುದ್ಧ ಗೆಲುವಿನ ದಾಖಲೆಯನ್ನು 2–2 ಪಂದ್ಯಗಳಿಗೆ ಸಮ ಮಾಡಿಕೊಂಡರು.

ರೂನ್ 2022ರ ಪ್ಯಾರಿಸ್ ಮಾಸ್ಟರ್ಸ್‌ನ ಫೈನಲ್‌ನಲ್ಲಿ ಜೊಕೊವಿಚ್‌ಗೆ ಆಘಾತ ನೀಡಿ ತನ್ನ ಚೊಚ್ಚಲ ಎಟಿಪಿ ಮಾಸ್ಟರ್ಸ್ 1000 ಶ್ರೇಣಿಯ ಪ್ರಶಸ್ತಿ ಗೆದ್ದಿದ್ದರು. ನಂತರದಲ್ಲಿ ಪ್ರಶಸ್ತಿಯ ಬರ ಎದುರಿಸುತ್ತಿರುವ ಅವರು, ಇದೀಗ ಎರಡನೇ ಪ್ರಶಸ್ತಿಯ ಹೊಸ್ತಿಲಲ್ಲಿದ್ದಾರೆ.

ಕಳೆದ ಎರಡು ಆವೃತ್ತಿಗಳಲ್ಲಿ ಫೈನಲ್ ಪ್ರವೇಶಿಸಿದ್ದ ಮೆಡ್ವೆಡೆವ್ ಅಲ್ಕರಾಜ್‌ಗೆ ಮಣಿದಿದ್ದರು. ಸತತ ಮೂರನೇ ಬಾರಿ ಫೈನಲ್‌ಗೇರುವ ಕನಸು ಈಡೇರಲಿಲ್ಲ.

ವಿಶೇಷ ಒಲಿಂಪಿಕ್ಸ್: ಭಾರತಕ್ಕೆ 33 ಪದಕ

ನವದೆಹಲಿ (ಪಿಟಿಐ): ಭಾರತದ ಕ್ರೀಡಾಪಟುಗಳು ಇಟಲಿಯ ಟುರಿನ್‌ನಲ್ಲಿ ನಡೆದ ಚಳಿಗಾಲದ ವಿಶೇಷ ಒಲಿಂಪಿಕ್ ಕೂಟದ ಕೊನೆಯ ದಿನವಾದ ಶನಿವಾರ ನಾಲ್ಕು ಸ್ಪರ್ಧೆಗಳಲ್ಲಿ 12 ಪದಕಗಳನ್ನು ಕೊರಳಿಗೇರಿಸಿಕೊಂಡಿತು. ಒಟ್ಟು 33 ಪದಕಗಳೊಂದಿಗೆ ಅಭಿಯಾನವನ್ನು ಮುಗಿಸಿದರು.

ಮಾರ್ಚ್ 8ರಿಂದ ನಡೆದ ಕೂಟದಲ್ಲಿ 100 ದೇಶಗಳಿಂದ 1500ಕ್ಕೂ ಅಧಿಕ ಅಥ್ಲೀಟ್‌ಗಳು ಭಾಗವಹಿಸಿದ್ದರು. ಭಾರತದ ಕ್ರೀಡಾಪಟುಗಳು ಎಂಟು ಚಿನ್ನ, 18 ಬೆಳ್ಳಿ ಮತ್ತು ಏಳು ಕಂಚಿನ ಪದಕ ಜಯಿಸಿದರು.

ಭಾರತ ತಂಡವು ಸ್ನೋ ಶೂಯಿಂಗ್ ಮತ್ತು ಆಲ್ಪೈನ್ ಸ್ಕೀಯಿಂಗ್‌ನಲ್ಲಿ ತಲಾ 10 ಪದಕ ಹಾಗೂ ಸ್ನೋ ಬೋರ್ಡಿಂಗ್‌ನಲ್ಲಿ ಆರು ಪದಕ ಗೆದ್ದಿತು. ಶಾರ್ಟ್ ಟ್ರ್ಯಾಕ್ ಸ್ಪೀಡ್ ಸ್ಕೇಟಿಂಗ್, ಕ್ರಾಸ್ ಕಂಟ್ರಿ ಸ್ಕೀಯಿಂಗ್ ಮತ್ತು ಫ್ಲೋರ್‌ಬಾಲ್‌ಗಳಲ್ಲಿ ಕ್ರಮವಾಗಿ ನಾಲ್ಕು, ಎರಡು ಮತ್ತು ಒಂದು ಪದಕ ಜಯಿಸಿತು.

ಸ್ನೋ ಶೂಯಿಂಗ್‌ನಲ್ಲಿ ಭಾರತದ ಸ್ಪರ್ಧಿಗಳು ಕೊನೆಯ ದಿನ ನಾಲ್ಕು ಪದಕಗಳನ್ನು ಗೆದ್ದರು. 25 ಮೀಟರ್ ಸ್ನೋ ಶೂಯಿಂಗ್‌ನಲ್ಲಿ ವಾಸು ತಿವಾರಿ, ಶಾಲಿನಿ ಚೌಹಾಣ್ ಮತ್ತು ತಾನ್ಯಾ ತಲಾ ಬೆಳ್ಳಿ ಪದಕ ಗೆದ್ದರೆ, ಜಹಾಂಗೀರ್ ಕಂಚಿನ ಪದಕ ಜಯಿಸಿದರು. ಆಲ್ಪೈನ್ ಸ್ಕೀಯಿಂಗ್ ವಿಭಾಗದ ಸ್ಪರ್ಧೆಯಲ್ಲೂ ಭಾರತದ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿದರು.

ಗೆಲುವಿನ ಶ್ರೇಯ ಬೌಲರ್‌ಗಳಿಗೆ ಅರ್ಪಿಸಿದ ಹರ್ಮನ್


ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯ ಸಹಮಾಲೀಕರಾದ ನೀತಾ ಅಂಬಾನಿ ಅವರು ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಸಹ ಆಟಗಾರ್ತಿ ಜಿಂತಿಮಣಿ ಕಲಿತಾ ಅವರೊಂದಿಗೆ ಸಂಭ್ರಮಿಸಿದರು

ಮುಂಬೈ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್‌ನ ಮೂರನೇ ಆವೃತ್ತಿಯ ಫೈನಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕಿದ್ದ 150 ರನ್‌ಗಳ ಸಾಧಾರಣ ಗುರಿಯನ್ನು ಸಮರ್ಥವಾಗಿ ತಡೆದಿದ್ದ ಕ್ಕಾಗಿ ಮುಂಬೈ ಇಂಡಿಯನ್ಸ್ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಬೌಲರ್‌ಗಳ ಪ್ರದರ್ಶನವನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.

ಹರ್ಮನ್‌ಪ್ರೀತ್ (66;44ಎ) ಅವರ ಆಕರ್ಷಕ ಅರ್ಧಶತಕದ ಬಲದಿಂದ ಮುಂಬೈ ತಂಡವು 7 ವಿಕೆಟ್‌ಗೆ 149 ರನ್ ಗಳಿಸಿತ್ತು. ನಂತರ ಬೌಲರ್‌ಗಳು ಸಾಂಘಿಕ ದಾಳಿ ನಡೆಸಿ ಕ್ಯಾಪಿಟಲ್ಸ್ ತಂಡ ವನ್ನು 9 ವಿಕೆಟ್‌ಗೆ 141 ರನ್‌ಗಳಿಗೆ ಕಟ್ಟಿಹಾಕಿದ್ದರು. ನಾಟ್ ಶಿವರ್ ಬ್ರಂಟ್ (30ಕ್ಕೆ 3), ಅಮೆಲಿಯಾ ಕೆರ್ (25ಕ್ಕೆ 2) ಮತ್ತು ಶಬ್ನಿಂ ಇಸ್ಮಾಯಿಲ್ (15ಕ್ಕೆ 1) ಅವರು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

‘ಲೆಕ್ಕಾಚಾರದಂತೆ ರನ್ ಗಳಿಸಲು ನಮಗೆ ಸಾಧ್ಯವಾಗಲಿಲ್ಲ. ನಾವು ಗಳಿಸಿದ 149 ರನ್ ಉತ್ತಮ ಮೊತ್ತವಾಗಿರಲಿಲ್ಲ. ನಮ್ಮ ಬೌಲರ್‌ಗಳು ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿಕೊಂಡು ದಾಳಿ ನಡೆಸಿದರು. ಈ ಗೆಲುವಿನ ಸಂಪೂರ್ಣ ಶ್ರೇಯ ಬೌಲರ್‌ಗಳಿಗೆ ಸಲ್ಲಬೇಕು’ ಎಂದು ಪಂದ್ಯದ ನಂತರ ಟ್ರೋಫಿ ಪ್ರದಾನದ ವೇಳೆ ಪ್ರತಿಕ್ರಿಯಿಸಿದರು.

‘ಪವರ್‌ಪ್ಲೇ ಅವಧಿಯಲ್ಲೇ ತಂಡಕ್ಕೆ ಮೇಲುಗೈ ಒದಗಿಸುವ ಗುರಿ ಬೌಲರ್‌ಗಳ ಮುಂದಿತ್ತು. ಅದರಂತೆ ಶಬ್ನಿಂ ಮತ್ತು ಬ್ರಂಟ್ ಅವರು ಪ್ರಮುಖ ಎರಡು ವಿಕೆಟ್ ಪಡೆದು ಎದುರಾಳಿ ತಂಡಕ್ಕೆ ಆರಂಭದಲ್ಲೇ ಪೆಟ್ಟು ನೀಡಿದರು. ತಂಡದ ಪ್ರತಿಯೊಬ್ಬ ಬೌಲರ್‌ಗಳ ಆಟದ ಬಗ್ಗೆ ನಿಜವಾಗಿಯೂ ಸಂತೋಷವಾಗಿದೆ’ ಎಂದು ಹೇಳಿದರು.

ಮುಂಬೈ ತಂಡವು 8 ರನ್‌ಗಳಿಂದ ಡೆಲ್ಲಿ ತಂಡವನ್ನು ಮಣಿಸಿ ಎರಡನೇ ಬಾರಿ ಕಿರೀಟಕ್ಕೆ ಮುತ್ತಿಕ್ಕಿತು. 2023ರ ಮೊದಲ ಆವೃತ್ತಿಯಲ್ಲೂ ಮುಂಬೈ ಚಾಂಪಿಯನ್ ಆಗಿತ್ತು. ಡೆಲ್ಲಿ ತಂಡವು ಸತತ ಮೂರನೇ ಬಾರಿ ಫೈನಲ್‌ನಲ್ಲಿ ಮುಗ್ಗರಿಸಿತು. ಹರ್ಮನ್‌ಪ್ರೀತ್ ಅವರು ಪಂದ್ಯದ ಆಟಗಾರ್ತಿ ಗೌರವಕ್ಕೆ ಪಾತ್ರವಾದರು. ಮುಂಬೈನ ಅಮೆಲಿಯಾ ಕೆರ್ (18 ವಿಕೆಟ್) ಮತ್ತು ನಾಟ್ ಶಿವರ್ ಬ್ರಂಟ್ (523 ರನ್) ಕ್ರಮವಾಗಿ ಪರ್ಪಲ್ ಕ್ಯಾಪ್ ಮತ್ತು ಆರೇಂಜ್ ಕ್ಯಾಪ್ ಧರಿಸಿದರು.

ಬಿಸಿಸಿಐ ವೈದ್ಯಕೀಯ ತಂಡದ ಮುಖ್ಯಸ್ಥ ಪಟೇಲ್ ರಾಜೀನಾಮೆ


ನಿತಿನ್ ಪಟೇಲ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವೈದ್ಯಕೀಯ ಮತ್ತು ಕ್ರೀಡಾ ವಿಜ್ಞಾನ ತಂಡದ ಮುಖ್ಯಸ್ಥ ನಿತಿನ್ ಪಟೇಲ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಮೂರು ವರ್ಷಗಳ ಯಶಸ್ವಿ ಕಾರ್ಯನಿರ್ವಹಣೆ ಮಾಡಿದ್ದಾರೆ.

ಬಿಸಿಸಿಐ ಈಚೆಗಷ್ಟೇ ಬೆಂಗಳೂರಿನಲ್ಲಿ ಶ್ರೇಷ್ಠತಾ ಕೇಂದ್ರ (ಸಿಒಇ) ವನ್ನು ಉದ್ಘಾಟಿಸಿತ್ತು. ಇದೀಗ ಇಲ್ಲಿಯ ಸಿಬ್ಬಂದಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡುವತ್ತ ಕಾರ್ಯೋನ್ಮುಖವಾಗಿದೆ. ರಾಜೀನಾಮೆಯ ಕುರಿತು ಪ್ರತಿಕ್ರಿಯೆಗಾಗಿ ಪಟೇಲ್ ಅವರನ್ನು ಸುದ್ದಿಸಂಸ್ಥೆಯು ಸಂಪರ್ಕಿಸಿತ್ತು. ಆದರೆ ಅವರು ಲಭ್ಯರಾಗಲಿಲ್ಲ.

‘ನಿತಿನ್ ಅವರು ರಾಜೀನಾಮೆ ನೀಡಿರುವುದು ನಿಜ. ಅವರು ತಮ್ಮ ಕರ್ತವ್ಯದ ಅವಧಿಯಲ್ಲಿ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಸಿಒಇಯಲ್ಲಿ (ಈ ಮೊದಲು ಎನ್‌ಸಿಎ) ಕ್ರೀಡಾ ವಿಜ್ಞಾನ ಮತ್ತು ವೈದ್ಯಕೀಯ ತಂಡವು ಬೆಳೆಯುವಲ್ಲಿ ಅವರೇ ಪ್ರಮುಖ ಕಾರಣರಾಗಿದ್ದರು. ಅವರು ಕಾರ್ಯನಿರ್ವಹಿಸಿದ ಅವಧಿಯಲ್ಲಿ ಗಾಯಗೊಂಡು ಬಂದಿದ್ದ ಆಟಗಾರರೆಲ್ಲರೂ ಶೇ. 100ರಷ್ಟು ಫಿಟ್ ಆಗಿ ತಂಡಕ್ಕೆ ಮರಳಿದ್ದಾರೆ. ಜೊತೆಗೆ ಉತ್ತಮವಾಗಿ ಆಡಿದ್ದಾರೆ. ಪಟೇಲ್ ಅವರ ಕಾರ್ಯಕ್ಷಮತೆ ಆ ರೀತಿಯದಾಗಿತ್ತು. ಆದರೆ ಪಟೇಲ್ ಅವರ ಕುಟುಂಬವು ವಿದೇಶದಲ್ಲಿ ನೆಲೆಸಿದೆ. ಸಿಒಇಯಲ್ಲಿ ವರ್ಷಪೂರ್ತಿ ಕಾರ್ಯನಿರ್ವಹಿಸುವುದು ಅವರಿಗೆ ಕಷ್ಟವಾಗಿತ್ತು. ಆದ್ದರಿಂದ ಅವರು ರಾಜೀನಾಮೆ ನಿರ್ಧಾರ ತೆಗೆದುಕೊಂಡಿರಬಹುದು’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಪಟೇಲ್ ಅವರ ಚಿಕಿತ್ಸೆ ಮತ್ತು ಮಾರ್ಗದರ್ಶನದಲ್ಲಿ ಭಾರತ ತಂಡದ ವೇಗಿಗಳಾದ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಬ್ಯಾಟರ್ ಕೆ.ಎಲ್. ರಾಹುಲ್, ಸ್ಪಿನ್ನರ್ ಕುಲದೀಪ್ ಯಾದವ್ ಅವರು ಗಾಯದಿಂದ ಚೇತರಿಸಿಕೊಂಡು ಆಟಕ್ಕೆ ಮರಳಿದ್ದರು.

ಈ ವರ್ಷದ ಕೊನೆಯಲ್ಲಿ ಎನ್‌ಸಿಎ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರ ಕಾರ್ಯಾವಧಿಯೂ ಮುಕ್ತಾಯಗೊಳ್ಳಲಿದೆ. 2027ರ ವಿಶ್ವಕಪ್ ಟೂರ್ನಿಯವರೆಗೂ ಅವರನ್ನು ಮುಂದುವರಿಸಲು ಬಿಸಿಸಿಐ ಚಿಂತನೆ ನಡೆಸಿದೆ ಎನ್ನಲಾಗಿದೆ.

ಜೆಮಿಸನ್ ದಾಳಿಗೆ ಪಾಕ್ ದೂಳೀಪಟ


ನ್ಯೂಜಿಲೆಂಡ್ ತಂಡದ ವೇಗಿ ಕೈಲ್ ಜೆಮಿಸನ್ –ಎಎಫ್‌ಪಿ ಚಿತ್ರ

ಕ್ರೈಸ್ಟ್‌ಚರ್ಚ್(ಎಪಿ): ವೇಗಿ ಕೈಲ್ ಜೆಮಿಸನ್ ಅಮೋಘ ಬೌಲಿಂಗ್ ಬಲದಿಂದ ನ್ಯೂಜಿಲೆಂಡ್ ತಂಡವು ಭಾನುವಾರ ಇಲ್ಲಿ ನಡೆದ ಪಾಕಿಸ್ತಾನ ಎದುರಿನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು.

ಹೆಗ್ಲೆ ಓವಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ಕಿವೀಸ್ ಬಳಗವು ಪಾಕಿಸ್ತಾನ ತಂಡವನ್ನು ಕೇವಲ 91 ರನ್‌ಗಳಿಗೆ ನಿಯಂತ್ರಿಸಿತು. ಜೆಮಿಸನ್ (4–1–8–3) ಅಮೋಘ ಬೌಲಿಂಗ್ ಮಾಡಿದರು. ಅವರೊಂದಿಗೆ ಮಿಂಚಿದ ಜೇಕಬ್ ಡಫಿ (3.4–0–14–4) ಮತ್ತು ಸ್ಪಿನ್ನರ್ ಈಶ್ ಸೋಧಿ (27ಕ್ಕೆ2) ಪಾಕ್ ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು. ಪಾಕ್ ತಂಡದ ಬ್ಯಾಟರ್ ಖುಷ್‌ದಿಲ್ ಅವರು 30 ಎಸೆತಗಳಲ್ಲಿ ಗಳಿಸಿದ 32 ರನ್‌ಗಳು ಪಂದ್ಯದಲ್ಲಿ ದಾಖಲಾದ ವೈಯಕ್ತಿಕ ಶ್ರೇಷ್ಠ ಸ್ಕೋರ್. ಅವರು 3 ಸಿಕ್ಸರ್‌ಗಳನ್ನು ಸಿಡಿಸಿದರು. ಆದರೆ ಉಳಿದ ಬ್ಯಾಟರ್‌ಗಳು ಕಿವೀಸ್ ದಾಳಿಗೆ ತಾಳಲಿಲ್ಲ.

ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ತಂಡವು 10.1 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು 92 ರನ್ ಗಳಿಸಿ ಜಯಿಸಿತು. ಟಿಮ್ ಸೀಫರ್ಟ್ (44; 29ಎ, 4X7, 6X1) ಮತ್ತು ಫಿನ್ ಅಲೆನ್ (ಔಟಾಗದೇ 29; 17ಎ, 4X2, 6X2) ಮೊದಲ ವಿಕೆಟ್ ಜೊತೆಯಾಟದಲ್ಲಿ 53 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 18.4 ಓವರ್‌ಗಳಲ್ಲಿ 91 (ಸಲ್ಮಾನ್ ಅಘಾ 18, ಖುಷ್‌ದಿಲ್ ಖಾನ್ 32, ಜಹಾಂದಾದ್ ಖಾನ್ 17, ಕೈಲ್ ಜೆಮಿಸನ್ 8ಕ್ಕೆ3, ಜೇಕಬ್ ಡಫಿ 14ಕ್ಕೆ4, ಈಶ್ ಸೋಧಿ 27ಕ್ಕೆ2) ನ್ಯೂಜಿಲೆಂಡ್: 10.1 ಓವರ್‌ಗಳಲ್ಲಿ 1 ವಿಕೆಟ್‌ಗೆ 92 (ಟಿಮ್ ಸೀಫರ್ಟ್ 44, ಫಿನ್ ಅಲೆನ್ 29, ಟಿಮ್ ರಾಬಿನ್ಸನ್ ಔಟಾಗದೇ 18, ಅಬ್ರಾರ್ ಅಹಮದ್ 15ಕ್ಕೆ1) ಫಲಿತಾಂಶ: ನ್ಯೂಜಿಲೆಂಡ್ ತಂಡಕ್ಕೆ 9 ವಿಕೆಟ್‌ಗಳ ಜಯ ಹಾಗೂ ಸರಣಿಯಲ್ಲಿ 1-0 ಮುನ್ನಡೆ. ಪಂದ್ಯಶ್ರೇಷ್ಠ: ಕೈಲ್ ಜೆಮಿಸನ್.

ಸೆಪಕ್ ಟಕ್ರಾ ವಿಶ್ವಕಪ್ ಮಂಜುನಾಥ ರೆಫರಿ



ಹುಬ್ಬಳ್ಳಿ: ಇಲ್ಲಿಯ ಪಿ. ಮಂಜುನಾಥ ಅವರು ಪಟ್ನಾದಲ್ಲಿ ಇದೇ ತಿಂಗಳು ನಡೆಯಲಿರುವ ಸೆಪಕ್ ಟಕ್ರಾ ವಿಶ್ವಕಪ್ ಟೂರ್ನಿಯಲ್ಲಿ ರೆಫರಿಯಾಗಿ ಕಾರ್ಯ ನಿರ್ವಹಿಸುವರು. ಕರ್ನಾಟಕ ಅಮೆಚೂರ್ ಸೆಪಕ್ ಟಕ್ರಾ ಸಂಸ್ಥೆಯ ಜಂಟಿ ಕಾರ್ಯದರ್ಶಿಯಾಗಿರುವ ಮಂಜುನಾಥ, ವಿಶ್ವಕಪ್ ಟೂರ್ನಿಯಲ್ಲಿ ನಾಲ್ಕನೇ ಬಾರಿಗೆ ರೆಫರಿಯಾಗಿ ಭಾಗವಹಿಸುತ್ತಿದ್ದಾರೆ. ಮಾರ್ಚ್ 20ರಿಂದ 25ರವರೆಗೆ ಪಟ್ನಾದ ಪಾಟಲೀಪುತ್ರ ಕ್ರೀಡಾಂಗಣದಲ್ಲಿ ಟೂರ್ನಿ ನಡೆಯಲಿದೆ.

ಸೆಮಿಗೆ ಕಿಕ್‌ಸ್ಟಾರ್ಟ್ ಎಫ್‌ಸಿ

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ 15 ವರ್ಷದೊಳಗಿನವರ ಟೈಯರ್ 1ರ ಯೂತ್ ಪ್ರೀಮಿಯರ್ ಲೀಗ್‌ನಲ್ಲಿ ಭಾನುವಾರ ಸಾಮುರಾಯ್ ತಂಡದ ವಿರುದ್ಧ 6–0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿ ಸೆಮಿಫೈನಲ್ ಪ್ರವೇಶಿಸಿತು.

ಅಶೋಕ ನಗರದ ಬೆಂಗಳೂರು ಫುಟ್ಬಾಲ್ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ ಸುಲಭ ಗೆಲುವು ಸಾಧಿಸಿತು.ಇನ್ನುಳಿದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಯಂಗ್ ಬ್ಲೂ ಎಲೈಟ್ ಎಫ್‌ಸಿ ತಂಡ 3–0ರಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು. ಬಿಬಿಎಫ್‌ಎಸ್ ಬೆಂಗಳೂರು ತಂಡ 5–2 ಗೋಲುಗಳಿಂದ ರೂಟ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಆಲ್ಕಮಿ ಐಎಫ್‌ಎ ಇಗ್ನಿಸ್ ತಂಡ 8–0 ಗೋಲುಗಳಿಂದ ರಾಮನ್ ಸ್ಪೋರ್ಟ್ಸ್ ಅಕಾಡೆಮಿ ತಂಡವನ್ನು ಸೋಲಿಸಿತು.

ಬ್ಯಾಸ್ಕೆಟ್‌ಬಾಲ್: ಬೆಂಗಳೂರು ಸ್ಪೋರ್ಟಿಂಗ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಯಿ ಸಂತೋಷ್ ಅವರ ಆಟದ ಬಲದಿಂದ ಬೆಂಗಳೂರು ಸ್ಪೋರ್ಟಿಂಗ್ ತಂಡವು ರಾಜ್ಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ರೋಚಕ ಹಣಾಹಣಿಯಲ್ಲಿ 23–21 ಅಂಕಗಳಿಂದ ಓರಿಯನ್ಸ್ ಬಿ.ಸಿ ತಂಡವನ್ನು ಮಣಿಸಿತು.

ಬಸವನಗುಡಿಯ ಎಂ.ಎನ್.ಕೆ ರಾವ್ ಪಾರ್ಕ್‌ನ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಎರಡನೇ ದಿನವಾದ ಭಾನುವಾರ ಬಾಲಕರ ವಿಭಾಗದಲ್ಲಿ ಸ್ಪೋರ್ಟಿಂಗ್ ತಂಡವು ಮಧ್ಯಂತರದ ವೇಳೆಗೆ 9–10ರಿಂದ ಹಿನ್ನಡೆಯಲ್ಲಿತ್ತು. ನಂತರ ಚುರುಕಿನ ಆಟವಾಡಿ ಮೇಲುಗೈ ಸಾಧಿಸಿತು. ಸಾಯಿ ಸಂತೋಷ್ 10 ಅಂಕ ಗಳಿಸಿದರೆ, ಓರಿಯನ್ಸ್‌ನ ರಾಘವ್ 13 ಪಾಯಿಂಟ್ಸ್ ಕಲೆ ಹಾಕಿದರು.



ಬಾಲಕಿಯರ ವಿಭಾಗದಲ್ಲಿ ಆತಿಥೇಯ ಎಂ.ಎನ್.ಕೆ. ರಾವ್ ಬಿ.ಸಿ ತಂಡವು ಶ್ರೀನಿಧಿ (18) ಮತ್ತು ಹಿಯಾ ಜೈನ್ (10) ಅವರ ಆಟದ ನೆರವಿನಿಂದ 43–32ರಿಂದ ಎಚ್‌ಬಿಆರ್ ಬಿ.ಸಿ ತಂಡವನ್ನು ಸೋಲಿಸಿತು. ಎಚ್‌ಬಿಆರ್ ತಂಡದ ದಿಯಾ 17 ಅಂಕ ಗಳಿಸಿದರು.

ಬಾಲಕರ ಫಲಿತಾಂಶ: ಮೌಂಟ್ಸ್ ಬಿ.ಸಿ (ದಕ್ಷಾ 10) 38–8ರಿಂದ ಬಿಸಿವೈಎ ಬಿ.ಸಿ ವಿರುದ್ಧ; ಕೋಲಾರ ಜಿಲ್ಲೆ (ವಿಶಾಲ್ 10, ಕೃಷಿ 11) 46–7ರಿಂದ ಯಂಗ್ ಬುಲ್ಸ್ ವಿರುದ್ಧ; ವೈಎಂಎಂಎ ಬಿ.ಸಿ (ಶಂಕರ್ 39) 57–23ರಿಂದ ಧಾರವಾಡ ಜಿಲ್ಲೆ ಎ ವಿರುದ್ಧ; ಎ.ವಿ. ಬ್ಯಾಸ್ಕೆಟ್‌ಬಾಲ್ ಕ್ಲಬ್ (ಶ್ರೀಕರ 12) 32–10ರಿಂದ ರಾಜ್‌ಮಹಲ್ ಬಿ.ಸಿ ವಿರುದ್ಧ; ವಿಮಾನಪುರ ಬಿ.ಸಿ 41–22ರಿಂದ ಹೊಸಕೋಟೆ ಬಿ.ಸಿ ವಿರುದ್ಧ ಜಯ ಸಾಧಿಸಿದವು.

ಎಚ್‌ಬಿಆರ್ ಬಿ.ಸಿ (ರಿಶಿತ್ ಬಿ 13) 33–8ರಿಂದ ನೆಟ್ಟಕಲ್ಲಪ್ಪ ಬಿ.ಸಿ ವಿರುದ್ಧ; ಮೈಸೂರು ಜಿಲ್ಲೆ ಎ (ಕುಶಾಲ್ ಸಿಂಗ್ 23) 47–24ರಿಂದ ವಿವೇಕ್ಸ್ ಎಸ್.ಸಿ ವಿರುದ್ಧ; ಕೋರಮಂಗಲ ಬಿ.ಸಿ (ಅಚ್ಯುತ್ 16) 70–28ರಿಂದ ಜೆಎಸ್‌ಸಿ (ಜ್ಯೇಷ್ಠಾ 19) ವಿರುದ್ಧ; ಎಂಸಿಎಚ್‌ಎಸ್ ಬಿ.ಸಿ (ಪಾರಿತೋಷ್ 18) 56–32ರಿಂದ ಧಾರವಾಡ ಜಿಲ್ಲೆ ಬಿ (ಪ್ರೀತಂ 10) ವಿರುದ್ಧ ಗೆಲುವು ಸಾಧಿಸಿದವು.

ಬಾಲಕಿಯರ ಫಲಿತಾಂಶ: ವಿವೇಕ್ಸ್ ಬಿ.ಸಿ (ರುತ್ 15, ಆಧ್ಯಾ 10) 40–12ರಿಂದ ಕೋರಮಂಗಲ ಬಿ.ಸಿ ಎದುರು; ಜೆಎಸ್‌ಸಿ 27–16ರಿಂದ ದಕ್ಷಿಣ ಕನ್ನಡ ಜಿಲ್ಲೆ ಎದುರು; ಬಿಸಿವೈಎ (ಕೃಷಿ 10) 24–7 ಧಾರವಾಡ ಜಿಲ್ಲೆ ಎ ಎದುರು; ಪಿಪಿಸಿ (ನಿತ್ಯಾ 11) 44–29ರಿಂದ ಮೈಸೂರು ಜಿಲ್ಲೆ ಬಿ ಎದುರು; ಧಾರವಾಡ ಜಿಲ್ಲೆ ಬಿ 20–11ರಿಂದ ಓರಿಯನ್ಸ್ ಬಿ.ಸಿ ಎದುರು; ಯಂಗ್ ಓರಿಯನ್ಸ್ ಬಿ.ಸಿ (ಲೀನ್ನಾ 13) 33–12ರಿಂದ ಅಪ್ಪಯ್ಯ ಬಿ.ಸಿ ಎದುರು; ಮೈಸೂರು ಜಿಲ್ಲೆ ಎ (ಆಂಚಲ್ 21) 41-15ರಿಂದ ಸದರ್ನ್ ಬ್ಲೂಸ್ ಎದುರು ಜಯ ಸಾಧಿಸಿದವು.